ಕರ್ನಾಟಕ
# ಸ್ಕೌಟ್ ಮತ್ತು ಗೈಡ್
ಮಾಸ ಪತ್ರಿಕೆ

Karnataka
# Scout & Guide
Monthly Magazine

| Vol -66 | Issue-07 | July 2025 | Pages: 32 | Annual Subscription: ₹ 200/- |
|---|---|---|---|---|
| ಸಂಪುಟ: 66 | ಸಂಚಿಕೆ: 07 | ಜುಲೈ 2025 | ಪುಟಗಳು: 32 | ವಾರ್ಷಿಕ ಚಂದ ರೂ. 200/- |



## Photos of Rashtrapati Award Ceremony held at Rashtrapati Bhavan New Delhi on 22nd July 2025





22 ಜುಲೈ 2025ರಂದು ನವದೆಹಲಿಯ ರಾಷ್ಟ್ರಪತಿ ಭವನದ ಗೋದಾವರಿ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ
ಭಾರತದ ಗೌರವಾನ್ವಿತ ರಾಷ್ಟ್ರಪತಿಗಳಾದ **ಶ್ರೀಮತಿ ದ್ರೌಪದಿ ಮುರ್ಮುರವರು**
ಸ್ಕೌಟ್ಸ್-ಗೈಡ್ಸ್ ಹಾಗೂ ರೋವರ್ಸ್-ರೇಂಜರ್ಸ್‌ಗಳಿಗೆ 'ರಾಷ್ಟ್ರಪತಿ ಅವಾರ್ಡ್' ಪ್ರಶಸ್ತಿಗಳನ್ನು ಪ್ರದಾನ ಮಾಡಿದರು.
ಈ ಸಂದರ್ಭದಲ್ಲಿ ರಾಷ್ಟ್ರೀಯ ಸಂಸ್ಥೆ ಅಧ್ಯಕ್ಷರಾದ ಡಾ. ಅನಿಲ್‌ಕುಮಾರ್ ಜೈನ್,
ರಾಷ್ಟ್ರೀಯ ಮುಖ್ಯ ಆಯುಕ್ತರಾದ ಡಾ. ಕೆ.ಕೆ. ಖಂಡೇಲ್‌ವಾಲ್, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳು, ಪ್ರೆಸಿಡೆಂಟ್ ಇನ್‌ಕೌನ್ಸಿಲ್
ಮಾಜಿ ಸಚಿವರು, ಕರ್ನಾಟಕ ಮತ್ತು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ,
ಹೆಚ್ಚುವರಿ ಮುಖ್ಯ ರಾಷ್ಟ್ರೀಯ ಆಯುಕ್ತರು ಹಾಗು ರಾಜ್ಯ ಆಯುಕ್ತರು(ಸ್ಕೌಟ್ಸ್) ಶ್ರೀ ಎಂ.ಎ. ಖಾಲಿದ್
ಮತ್ತು ರಾಷ್ಟ್ರೀಯ ಹಾಗು ವಿವಿಧ ರಾಜ್ಯ ಸಂಸ್ಥೆಗಳ ಪದಾಧಿಕಾರಿಗಳು, ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್‌ಗಳು ಭಾಗವಹಿಸಿದ್ದರು.



ಜುಲೈ 23 ರಂದು ಬೆಂಗಳೂರಿನ ರಾಜಭವನದಲ್ಲಿ ಕರ್ನಾಟಕ ರಾಜ್ಯದ ಗೌರವಾನ್ವಿತ ರಾಜ್ಯಪಾಲರು ಹಾಗೂ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಸಂಸ್ಥೆಯ ಪೋಷಕರಾದ ಶ್ರೀ ಥಾವರ್‌ಚಂದ್ ಗೆಹ್ಲೋಟ್‌ರವರು '2025–26ನೇ ಸಾಲಿನ ಕಾರ್ಯಕ್ರಮಗಳ ಪುಸ್ತಕ' ಬಿಡುಗಡೆಗೊಳಿಸಿ ಸ್ಕೌಟ್ಸ್–ಗೈಡ್ಸ್ ಚಟುವಟಿಕೆಗಳು ಮತ್ತು ಕಾರ್ಯಕ್ರಮಗಳಿಗೆ ಶುಭ ಹಾರೈಸಿದರು. ಈ ಸಂದರ್ಭದಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್ ಸಿಂಧ್ಯರವರು ಸಂಸ್ಥೆಯಲ್ಲಿ ಉತ್ತಮ ಸೇವೆ ಸಲ್ಲಿಸಿದ ಹಿರಿಯ ಸ್ಕೌಟರ್ಸ್–ಗೈಡರ್ಸ್‌ಗಳ ಅಭಿನಂದನಾ ಸಮಾರಂಭದ ಬಗ್ಗೆ ಚರ್ಚಿಸಿದರು. ಶ್ರೀ ಎಂ. ಪ್ರಭಾಕರ್ ಭಟ್, ಶ್ರೀಮತಿ ಮಂಜುಳಾ. ಸಿ, ಶ್ರೀಮತಿ ಕೆ.ವಿ ಶಾಮಲ, ಶ್ರೀ ಕೆ.ಹೆಚ್ ಜಯರಾಮಯ್ಯ ಉಪಸ್ಥಿತರಿದ್ದರು.




ಜುಲೈ 16 ರಂದು ಬಾಗಲಕೋಟೆ ಜಿಲ್ಲೆಯ ಶಾಲಾ ಶಿಕ್ಷಣ ಇಲಾಖೆ ಹಾಗೂ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆಗಳ **'ಸಮಾಲೋಚನಾ ಸಭೆ'ಯು,** ಮಾಜಿ ಸಚಿವರು ಹಾಗೂ ಜಿಲ್ಲಾ ಸಂಸ್ಥೆ ಅಧ್ಯಕ್ಷರಾದ ಶ್ರೀ ಎಸ್. ಆರ್. ಪಾಟೀಲ್ ಮತ್ತು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿತ್ತು. ಇದೇ ಸಂದರ್ಭದಲ್ಲಿ ರಾಜ್ಯ ಸಂಸ್ಥೆಯಿಂದ ಮುದ್ರಿಸಿದ '2025–26ನೇ ಸಾಲಿನ ಕಾರ್ಯಕ್ರಮಗಳ ಪುಸ್ತಕ'ವನ್ನು ಬಿಡುಗಡೆಗೊಳಿಸಿದರು. ಕಾರ್ಯಕ್ರಮದಲ್ಲಿ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರಾದ ಶ್ರೀ ಹೆಚ್.ಜಿ. ಮಿರ್ಜಿ, ಜಿಲ್ಲಾ ಸಂಸ್ಥೆ ಉಪಾಧ್ಯಕ್ಷರಾದ ಶ್ರೀ ಜಿ.ಎನ್. ಪಾಟೀಲ್, ಜಿಲ್ಲಾ ಕೋಶಾಧಿಕಾರಿಗಳಾದ ಶ್ರೀ ವೈ.ಎಮ್. ಬೆಂಡಿಗೇರಿ ರಾಜ್ಯ ಸಂಘಟನಾ ಆಯುಕ್ತರಾದ ಶ್ರೀಮತಿ ಮಂಜುಳಾ. ಸಿ, ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಎಸ್.ಎಸ್. ದಳವಾಯಿ ಇತರ ಜಿಲ್ಲಾ ಹಾಗೂ ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

**ಪೋಷಕರು**

ಪಿ.ಜಿ.ಆರ್. ಸಿಂಧ್ಯ

**ಗೌರವ ಅಧ್ಯಕ್ಷರು**

ಡಾ. ಗೊ.ರು. ಚನ್ನಬಸಪ್ಪ

**ಅಧ್ಯಕ್ಷರು**

ಕೊಂಡಜ್ಜಿ ಬಿ. ಷಣ್ಮುಖಪ್ಪ

**ಉಪಾಧ್ಯಕ್ಷರು**

ಡಾ. ಎಂ.ಕೆ. ಶ್ರೀಧರ್

**ಸಂಪಾದಕರು**

ಕೆ. ಗಂಗಪ್ಪಗೌಡ

**ಸಹಸಂಪಾದಕರು**

ಎನ್. ಶ್ರೀನಿವಾಸನ್

**ಸದಸ್ಯರು**

ಮೋಹನ್ ಕೊಂಡಜ್ಜಿ

ಸಿ.ಪಿ. ಪರಮೇಶ್ವರ

ಎಂ.ಎನ್. ಷಡಕ್ಷರಿ

ಸಿ.ವಿ. ತಿರುಮಲರಾವ್

ಡಾ. ಮುಕ್ತ ಕಾಗಲೆ

ಸಂಚಿಕೆಯ ವಾರ್ಷಿಕ ಚಂದಾ ರೂ. 200/-
ವಿದ್ಯಾಸಂಸ್ಥೆ ಹಾಗೂ ಸಂಘ-ಸಂಸ್ಥೆಗಳಿಗೆ
ವಾರ್ಷಿಕ ಚಂದಾ ರೂ. 200/-

ಚಂದಾಹಣವನ್ನು
ಸಂಪಾದಕರು, ಕರ್ನಾಟಕ ಸ್ಕೌಟ್ ಮತ್ತು ಗೈಡ್ ಮಾಸಪತ್ರಿಕೆ
ರಾಜ್ಯ ಕೇಂದ್ರ ಕಛೇರಿ, ಶಾಂತಿಗೃಹ
#39, ಅರಮನೆ ರಸ್ತೆ, ಬೆಂಗಳೂರು - 560 001
ಇಲ್ಲಿಗೆ ಕಳುಹಿಸಲು ಕೋರಿದೆ.

# ಕರ್ನಾಟಕ ಸ್ಕೌಟ್ ಮತ್ತು ಗೈಡ್ ಮಾಸ ಪತ್ರಿಕೆ

# KARNATAKA Scout & Guide

MONTHLY NEWS MAGAZINE

Vol: 66 Issue: 07 July 2025

## ಒಳಪುಟಗಳಲ್ಲಿ...


ರಾಜ್ಯ ಮುಖ್ಯ ಆಯುಕ್ತರ ನುಡಿ ...04

ಆಗಸ್ಟ್ 2025ರ ಕಾರ್ಯಕ್ರಮಗಳು ಮತ್ತು ತರಬೇತಿಗಳು ...05

ರಾಜ್ಯ ಸಂಸ್ಥೆಯಿಂದ ಜಿಲ್ಲೆಗಳಲ್ಲಿ ನಡೆದ ವಿವಿಧ ಕಾರ್ಯಕ್ರಮಗಳು ...06

ಸಂಪಾದಕೀಯ ...08

ರೋವರ್ ಸ್ಕೌಟ್ ಲೀಡರ್ಸ್ ಮತ್ತು ರೇಂಜರ್ ಲೀಡರ್ಸ್‌ಗಳ ಮೂಲ ಮತ್ತು ಮುಂದುವರೆದ ತರಬೇತಿ ಹಾಗೂ ಸ್ಕೌಟ್ ಮಾಸ್ಟರ್ಸ್ ಮತ್ತು ಗೈಡ್ ಕ್ಯಾಪ್ಟನ್ಸ್‌ಗಳ ಮುಂದುವರೆದ ತರಬೇತಿ ಶಿಬಿರಗಳು ...09

ರಾಜ್ಯ ಮಟ್ಟದಿಂದ ಆಯೋಜಿಸಿದ್ದ ವಿಭಾಗೀಯ ಮಟ್ಟದ ಕಬ್ ಮಾಸ್ಟರ್ಸ್, ಸ್ಕೌಟ್ ಮಾಸ್ಟರ್ಸ್, ಫ್ಲಾಕ್ ಲೀಡರ್ಸ್ ಮತ್ತು ಗೈಡ್ ಕ್ಯಾಪ್ಟನ್ಸ್‌ಗಳ ಮುಂದುವರೆದ ತರಬೇತಿ ಶಿಬಿರಗಳು ...10

ಜಿಲ್ಲಾ ವಾರ್ತೆಗಳು ...13

ಶ್ರದ್ಧಾಂಜಲಿ ...30


## ಓದುಗರ ಗಮನಕ್ಕೆ

ಸಹೃದಯ ಓದುಗರೇ,

ಸ್ಕೌಟ್ಸ್ ಮತ್ತು ಗೈಡ್ಸ್ ಸಾಹಿತ್ಯ ಪುಸ್ತಕಗಳನ್ನು ಓದಲು ಕೆಳಗಿನ Q.R. Code ಹಾಗೂ ಲಿಂಕ್‌ನ್ನು ಉಪಯೋಗಿಸಿ

https://archive.org/details/ServantsOfKnowledge?tab=collection&query=sng.*&sort=-addeddate

– ಸಂಪಾದಕರು



# ರಾಜ್ಯ ಮುಖ್ಯ ಆಯುಕ್ತರ ನುಡಿ

**ಸಮಸ್ತ ಸ್ಕೌಟ್ಸ್–ಗೈಡ್ಸ್ ಬಂಧುಗಳಿಗೆ ಶುಭಾಶಯಗಳು,**

ಶ್ರಾವಣ ಮಾಸ ಪ್ರಾರಂಭವಾಗಿದೆ. ಇದು ಕೇವಲ ಭಕ್ತಿಯ ಕಾಲವಲ್ಲ; ಪ್ರಕೃತಿಯ ಮೌಲ್ಯವನ್ನು ಅರಿಯುವ ಹಾಗೂ ಸಂಸ್ಕೃತಿಯ ತತ್ವಗಳನ್ನು ಪಾಲನೆ ಮಾಡುವ ಸಮಯವೂ ಆಗಿದೆ. ಹಬ್ಬಗಳಲ್ಲಿ, ಸರಳತೆಗೆ ಆದ್ಯತೆ ನೀಡಿ, ಪ್ಲಾಸ್ಟಿಕ್ ಬಳಕೆ ತ್ಯಜಿಸಿ, ಗಿಡಗಳನ್ನು ನೆಡೋಣ. ಹಬ್ಬದ ಹೆಸರಿನಲ್ಲಿ ಪರಿಸರಕ್ಕೆ ಹಾನಿ ಮಾಡುವುದು ಧರ್ಮವಲ್ಲ. ಪ್ರತಿವರ್ಷದಂತೆ ಈ ಬಾರಿಯೂ ಪರಿಸರ ಸ್ನೇಹಿ ಹಬ್ಬವನ್ನು ಆಚರಿಸುವ ಶಪಥ ಮಾಡೋಣ. ಆಗಸ್ಟ್ ತಿಂಗಳು ಸ್ವಾತಂತ್ರ್ಯ ಹೋರಾಟದ ಸ್ಮರಣೆ, ಪ್ರಕೃತಿ ಸಂರಕ್ಷಣೆ, ಸಮುದಾಯ ಸೇವೆ ಮತ್ತು ದೇಶಪ್ರೇಮವನ್ನು ಸ್ಮರಿಸಬೇಕಾದ ಮಾಸವಾಗಿದೆ. ನಮ್ಮ ಚಳುವಳಿಯ ಪ್ರಮುಖ ತತ್ತ್ವ, **"Be Prepared"** ಎಂಬ ಉಕ್ತಿಯನ್ನು ಅರ್ಥಪೂರ್ಣವಾಗಿ ಜೀವಂತವನ್ನಾಗಿಸೋಣ.

ಜುಲೈ ತಿಂಗಳಲ್ಲಿ ಬೆಂಗಳೂರು ಉತ್ತರ, ಹಾಸನ, ಮಂಡ್ಯ, ಮಡಿಕೇರಿ, ಹಾವೇರಿ, ಸಿರಸಿ, ಬಾಗಲಕೋಟೆ ಸೇರಿದಂತೆ ಸುಮಾರು 25ಕ್ಕೂ ಹೆಚ್ಚು ಜಿಲ್ಲೆಗಳಿಗೆ ಭೇಟಿ ನೀಡಿ ಸ್ಥಳೀಯ ಚಟುವಟಿಕೆಗಳನ್ನು ನಿಕಟವಾಗಿ ಪರಿಶೀಲಿಸುವ ಅವಕಾಶ ದೊರೆತಿದೆ. ಪ್ರತಿ ಜಿಲ್ಲೆಯಲ್ಲಿ ಕಾರ್ಯಕರ್ತರು, ಪದಾಧಿಕಾರಿಗಳು ಮತ್ತು ಸದಸ್ಯರೊಂದಿಗೆ ನೇರ ಸಂವಾದ ನಡೆಸಿ, ಸಮಸ್ಯೆಗಳು ಮತ್ತು ಪರಿಹಾರ ಮಾರ್ಗಗಳ ಕುರಿತು ಚರ್ಚೆ ಮಾಡಲಾಯಿತು. ಬಹುತೇಕ ಜಿಲ್ಲೆಗಳಲ್ಲಿ ಚಳವಳಿ ಸಕ್ರಿಯವಾಗಿದ್ದು, ಉತ್ತಮ ಪ್ರಗತಿಯಲ್ಲಿ ಮುಂದುವರಿಯುತ್ತಿರುವುದು ಸಂತಸದ ಸಂಗತಿ ಹಾಗೂ ಸ್ಥಳೀಯ ಪದಾಧಿಕಾರಿಗಳ ಉತ್ಸಾಹ, ನಿಷ್ಠೆ ಮತ್ತು ಜವಾಬ್ದಾರಿತನ ಶ್ಲಾಘನೀಯವಾಗಿದೆ.

ಜುಲೈ 23 ರಂದು ಗೌರವಾನ್ವಿತ ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋಟ್ ಅವರನ್ನು ಭೇಟಿ ಮಾಡಿ, 2025–26ರ ಯೋಜಿತ ಕಾರ್ಯಕ್ರಮಗಳು ಮತ್ತು ಇತರೆ ಪ್ರಮುಖ ವಿಚಾರಗಳ ಕುರಿತು ವಿವರವಾಗಿ ಮಾಹಿತಿ ನೀಡಲಾಯಿತು. ಈ ಭೇಟಿಯ ಸಂದರ್ಭದಲ್ಲಿ, ನಮ್ಮ ಮನವಿಗೆ ಸ್ಪಂದಿಸಿದ ಮಾನ್ಯ ರಾಜ್ಯಪಾಲರು, ಹಿರಿಯ ಸ್ಕೌಟರ್ ಹಾಗೂ ಗೈಡರ್‌ಗಳ ಸಮಾವೇಶದ ದಿನಾಂಕ ನಿಗದಿಗೆ ಒಪ್ಪಿಗೆ ನೀಡಿದ್ದಕ್ಕಾಗಿ ಸಂಸ್ಥೆಯ ಪರವಾಗಿ ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಜೂನ್ 24 ರಿಂದ 30 ರವರೆಗೆ ಕೊಂಡಜ್ಜಿ ಬಸಪ್ಪ ತರಬೇತಿ ಕೇಂದ್ರದಲ್ಲಿ ಕಬ್ ಮಾಸ್ಟರ್, ಫ್ಲಾಕ್ ಲೀಡರ್, ಸ್ಕೌಟ್ ಮಾಸ್ಟರ್ ಮತ್ತು ಗೈಡ್ ಕ್ಯಾಪ್ಟನ್‌ಗಳ ಮುಂದುವರೆದ ಶಿಬಿರ ಯಸಸ್ವಿಯಾಗಿ ನೆರವೇರಿತು. ಜುಲೈ 15 ರಿಂದ 21ರ ವರೆಗೆ ನಡೆದ ಮೈಸೂರು ಜಿಲ್ಲಾಮಟ್ಟದ ತರಬೇತಿ ಶಿಬಿರ ಹಾಗೂ ಜುಲೈ 17 ರಿಂದ 23ರ ವರೆಗೆ ದೊಡ್ಡಬಳ್ಳಾಪುರದ ಡಾ. ಅನಿಬೆಸೆಂಟ್ ತರಬೇತಿ ಕೇಂದ್ರದಲ್ಲಿ ನಡೆದ ರೋವರ್–ರೇಂಜರ್ ಲೀಡರ್ಸ್‌ಗಳ ಹಾಗೂ ಕಬ್–ಬುಲ್ ಬುಲ್, ಸ್ಕೌಟ್–ಗೈಡ್ಸ್ ಶಿಕ್ಷಕರ ಮುಂದುವರಿದ ತರಬೇತಿ ಶಿಬಿರಗಳು ಪರಿಣಾಮಕಾರಿಯಾಗಿ ನಡೆದಿವೆ. ಇದರ ಜೊತೆಗೆ ರಾಜ್ಯದ ವಿವಿಧ ಭಾಗಗಳಲ್ಲಿ ತೃತೀಯ ಸೋಪಾನ, ನಿಪುಣ್ ಪರೀಕ್ಷೆಗಳು ಮತ್ತು ರಾಜ್ಯ ಪುರಸ್ಕಾರ ಪೂರ್ವಸಿದ್ದತಾ ಶಿಬಿರಗಳು ನಡೆಯುತ್ತಿದ್ದು, ಇವು ವಿದ್ಯಾರ್ಥಿಗಳ ವೈಯಕ್ತಿಕ ಬೆಳವಣಿಗೆ ಹಾಗೂ ಸಮಾಜಮುಖಿ ಸೇವೆಯತ್ತ ದಾರಿ ಒದಗಿಸುತ್ತಿವೆ.

ಈ ಶಿಬಿರಗಳು ನಮ್ಮ ಸಂಸ್ಥೆಯ ಶಿಸ್ತಿನ ತತ್ತ್ವ, ಶಕ್ತಿಯ ಬೆಳವಣಿಗೆ ಹಾಗೂ ನಾಯಕತ್ವ ತರಬೇತಿಯ ಪ್ರಮುಖ ಹಂತಗಳನ್ನು ಪ್ರತಿಬಿಂಬಿಸುತ್ತವೆ. ಶಿಬಿರದಲ್ಲಿ ಪಾಲ್ಗೊಂಡ ಎಲ್ಲಾ ತರಬೇತುದಾರರು ಮತ್ತು ಭಾಗವಹಿಸಿದ ಪ್ರತಿಯೊಬ್ಬರಿಗೂ ನನ್ನ ಹೃತ್ಪೂರ್ವಕ ಅಭಿನಂದನೆಗಳು ಹಾಗೂ ಧನ್ಯವಾದಗಳು.

ರಾಜ್ಯದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳು ಹೊಸ ಚೈತನ್ಯವನ್ನು ಪಡೆದು ಮುಂದುವರಿಯುತ್ತಿವೆ ಎಂಬುದು ಅತ್ಯಂತ ಸಂತಸದ ವಿಷಯವಾಗಿದೆ. ಹಲವಾರು ಶಾಲಾ, ಕಾಲೇಜುಗಳಲ್ಲಿ ಸ್ಕೌಟ್ಸ್–ಗೈಡ್ಸ್, ರೋವರ್–ರೇಂಜರ್ಸ್ ಘಟಕಗಳ ಸ್ಥಾಪನೆ ಹಾಗೂ ಕೆಲವು ಪ್ರದೇಶಗಳಲ್ಲಿ ಮುಕ್ತದಳಗಳ ಆರಂಭ ಚಳುವಳಿಯ ಬೆಳವಣಿಗೆಗೆ ಪ್ರಮುಖ ಹೆಜ್ಜೆಯಾಗಿದೆ.

ಕ್ಯಾಪ್ಟನ್ ಎಂ.ವಿ. ಪ್ರಾಂಜಲ್ ಅವರು ಕೇವಲ ವೀರ ಕನ್ನಡಿಗ ಹಾಗೂ ಧೈರ್ಯವಂತ ಯೋಧರಷ್ಟೇ ಅಲ್ಲ, ಅವರು ನಮ್ಮ ಸಂಸ್ಥೆಯ ರಾಷ್ಟ್ರಪತಿ ಸ್ಕೌಟ್ ಮತ್ತು ರೋವರ್ ಆಗಿದ್ದರೆಂಬುದು ಪ್ರತಿಯೊಬ್ಬರಿಗೂ ಗೌರವದ ವಿಷಯವಾಗಿದೆ. ದೇಶಕ್ಕಾಗಿ ತಮ್ಮ ಪ್ರಾಣ ಬಲಿದಾನ ಮಾಡಿದ ಈ ವೀರನ ಸ್ಮರಣಾರ್ಥವಾಗಿ ಮುಂದಿನ ತಿಂಗಳು ಮದ್ರಾಸಿನಲ್ಲಿ ನಡೆಯಲಿರುವ ರಾಷ್ಟ್ರಮಟ್ಟದ ರೋವರ್ಸ್–ರೇಂಜರ್ಸ್ ಕಾರ್ನಿವಾಲ್ ಅನ್ನು "ಕ್ಯಾಪ್ಟನ್ ಎಂ.ವಿ. ಪ್ರಾಂಜಲ್" ಅವರ ಹೆಸರಿನಲ್ಲಿ ಆಯೋಜಿಸಿರುವುದು ನಮ್ಮೆಲ್ಲರಿಗೂ ಅಪಾರ ಗೌರವ ಮತ್ತು ಹೆಮ್ಮೆ ತಂದಿದೆ. ಈ ಮಹತ್ವದ ಕಾರ್ಯಕ್ಕೆ ಅವಕಾಶ ನೀಡಿದ ರಾಷ್ಟ್ರ ಸಂಸ್ಥೆಗೆ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

ಜುಲೈ 26ರಂದು ದೇಶದೆಲ್ಲೆಡೆ, "ಕಾರ್ಗಿಲ್ ವಿಜಯ್ ದಿವಸ"ವನ್ನು ಶ್ರದ್ಧೆ, ಗೌರವ ಮತ್ತು ದೇಶಭಕ್ತಿಯ ಮನೋಭಾವದಿಂದ ಆಚರಿಸಲಾಗಿದೆ. ನಮ್ಮ ಸಂಸ್ಥೆ ಕೂಡ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಈ ದಿನವನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸಿ, ವೀರಯೋಧರ ತ್ಯಾಗವನ್ನು ಸ್ಮರಿಸುವ ಮಹತ್ವ ಕಾರ್ಯ ಮಾಡಿದೆ.

ಸ್ಕೌಟಿಂಗ್ ಮತ್ತು ಗೈಡಿಂಗ್ ಚಟುವಟಿಕೆಗಳನ್ನು ವಿಶ್ವವಿದ್ಯಾಲಯಗಳ ಮಟ್ಟದಲ್ಲೂ ವಿಸ್ತರಿಸಬೇಕೆಂಬ ಮಹತ್ವಾಕಾಂಕ್ಷೆಯೊಂದಿಗೆ, ಎಲ್ಲಾ ಕಾಲೇಜುಗಳಲ್ಲಿ ರೋವರ್ ಮತ್ತು ರೇಂಜರ್ ದಳಗಳನ್ನು ಸ್ಥಾಪಿಸುವ ಹಾಗೂ ಈಗಾಗಲೇ ಸ್ಥಾಪಿತ ದಳಗಳನ್ನು ಸಕ್ರಿಯಗೊಳಿಸುವ ಉದ್ದೇಶದಿಂದ, ವಿವಿಧ ವಿಶ್ವವಿದ್ಯಾನಿಲಯಗಳ ಉಪಕುಲಪತಿಗಳನ್ನು ಭೇಟಿಯಾಗಿ ಮನವಿ ಸಲ್ಲಿಸುವ ನಿರ್ಧಾರ ಕೈಗೊಂಡಿದ್ದೇವೆ. ಈ

ಹಿನ್ನೆಲೆಯಲ್ಲಿ ಈಗಾಗಲೇ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಕರ್ನಾಟಕ ವಿಶ್ವವಿದ್ಯಾಲಯ ಮತ್ತು ರಾಜೀವ್ ಗಾಂಧಿ ವೈದ್ಯಕೀಯ ವಿಶ್ವವಿದ್ಯಾಲಯಗಳ ಉಪಕುಲಪತಿಗಳನ್ನು ಭೇಟಿಯಾಗಿದ್ದು, ಅವರಿಂದ ಸಕಾರಾತ್ಮಕ ಸ್ಪಂದನೆ ಸಿಕ್ಕಿದೆ.

ನಮ್ಮ 'ಕರ್ನಾಟಕ ಸ್ಕೌಟ್ಸ್ ಮತ್ತು ಗೈಡ್ಸ್ ಮಾಸಪತ್ರಿಕೆ'ಗೆ ಈಗ ಶತಮಾನೋತ್ಸವ ಸಂಭ್ರಮ. ಓದುವ ಅಭಿರುಚಿ ಕ್ಷೀಣಿಸುತ್ತಿರುವ ಈ ತಂತ್ರಜ್ಞಾನದ ಯುಗದಲ್ಲಿಯೂ, ಒಂದು ಶತಮಾನಕ್ಕೂ ಹೆಚ್ಚು ಕಾಲ ನಿರಂತರವಾಗಿ ಸ್ಕೌಟ್ಸ್ ಗೈಡ್ಸ್ ಚಳವಳಿಯ ಮೌಲ್ಯಗಳು, ಚಟುವಟಿಕೆಗಳು ಹಾಗೂ ಪ್ರೇರಣಾದಾಯಕ ಘಟನೆಗಳು ನಮ್ಮ ಈ ಮಾಸಪತ್ರಿಕೆಯ ಪುಟಗಳಲ್ಲಿ ಜೀವಂತವಾಗಿ ಉಳಿದಿರುವುದು ಅವಿಸ್ಮರಣೀಯ ಸಾಧನೆ ಆಗಿದೆ. ಇದರ ಸ್ಮರಣಾರ್ಥವಾಗಿ, ನಮ್ಮ ಸಂಸ್ಥೆ ಅಕ್ಟೋಬರ್ ಅಥವಾ ನವೆಂಬರ್ ತಿಂಗಳಲ್ಲಿ ಮೈಸೂರಿನಲ್ಲಿ ರಾಜ್ಯಮಟ್ಟದ ಶತಮಾನೋತ್ಸವ ಸಮಾಂಭವನ್ನು ಜರುಗಿಸಲು ಸಿದ್ಧತೆ ನಡೆಸುತ್ತಿದೆ. ಈ ಮಹತ್ವದ ಕಾರ್ಯಕ್ರಮದ ಯಶಸ್ಸಿಗೆ ರಾಜ್ಯ, ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ನಮ್ಮ ಚಳುವಳಿಯ ಎಲ್ಲಾ ಮುಖಂಡರ ಬೆಂಬಲ ಮತ್ತು ಸಹಕಾರ ಅತ್ಯವಶ್ಯಕವೆಂದು ನಂಬಿದ್ದೇನೆ.

ಕನ್ನಡ ಚಲನಚಿತ್ರರಂಗದ ಹಿರಿಯ ನಟಿ, ಶ್ರೀಮತಿ ಬಿ. ಸರೋಜಾ ದೇವಿ ಅವರ ಅಗಲಿಕೆಗೆ ನಮ್ಮ ಸಂಸ್ಥೆ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತದೆ. ತಮ್ಮ ಕಲಾತ್ಮಕ ಅಭಿನಯದ ಮೂಲಕ ಸುಮಾರು ಆರು ದಶಕಗಳ ಕಾಲ ಅವರು ದಕ್ಷಿಣ ಭಾರತದ ಚಿತ್ರರಂಗವನ್ನು ಶೋಭಿಸಿದ್ದಾರೆ. ಅವರ ಕೊಡುಗೆ ಕನ್ನಡದ ಕಲೆ ಮತ್ತು ಸಂಸ್ಕೃತಿಗೆ ಅಮೂಲ್ಯವಾಗಿದ್ದು, ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತೇನೆ.

ಸ್ಕೌಟ್ಸ್ ಮತ್ತು ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಪಿ.ಜಿ.ಆರ್. ಸಿಂಧ್ಯ)

ರಾಜ್ಯ ಮುಖ್ಯ ಆಯುಕ್ತರು

ಆಹಾರ ದೈವಿಕ ಸಂಪತ್ತು, ಅದನ್ನು ಸಂರಕ್ಷಿಸೋಣ
ಆಹಾರವನ್ನು ಉಳಿಸಿ, ಭವಿಷ್ಯವನ್ನು ಕಾಪಾಡಿ!

## ಆಗಸ್ಟ್ 2025ರ ಕಾರ್ಯಕ್ರಮಗಳು ಮತ್ತು ತರಬೇತಿಗಳು

| ಕ್ರ.ಸಂ | ಕಾರ್ಯಕ್ರಮದ ಹೆಸರು | ದಿನಾಂಕ | ಸ್ಥಳ |
|---|---|---|---|
| 1 | ವಿಶ್ವ ಸ್ಕಾರ್ಫ್ ದಿನಾಚರಣೆ/ ಸ್ಕೌಟಿಂಗ್ ಸೂರ್ಯೋದಯ ದಿನಾಚರಣೆ | 01–08–2025 | ದಳ, ಸ್ಥಳೀಯ, ಜಿಲ್ಲಾ ಹಾಗೂ ರಾಜ್ಯ ಹಂತದಲ್ಲಿ |
| 2 | ಅಂತರಾಷ್ಟ್ರೀಯ ಬುಡಕಟ್ಟು ದಿನಾಚರಣೆ | 09–08–2025 | ದಳ, ಸ್ಥಳೀಯ, ಜಿಲ್ಲಾ ಹಾಗೂ ರಾಜ್ಯ ಹಂತದಲ್ಲಿ |
| 3 | 78ನೇ ಸ್ವಾತಂತ್ರ್ಯ ದಿನಾಚರಣೆ | 15–08–2025 | ದಳ, ಸ್ಥಳೀಯ, ಜಿಲ್ಲಾ ಹಾಗೂ ರಾಜ್ಯ ಹಂತದಲ್ಲಿ |
| 4 | ದಿ॥ ವಿ.ಪಿ. ದೀನದಯಾಳು ನಾಯ್ಡುರವರ ಜನ್ಮ ದಿನಾಚರಣೆ | 16–08–2025 | ಸ್ಥಳೀಯ, ಜಿಲ್ಲಾ ಹಾಗೂ ರಾಜ್ಯ ಹಂತದಲ್ಲಿ |
| 5 | ಸದ್ಭಾವನಾ ದಿನಾಚರಣೆ ಹಾಗೂ ರಾಜೀವ ಗಾಂಧೀರವರ ಜನ್ಮ ದಿನಾಚರಣೆ | 20–08–2025 | ಸ್ಥಳೀಯ, ಜಿಲ್ಲಾ ಹಾಗೂ ರಾಜ್ಯ ಹಂತದಲ್ಲಿ |
| 6 | ಪರಿಸರ ಗಣಪತಿ ತಯಾರಿಸುವುದು ಹಾಗೂ ಪರಿಸರ ಗಣಪತಿ ಹಬ್ಬ ಆಚರಣೆ | ಆಗಸ್ಟ್ 2025 | ದಳ, ಸ್ಥಳೀಯ, ಜಿಲ್ಲಾ ಹಾಗೂ ರಾಜ್ಯ ಹಂತದಲ್ಲಿ |
| 7 | ಪ್ರಾರಂಭಿಕ ಶಿಬಿರಗಳು | – | ತಾಲ್ಲೂಕು/ ಜಿಲ್ಲಾ ಹಂತದಲ್ಲಿ |
| 8 | ವಾರಾಂತ್ಯದಲ್ಲಿ ಮೂಲ ತರಬೇತಿ ಶಿಬಿರ (5 ವಾರಗಳು) | – | ತಾಲ್ಲೂಕು/ ಜಿಲ್ಲಾ ಮಟ್ಟದಲ್ಲಿ |
| 9 | ಬನ್ನೀ ತರಬೇತಿ ಶಿಬಿರ | – | ತಾಲ್ಲೂಕು/ ಜಿಲ್ಲಾ ಮಟ್ಟದಲ್ಲಿ |

# ರಾಜ್ಯ ಸಂಸ್ಥೆಯಿಂದ ಜಿಲ್ಲೆಗಳಲ್ಲಿ ನಡೆದ ವಿವಿಧ ಕಾರ್ಯಕ್ರಮಗಳು



* ಜುಲೈ 02 ರಂದು ಮಂಡ್ಯ ಜಿಲ್ಲಾ ಸಂಸ್ಥೆಯ ಕಛೇರಿಯಲ್ಲಿ, 'ಜಿಲ್ಲಾ ಪದಾಧಿಕಾರಿಗಳ ಸಭೆ'ಯಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಭಾಗವಹಿಸಿ, ಜಿಲ್ಲೆಯಲ್ಲಿ ಸ್ಕೌಟ್–ಗೈಡ್ ಚಟುವಟಿಕೆಗಳ ಬಗ್ಗೆ ಹಾಗೂ ಅಭಿವೃದ್ಧಿ ಪಡಿಸುವ ಬಗ್ಗೆ ಚರ್ಚಿಸಿದರು. ಈ ಸಮಯದಲ್ಲಿ ಜಿಲ್ಲಾ ಪದಾಧಿಕಾರಿಗಳು ಭಾಗವಹಿಸಿದ್ದರು, ನಂತರ ಕರ್ನಾಟಕ ಸಂಘಕ್ಕೆ ಭೇಟಿ ನೀಡಿ ಅಧ್ಯಕ್ಷರಾದ ಶ್ರೀ ಜಯಪ್ರಕಾಶ್ ಗೌಡ ಅವರನ್ನು ಸನ್ಮಾನಿಸಲಾಯಿತು.



* ಜುಲೈ 03 ರಂದು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಕೊಡಗು ಜಿಲ್ಲಾ ಸಂಸ್ಥೆಗೆ ಭೇಟಿ ನೀಡಿ ಮಡಿಕೇರಿಯಲ್ಲಿ ಕೊಡಗು ಜಿಲ್ಲಾ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳ 'ಸಮಾಲೋಚನೆ ಸಭೆ ಹಾಗೂ ಮಾಹಿತಿ ಕಾರ್ಯಗಾರ'ದಲ್ಲಿ ಭಾಗವಹಿಸಿ ಮಾತನಾಡಿದರು. ಈ ಸಭೆಯಲ್ಲಿ ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆಯ ಅಧಿಕಾರಿಗಳು, ಶ್ರೀ ಬಿ.ಕೆ. ಬಸವರಾಜು, ಸಹಾಯಕ ಆಯುಕ್ತರು, ಶ್ರೀ ಎಂ. ಪ್ರಭಾಕರ್ ಭಟ್, ಎಸ್.ಒ.ಸಿ ಹಾಗೂ ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು ಭಾಗವಹಿಸಿದ್ದರು.



* ರಾಜ್ಯ ಸಂಸ್ಥೆಯಿಂದ ಜುಲೈ 07 ರಂದು '2025–26ನೇ ಸಾಲಿನ ವಾರ್ಷಿಕ ಕಾರ್ಯಕ್ರಮಗಳ ಯೋಜನೆ' ಪುಸ್ತಕ ಬಿಡುಗಡೆ ಕಾರ್ಯಕ್ರಮವನ್ನು ಬೆಂಗಳೂರು ಪ್ರೆಸ್ ಕ್ಲಬ್, ಕಬ್ಬನ್ ಪಾರ್ಕ್, ಬೆಂಗಳೂರು ಇಲ್ಲಿ ಏರ್ಪಡಿಸಲಾಗಿತ್ತು. ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರು '2025–26ನೇ ಸಾಲಿನ ವಾರ್ಷಿಕ ಕಾರ್ಯಕ್ರಮಗಳ ಯೋಜನೆ ಪುಸ್ತಕ'ವನ್ನು ಬಿಡುಗಡೆಗೊಳಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ರಾಜ್ಯ ಸಂಸ್ಥೆ ಮತ್ತು ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಹಾಗೂ ಇತರರು ಉಪಸ್ಥಿತರಿದ್ದರು.



* ಜುಲೈ 12 ರಂದು ಹಾಸನ ಜಿಲ್ಲೆಯ 'ಎಚ್.ಕೆ.ಎಸ್ ಅಂತರಾಷ್ಟ್ರೀಯ ಶಾಲೆಯಲ್ಲಿ ಸ್ಕೌಟ್ ಗೈಡ್ ಘಟಕ ಉದ್ಘಾಟನಾ ಸಮಾರಂಭ'ದಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಭಾಗವಹಿಸಿ ತರಬೇತಿ ಪಡೆದ ಶಿಕ್ಷಕರಿಗೆ ಪ್ರಮಾಣ ಪತ್ರವನ್ನು ವಿತರಣೆ  ಮಾಡಿದರು. ಈ ಸಂದರ್ಭದಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಅಭಿನಂದನೆಯನ್ನು ಸಲ್ಲಿಸಲಾಯಿತು. ಶಾಲಾ ನಿರ್ದೇಶಕರು ಶ್ರೀ ಹೆಚ್.ಕೆ. ಸುರೇಶ್, ಕಾರ್ಯದರ್ಶಿ ಶ್ರೀಮತಿ ಕೋಮಲ ಸುರೇಶ್, ಶಾಲಾ ಕಾರ್ಯದರ್ಶಿ ಶ್ರೀ ಪ್ರಶಾಂತ್ ಗೌಡ ಹಾಗೂ ಶಾಲಾ ಮುಖ್ಯೋಪಾಧ್ಯಾಯರಾದ ಡಾ. ಗೌರಿ ಹಾಗೂ ಶಾಲಾ ಸಿಬ್ಬಂದಿ ವರ್ಗದವರು, ಸಹಾಯಕ ರಾಜ್ಯ ಆಯುಕ್ತರಾದ ಶ್ರೀ ಬಿ.ಕೆ. ಬಸವರಾಜು ಹಾಗೂ ರಾಜ್ಯ ಸಂಘಟನಾ ಆಯುಕ್ತರು (ಸ್ಕೌಟ್) ಶ್ರೀ ಎಂ. ಪ್ರಭಾಕರ್ ಭಟ್ ಉಪಸ್ಥಿತರಿದ್ದರು.



* ಜುಲೈ 12 ರಂದು ಹಾಸನ ಜಿಲ್ಲಾ ಸ್ಕೌಟ್ ಭವನದಲ್ಲಿ, ಜಿಲ್ಲಾ ಮಟ್ಟದ 'ಸಮಾಲೋಚನಾ ಸಭೆ'ಯಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಭಾಗವಹಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಉಪನಿರ್ದೇಶಕರು ಶಾಲಾ ಶಿಕ್ಷಣ ಇಲಾಖೆ ಶ್ರೀ ಹೆಚ್.ಎಸ್. ಚಂದ್ರಶೇಖರ್ ಹಾಗೂ ಸಹಾಯಕ ರಾಜ್ಯ ಆಯುಕ್ತರು ಶ್ರೀ ಬಿ.ಕೆ. ಬಸವರಾಜು, ರಾಜ್ಯ ಸಂಘಟನಾ ಆಯುಕ್ತರು (ಸ್ಕೌಟ್) ಶ್ರೀ ಎಂ. ಪ್ರಭಾಕರ್ ಭಟ್ ಹಾಗೂ ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.



* ಜುಲೈ 14 ರಂದು ಹಾವೇರಿ ಜಿಲ್ಲಾ ಭವನದಲ್ಲಿ ನಡೆದ 'ಸಮಾಲೋಚನ ಸಭೆ'ಯಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಭಾಗವಹಿಸಿ ಜಿಲ್ಲೆಯಲ್ಲಿ ಸ್ಕೌಟಿಂಗ್ ಅಭಿವೃದ್ಧಿ ಪಡಿಸುವ ಬಗ್ಗೆ ಹಾಗೂ ವಿವಿಧ ವಿಚಾರಗಳ ಬಗ್ಗೆ

ಚರ್ಚಿಸಿದರು. ಈ ಸಂದರ್ಭದಲ್ಲಿ ಉಪನಿರ್ದೇಶಕರು ಶಾಲಾ ಶಿಕ್ಷಣ ಇಲಾಖೆ ಶ್ರೀ ಸುರೇಶ್ ಹುಗ್ಗಿ ರವರು, ರಾಜ್ಯ ಸಂಘಟನಾ ಆಯುಕ್ತರು (ಸ್ಕೌಟ್) ಶ್ರೀ ಎಂ. ಪ್ರಭಾಕರ್ ಭಟ್, ರಾಜ್ಯ ಸಂಘಟನಾ ಆಯುಕ್ತರು (ಗೈಡ್) ಶ್ರೀಮತಿ ಮಂಜುಳಾ ಸಿ. ರವರು ಜಿಲ್ಲಾ ಹಾಗು ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು ಭಾಗವಹಿಸಿದ್ದರು.



* ಜುಲೈ 15 ರಂದು ಶಿರಸಿ ಜಿಲ್ಲೆ 'ಸಮಾಲೋಚನೆ ಸಭೆ'ಯಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಭಾಗವಹಿಸಿ ಜಿಲ್ಲೆಯಲ್ಲಿ ಸ್ಕೌಟಿಂಗ್ ಅಭಿವೃದ್ಧಿಪಡಿಸುವ ಬಗ್ಗೆ ಹಾಗೂ ವಿವಿಧ ವಿಚಾರಗಳ ಬಗ್ಗೆ ಚರ್ಚಿಸಿದರು. ಈ ಸಂದರ್ಭದಲ್ಲಿ ಗೈಡಿಂಗ್ ರಾಜ್ಯ ಸಂಘಟನಾ ಆಯುಕ್ತರು (ಸ್ಕೌಟ್) ಶ್ರೀ ಎಂ. ಪ್ರಭಾಕರ್ ಭಟ್, ರಾಜ್ಯ ಸಂಘಟನಾ ಆಯುಕ್ತರು (ಗೈಡ್) ಶ್ರೀಮತಿ ಮಂಜುಳಾ .ಸಿ ರವರು ಜಿಲ್ಲಾ ಹಾಗು ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು ಭಾಗವಹಿಸಿದ್ದರು.



* ಜುಲೈ 15 ರಂದು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಮಾನ್ಯ ಉಪ ಕುಲಪತಿಗಳಾದ ಡಾ. ಎ.ಎಂ. ಖಾನ್ ಮತ್ತು ರಿಜಿಸ್ಟ್ರಾರ್ ಶ್ರೀ ಅರವಿಂದ ಇವರನ್ನು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಭೇಟಿ ಮಾಡಿ ರೋವರ್ ಮತ್ತು ರೇಂಜರ್ಸ್ ದಳಗಳು ವಿಶ್ವ ವಿದ್ಯಾಲಯದ ವ್ಯಾಪ್ತಿಯ ಎಲ್ಲಾ ಕಾಲೇಜುಗಳಲ್ಲಿ ಪ್ರಾರಂಭಿಸಲು ಮತ್ತು ಪ್ರಸುತ ಇರುವ ದಳಗಳನ್ನು ಸಕ್ರೀಯವಾಗಿ ನಡೆಸುವಂತೆ ಆದೇಶವನ್ನು ನೀಡುವಂತೆ ಕೋರಿ ಹಾಗೂ ನಮ್ಮ ಸಂಸ್ಥೆಯ 25–26ನೇ ಸಾಲಿನ ವಾರ್ಷಿಕ ಯೋಜನಾ ಪುಸ್ತಕಗಳನ್ನು ನೀಡಿ ಕಾರ್ಯಕ್ರಮದ ಮುಖ್ಯಾಂಶಗಳನ್ನು ತಿಳಿಸಿದರು. ಈ ಸಂದರ್ಭದಲ್ಲಿ ಶ್ರೀ ಡಿ.ಡಿ. ಮಾಳಗಿ, ಜಿಲ್ಲಾ ಆಯುಕ್ತರು, ರೋವರ್ ವಿಭಾಗ, ಧಾರವಾಡ, ಶ್ರೀಮತಿ ಮಂಜುಳಾ. ಸಿ ರಾಜ್ಯ ಸಂಘಟನಾ ಆಯುಕ್ತರು (ಗೈ), ಶ್ರೀ ಸಿದ್ದಪ್ಪ ಪೂಜಾರ್, ಎ.ಎಸ್.ಓ.ಸಿ ಧಾರವಾಡ ಇವರುಗಳು ಉಪಸ್ಥಿತರಿದ್ದರು.



* ಜುಲೈ 25 ರಂದು ಚಿಕ್ಕಬಳ್ಳಾಪುರ ಜಿಲ್ಲಾ ಸಂಸ್ಥೆಯಿಂದ ಹಮ್ಮಿಕೊಂಡಿದ್ದ ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆಗಳ 'ಪ್ರಗತಿ ಪರಿಶೀಲನಾ ಸಭೆ'ಯಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಭಾಗವಹಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಶ್ರೀ ಕೆ. ಮುನಿಕೆಂಪೇಗೌಡ, ಡಯಟ್ ಪ್ರಾಂಶುಪಾಲರು ಮತ್ತು ರಾಜ್ಯ ಆಯುಕ್ತರು (ಗೈಡ್ಸ್) ವಯಸ್ಕ ಸಂಪನ್ಮೂಲ ಶ್ರೀಮತಿ ಬಿ.ವಿ. ರಾಮಲತಾ ಹಾಗೂ ರಾಜ್ಯ ತರಬೇತಿ ಅಯುಕ್ತರಾದ ಶ್ರೀಮತಿ ಕೆ.ವಿ. ಶ್ಯಾಮಲಾ ಜಿಲ್ಲಾ ಹಾಗೂ ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು ಭಾಗವಹಿಸಿದ್ದರು.



* ಜುಲೈ 26 ರಂದು ಮಂಡ್ಯ ಜಿಲ್ಲೆಯ ಸ್ಥಳೀಯ ಸಂಸ್ಥೆ ಶ್ರೀರಂಗಪಟ್ಟಣ ತಾಲೂಕಿನಲ್ಲಿ 'ಕಲ್ಪನಾ ಚಾವ್ಲಾ ಬುಲ್ ಬುಲ್ ಓಪನ್ ಯೂನಿಟ್' ಘಟಕದ ಉದ್ಘಾಟನೆಯಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರು ಭಾಗವಹಿಸಿದ್ದರು. ಶ್ರೀ ಭಕ್ತವತ್ಸಲ, ಜಿಲ್ಲಾ ಮುಖ್ಯ ಆಯುಕ್ತರು, ಶ್ರೀಮತಿ ಗೀತಾ ಹೆಗಡೆ ಸ್ಥಳೀಯ ಸಂಸ್ಥೆಯ ಕೋಶಾಧಿಕಾರಿಗಳು ಶ್ರೀರಂಗಪಟ್ಟಣ ಶ್ರೀ ವರಪ್ರಸಾದ್, ಜಿಲ್ಲಾ ಹಾಗೂ ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.



ಜುಲೈ 27 ರಂದು ಮಧುಗಿರಿ ಜಿಲ್ಲಾ ಸಂಸ್ಥೆ ಹಾಗೂ ಶಾಲಾ ಶಿಕ್ಷಣ ಇಲಾಖೆ ಸಹಯೋಗದೊಂದಿಗೆ ಹಮ್ಮಿಕೊಂಡಿದ್ದ ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಭಾಗವಹಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಶ್ರೀ ನರಸಿಂಹಮೂರ್ತಿ, DYPC, ಶ್ರೀ ಕೆ.ಎನ್. ಹನುಮಂತರಾಯಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ, ಶ್ರೀ ಶೆಟ್ಟಿಮನಿ, DPEO, ಶ್ರೀ ದೊಡ್ಡ ಏರಗರಾಮಯ್ಯ, TPO, ಜಿಲ್ಲಾ ಆಯುಕ್ತರು (ಗೈಡ್ಸ್) ಶ್ರೀಮತಿ ಲತಾ ನಾರಾಯಣ, ಜಿಲ್ಲಾ ಕೋಶಾಧಿಕಾರಿ ಶ್ರೀಮತಿ ಉಮಾ ಮಲ್ಲೇಶ್, ಜಿಲ್ಲಾ ಕಾರ್ಯದರ್ಶಿ ಶ್ರೀ ಎನ್.ಎಂ. ತಿಮ್ಮರಾಜು, ರಾಜ್ಯ ತರಬೇತಿ ಅಯುಕ್ತರಾದ ಶ್ರೀಮತಿ ಕೆ.ವಿ. ಶ್ಯಾಮಲಾ ಜಿಲ್ಲಾ ಹಾಗೂ ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು ಭಾಗವಹಿಸಿದ್ದರು.

# ಸಂಪಾದಕೀಯ



ಮಾನ್ಯರೆ,

ಉತ್ತಮ ಫಲಿತಾಂಶಕ್ಕೂ, ಸ್ಕೌಟ್ಸ್-ಗೈಡ್ಸ್‌ನ ಸಕ್ರಿಯ ಅನುಷ್ಠಾನಕ್ಕೂ ಬಹುನೆಂಟು.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿಯು ವಿದ್ಯಾರ್ಥಿಗಳಲ್ಲಿ ಸ್ವಯಂ ಶಿಸ್ತನ್ನು ಉತ್ತೇಜಿಸುವುದರೊಂದಿಗೆ ಇತರರಿಗೆ ಗೌರವ ನೀಡುವ ಮತ್ತು ಪ್ರಾಮಾಣಿಕವಾಗಿ ಜೀವನ ನಿರ್ವಹಿಸುವ ಮೌಲ್ಯಯುತ ಬದುಕಿಗೆ ಪೂರಕ ಮತ್ತು ಪ್ರೇರಕವಾದ ಕಾರ್ಯಚಟುವಟಿಕೆಗಳನ್ನು ಅವರ 3 ವರ್ಷದ ವಯೋಮಾನದಿಂದ 25 ವರ್ಷದ ವಯೋಮಾನದ ವರೆಗಿನವರಿಗೆ, ವಿವಿಧ ಹಂತಗಳಲ್ಲಿ ನಿರ್ವಹಿಸುತ್ತಿರುವುದು ಸುವೇದ್ಯ. ಶಿಕ್ಷಕರು / ಉಪನ್ಯಾಸಕರುಗಳಿಗೆ ನೀಡುವ ವಿವಿಧ ಹಂತದ ತರಬೇತಿಗಳು, ಅವರುಗಳು ತಮ್ಮ ವ್ಯಾಪ್ತಿಯಲ್ಲಿಯ ವಿದ್ಯಾರ್ಥಿಗಳಿಗೆ ಈ ಗುಣಾತ್ಮಕ ಶಿಕ್ಷಣದ ಮೌಲ್ಯಗಳನ್ನು ಸಮರ್ಥವಾಗಿ ಮೈಗೂಡಿಸುವಲ್ಲಿ ಪೂರಕವಾದ ಮಾರ್ಗದರ್ಶನ ನೀಡುವ ಕೈಂಕರ್ಯ ಆಗಿರುವುದು. ಈ ಸ್ಕೌಟ್ಸ್-ಗೈಡ್ಸ್ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸುವ ವಿದ್ಯಾರ್ಥಿಗಳು, ಶಿಕ್ಷಕವೃಂದದವರಲ್ಲಿ ಮೌಲ್ಯಯುತ ಬದುಕಿನ ನಿರ್ವಹಣೆ ಆಗುತ್ತಿರುವುದನ್ನು ಮನಗಾಣಬಹುದಾಗಿದೆ. "ದೇಶದ ಭವ್ಯ ಭವಿಷ್ಯ ತರಗತಿಯ ಕೊಠಡಿಗಳಲ್ಲಿ ನಿರ್ಮಾಣ ಆಗುತ್ತದೆ" ಎಂಬ ಶಿಕ್ಷಣತಜ್ಞ ಡಾ॥ ಕೊಠಾರಿರವರ ಸ್ಪಷ್ಟ ನಿಲುವು ಸಾಕ್ಷ್ಯಾತ್ಕಾರ ಆಗುವಲ್ಲಿ ಶಿಕ್ಷಣಾಸಕ್ತರೆಲ್ಲರ, ಶಿಕ್ಷಣ ಇಲಾಖೆಗಳವರೆಲ್ಲರ ಕಾಯಾ, ವಾಚಾ, ಮನಸಾ, ಕಾರ್ಯಾನುಷ್ಠಾನ ಮಾರ್ಗೋಪಾಯಗಳ ಸಕ್ರಿಯ ಅನುಷ್ಠಾನ ಅಗ್ಯಗತ್ಯ ಆಗಿರುವುದು.

ಇತ್ತೀಚಿನ ವರ್ಷಗಳಲ್ಲಿ ಪಬ್ಲಿಕ್ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ಪಡೆಯುವ ಅಂಕಗಳ ಗಳಿಕೆಯ ಆಧಾರದ ಮೇಲಿನ, ಶೇಕಡವಾರು ಫಲಿತಾಂಶದ ಮೇಲಿನ ಆಧಾರದ ಮೇಲೆ ಪಠ್ಯ ಚಟುವಟಿಕೆಗಳನ್ನು ಮಾತ್ರ ಆಧಾರವಾಗಿರಿಸಿ ಶಿಕ್ಷಣ ವ್ಯವಸ್ಥೆಗೆ ಆದ್ಯ ಗಮನಹರಿಸಿ, ವಿದ್ಯಾರ್ಥಿಗಳ ಇತರ ಸರ್ವಾಂಗೀಣ ಅಭಿವೃದ್ಧಿ ಬಗ್ಗೆ ನಿರಾಸಕ್ತಿ ಕಾಣುತ್ತಿರುವುದು ಆತಂಕಕಾರಿ ಆಗಿರುವುದು. ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶ ಅವರು ಹೊಂದಬೇಕಾದ ಶಿಕಷಣದ ಆಸಕ್ತಿ ಮತ್ತು ಮನೊಭಾವನೆಗಳನ್ನು ಆಧರಿಸಿದ್ದು, ಆ ಬಗ್ಗೆಯ ಸ್ಪಷ್ಟ ನಿಲುವು ದೊರೆಯುವುದು ಸ್ಕೌಟ್ಸ್-ಗೈಡ್ಸ್ ಚಳವಳಿಯಲ್ಲಿ ಅವರು ಸಕ್ರಿಯವಾಗಿ ಭಾಗವಹಿಸುವಲ್ಲಿ ಎಂಬುದು ಉಲ್ಲೇಖಾರ್ಹ.

ರಾಷ್ಟ್ರೀಯ ಶಿಕ್ಷಣ ನೀತಿಯು 2022ವು "Education is development of not only of cognitive skills but also soft Skills" ಎಂಬ ಮಾತು ಮತ್ತು "Our students wants something more than a career, a vocation, a life path, a way to contribute, a way to make themselves and families proud and their communities strong" ಎಂಬ ಶಿಕ್ಷಣದ ನಿಲುವುಗಳಲ್ಲಿ ಪರೀಕ್ಷಾ ಫಲಿತಾಂಶಗಳಿಗೆ ಮಾತ್ರ ಆದ್ಯ ಗಮನಹರಿಸದೇ, ಶಿಕ್ಷಣದ ಇನ್ನೊಂದು ಮುಖವಾದ ಗುಣಾತ್ಮಕ ಬದುಕಿನ ಪ್ರೇರಣಾತ್ಮಕ ಕಾರ್ಯಚಟುವಟಿಕೆಗಳತ್ತ ಸಕ್ರಿಯವಾಗಿ ನಿರ್ವಹಿಸುವುದು ಅತ್ಯಗತ್ಯ ಎಂಬುದು ಸ್ಪಷ್ಟವಾಗಿರುವುದು.

ಈ ಸ್ಪಷ್ಟ ಉದ್ದೇಶಗಳನ್ನು ಮನಗಂಡು ರಾಜ್ಯ ಮುಖ್ಯ ಆಯುಕ್ತರಾಗಿರುವ ಶ್ರೀ ಪಿ.ಜಿ.ಆರ್.ಸಿಂಧ್ಯರವರು ತಮ್ಮ ಸಂಸ್ಥೆಯೊಂದಿಗೆ, ತಮ್ಮನ್ನು ತಾವು ಸಂಪೂರ್ಣವಾಗಿ ತೊಡಗಿಸಿಕೊಂಡು ಹಗಲಿರುಳೆನ್ನದೆ ಶ್ರಮಿಸುತ್ತಿರುವುದು ಎಲ್ಲರಿಗೂ ತಿಳಿದಿರುವುದೇ ಆಗಿದೆ. ಇದರ ಸತ್‌ಪರಿಣಾಮದಿಂದಾಗಿ ರಾಜ್ಯ ಸಂಸ್ಥೆಗೆ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿಗೆ 2024ರ ರಾಷ್ಟ್ರಮಟ್ಟದ ಸಾಧನೆಯಲ್ಲಿ "Champion of the States" ಎಂಬ ಹೆಗ್ಗಳಿಕೆಗೆ ಪಾತ್ರ ಆಗಿರುವುದಾದರೂ, ಈ ಶ್ರಮಕ್ಕೆ ಶಿಕ್ಷಣಾಸಕ್ತರು, ಶಿಕ್ಷಣ ಇಲಾಖಾ ಅಧಿಕಾರಿಗಳೆಲ್ಲರ ಇನ್ನೂ ಹೆಚ್ಚಿನ ಸಲಹೆ, ಸಹಕಾರ, ಪ್ರೋತ್ಸಾಹ ಅಭಿನಂದನಾರ್ಹ.

ವರ್ಷ-ವರ್ಷ, ಖಾಸಗಿ ಶಾಲೆಗಳಲ್ಲಿ ಈ ಸ್ಕೌಟ್ಸ್-ಗೈಡ್ಸ್ ಚಳುವಳಿಯ ಧ್ಯೇಯೋದ್ದೇಶಗಳು ಅನುಷ್ಠಾನ ಹೆಮ್ಮೆ ಪಡುವ ರೀತಿಯಲ್ಲಿ ನಿರ್ವಹಣೆ ಆಗುತ್ತಿರುವುದಾದರೂ ಸರ್ಕಾರಿ ಶಾಲಾ-ಕಾಲೇಜುಗಳಲ್ಲಿ ನಿರೀಕ್ಷಿತ ಮಟ್ಟದಲ್ಲಿ, ಆಸಕ್ತದಾಯಕವಾಗಿ ಆಗದಿರುವುದು ನಿರಾಶದಾಯಕವಾಗಿರುವುದು. ಸ್ಕೌಟ್ಸ್-ಗೈಡ್ಸ್ ಚಳವಳಿಯ ಧ್ಯೇಯೋದ್ದೇಶಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡು, ರಾಷ್ಟ್ರದ ಏಕೆ? ವಿಶ್ವದ ಶ್ರೇಷ್ಠ ವ್ಯಕ್ತಿಗಳಾಗುವಲ್ಲಿ ಸರ್ಕಾರಿ ಶಾಲಾ-ಕಾಲೇಜಿನ ವಿದ್ಯಾರ್ಥಿಗಳ ಸಹಭಾಗಿತ್ವ ಸಮನಾಗಿರಬೇಕಲ್ಲವೇ?

ಜೊತೆಗೆ ಸ್ಕೌಟ್ಸ್-ಗೈಡ್ಸ್ ಚಳವಳಿಯ ಸಕ್ರಿಯ ಅನುಷ್ಠಾನದಲ್ಲಿ ಭಾಗಿ ಆದ ವಿದ್ಯಾರ್ಥಿ ಸ್ವಯಂ ಶಿಸ್ತಿಗೆ ಒಳಪಟ್ಟು ತನ್ನ ಸಮಯವನ್ನು ಸಮರ್ಪಕವಾಗಿ ಉಪಯೋಗಿಸಿಕೊಳ್ಳುವಲ್ಲಿ ಸಮರ್ಥನಾಗಿ ಇತರೆ ವಿದ್ಯಾರ್ಥಿಗಳಿಗಿಂತ ಹೆಚ್ಚು ಗುಣಾತ್ಮಕ ಚಟುವಟಿಕೆಗಳಲ್ಲಿ ಭಾಗವಹಿಸುವವನಾಗಿರುವನು. ಸ್ಕೌಟ್ಸ್-ಗೈಡ್ಸ್ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದವರು ತಮ್ಮ ಪಬ್ಲಿಕ್ ಪರೀಕ್ಷೆಗಳಲ್ಲಿ ಇತರೆ ವಿದ್ಯಾರ್ಥಿಗಳಿಗಿಂತ ಉತ್ತಮ ಮಟ್ಟದ ಫಲಿತಾಂಶವನ್ನು ಹೊಂದುತ್ತಿರುವುದು ನಮ್ಮ ಅನೇಕ ಚಟುವಟಿಕೆಗಳು ಪ್ರೋತ್ಸಾಹದಾಯಕ ಯೋಜನೆಗಳಿಂದ ಸ್ಪಷ್ಟ ಆಗಿರುವುದು.

ಒಟ್ಟಿನಲ್ಲಿ ಭಾರತ್ ಸ್ಕೌಟ್ಸ್-ಗೈಡ್ಸ್ ಚಳವಳಿಯ ಚಟುವಟಿಕೆಗಳು ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ, ಗುಣಮಟ್ಟದ ಫಲಿತಾಂಶಕ್ಕೂ ಪೂರಕ-ಪ್ರೇರಕ ಆಗಿರುವುದನ್ನು ಮನಗಂಡು, ಅವರುಗಳಲ್ಲಿ ಸ್ವಯಂ ಶಿಸ್ತನ್ನು, ವಿದ್ಯಾಶಕ್ತಿಯನ್ನು, ಜವಾಬ್ದಾರಿತನವನ್ನು ಹೆಚ್ಚಿಸುವುದನ್ನು ಅರಿತು ಇದರ ಕಾರ್ಯಚಟುವಟಿಕೆಗಳು, ತರಬೇತಿಗಳು ಸಕಾಲದಲ್ಲಿ ಸಮರ್ಪಕವಾಗಿ ಎಂದಿನಂತೆ ನಿರ್ವಹಣೆ ಆಗುವಲ್ಲಿ ಸರ್ವರೂ ಸಹಕರಿಸಲು ಮತ್ತೊಮ್ಮೆ ವಿನಂತಿಸಿದೆ.

ಜುಲೈ 2025ರ ತರಬೇತಿ, ಕಾರ್ಯಕ್ರಮಗಳು Scout Skillo ಉಪನ್ಯಾಸಗಳು, ಕಾರ್ಗಿಲ್ ವಿಜಯೋತ್ಸವದ ಕಾರ್ಯಗೌರವಗಳು, ಪೋಷಕರ ದಿನಾಚರಣಾ ಸಮಾರಂಭಗಳು, ವಿದ್ಯಾರ್ಥಿಗಳ ಆಸಕ್ತಿಯನ್ನು ಆಧರಿಸಿ, ವಿವಿಧ ಚಟುವಟಿಏಕಗಳ ಪ್ರಗತಿಪರ ಹಾಗೂ ಉತ್ತೇಜಕ ಕಾರ್ಯಕ್ರಮಗಳ ಪರೀಕ್ಷೆಗಳು (Progressive and stimulative activities evaluation) ಯಶಸ್ವಿಯಾಗಿ ನಿರ್ವಹಣೆ ಆಗಿದ್ದು, ಅವೆಲ್ಲವುಗಳನ್ನು ಸಮರ್ಪಕ, ಸಕಾಲಿಕವಾಗಿ ನಿರ್ವಹಿಸುವಲ್ಲಿ ಸಹಕರಿಸಿದವರಿಗೆ ಮತ್ತು ನಿರ್ವಹಿಸಿದವರೆಲ್ಲರಿಗೂ ಮತ್ತೊಮ್ಮೆ ಅನಂತಾನಂತ ಅಭಿನಂದನೆಗಳನ್ನು ಈ ಮೂಲಕ ಸಲ್ಲಿಸಬಯಸುತ್ತೇನೆ.

ಸ್ಕೌಟ್ಸ್-ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಕೆ. ಗಂಗಪ್ಪಗೌಡ)
ಸಂಪಾದಕರು ಹಾಗೂ ರಾಜ್ಯ ಕಾರ್ಯದರ್ಶಿ
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

# ರೋವರ್ ಸ್ಕೌಟ್ ಲೀಡರ್ಸ್ ಮತ್ತು ರೇಂಜರ್ ಲೀಡರ್ಸ್‌ಗಳ ಮೂಲ ಮತ್ತು ಮುಂದುವರೆದ ತರಬೇತಿ ಹಾಗೂ ಸ್ಕೌಟ್ ಮಾಸ್ಟರ್ಸ್ ಮತ್ತು ಗೈಡ್ ಕ್ಯಾಪ್ಟನ್ಸ್‌ಗಳ ಮುಂದುವರೆದ ತರಬೇತಿ ಶಿಬಿರಗಳು

ಜುಲೈ 17 ರಿಂದ 23ರ ವರೆಗೆ, ಡಾ॥ ಅನಿಬೆಸೆಂಟ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ರೋವರ್ ಸ್ಕೌಟ್ ಲೀಡರ್ಸ್ ಮತ್ತು ರೇಂಜರ್ ಲೀಡರ್ಸ್‌ಗಳವರ ರಾಜ್ಯ ಮಟ್ಟದ ಮೂಲ ಮತ್ತು ಮುಂದುವರೆದ ತರಬೇತಿ ಶಿಬಿರ ಹಾಗೂ ಸ್ಕೌಟ್ ಮಾಸ್ಟರ್ಸ್ ಮತ್ತು ಗೈಡ್ ಕ್ಯಾಪ್ಟನ್ಸ್‌ಗಳವರ ಮುಂದುವರೆದ ತರಬೇತಿ ಶಿಬಿರಗಳನ್ನು ರಾಜ್ಯ ಸಂಸ್ಥೆಯ ವತಿಯಿಂದ ಆಯೋಜಿಸಲಾಗಿತ್ತು.

ರೋವರ್ ಸ್ಕೌಟ್ ಲೀಡರ್ ಮೂಲ ತರಬೇತಿ ಶಿಬಿರದಲ್ಲಿ 28 ಶಿಬಿರಾರ್ಥಿಗಳು ಭಾಗವಹಿಸಿದ್ದು, ಶ್ರೀ ಗಣಪತಿ ಎಲ್.ಟಿ(ಸ್ಕೌಟ್) ಶಿಬಿರದ ನಾಯಕರಾಗಿದ್ದರು. ರೋವರ್ ಸ್ಕೌಟ್ ಲೀಡರ್ ಮುಂದುವರೆದ ತರಬೇತಿ ಶಿಬಿರದಲ್ಲಿ 18 ಶಿಬಿರಾರ್ಥಿಗಳು ಭಾಗವಹಿಸಿದ್ದು, ಶ್ರೀ ಕಮ್ಮರುದ್ದೀನ್ ಸುಬೇದಾರ್, ಎಲ್.ಟಿ(ರೋವರ್) ಶಿಬಿರದ ನಾಯಕರಾಗಿದ್ದರು. ರೇಂಜರ್ ಲೀಡರ್ ಮೂಲ ತರಬೇತಿ ಶಿಬಿರದಲ್ಲಿ 21 ಶಿಬಿರಾರ್ಥಿಗಳು ಭಾಗವಹಿಸಿದ್ದು. ಡಾ. ಅಂಜುಳಾ ಎಲ್.ಟಿ (ರೇಂಜರ್) ಶಿಬಿರದ ನಾಯಕಿಯಾಗಿದ್ದರು. ರೇಂಜರ್ ಲೀಡರ್ ಮುಂದುವರೆದ ತರಬೇತಿ ಶಿಬಿರದಲ್ಲಿ 9 ಶಿಬಿರಾರ್ಥಿಗಳು ಭಾಗವಹಿಸಿದ್ದು, ಡಾ. ಎಸ್. ಶುಭಾಎಲ್.ಟಿ(ರೇ) ಶಿಬಿರದ ನಾಯಕಿಯಾಗಿದ್ದರು.

ಸ್ಕೌಟ್ ಮಾಸ್ಟರ್ಸ್ ಮುಂದುವರೆದ ತರಬೇತಿ ಶಿಬಿರದಲ್ಲಿ 8 ಶಿಬಿರಾರ್ಥಿಗಳು ಭಾಗವಹಿಸಿದ್ದು ಶ್ರೀ ರಾಜಶೇಖರ್ ಎ.ಎಲ್.ಟಿ.(ಸ್ಕೌಟ್) ಶಿಬಿರದ ನಾಯಕರಾಗಿದ್ದರು. ಗೈಡ್ ಕ್ಯಾಪ್ಟನ್ಸ್ ಮುಂದುವರೆದ ತರಬೇತಿ ಶಿಬಿರದಲ್ಲಿ 6 ಶಿಬಿರಾರ್ಥಿಗಳು ಭಾಗವಹಿಸಿದ್ದು ಶ್ರೀಮತಿ ಎನ್. ಉಮಾದೇವಿ ಎಲ್.ಟಿ (ಗೈಡ್) ಶಿಬಿರದ ನಾಯಕರಾಗಿದ್ದರು. ರೋವರ್ ಸ್ಕೌಟ್ ಲೀಡರ್ ಮತ್ತು ರೇಂಜರ್ ಲೀಡರ್ ತರಬೇತಿ ಶಿಬಿರಕ್ಕೆ ಸಹಾಯಕರಾಗಿ ಶ್ರೀ ವಿ.ಎ ಸಾತ್‌ಪುತೆ, ಶ್ರೀ ಜಲೀಲ್ ಅಹಮ್ಮದ್, ಶ್ರೀ ಚಂದ್ರಶೇಖರಯ್ಯ, ಶ್ರೀಮತಿ ಆಶೀತಾ ಸ್ಪೂರ್ತಿ ಸಲ್ಡಾನ, ಡಾ. ಕನ್ನಿಕಾ ಪರಮೇಶ್ವರಿ, ಶ್ರೀಮತಿ ಮಲ್ಲೇಶ್ವರಿ ಜುಜಾರೆ, ರೇಂಜರ್ ಉಸ್ತುವಾರಿ ಇವರು ಕಾರ್ಯನಿರ್ವಹಿಸಿದರು. ಸ್ಕೌಟ್ ಮಾಸ್ಟರ್ಸ್ ಮತ್ತು ಗೈಡ್ ಕ್ಯಾಪ್ಟನ್ಸ್‌ಗಳ ಮುಂದುವರೆದ ತರಬೇತಿ ಶಿಬಿರಕ್ಕೆ ಸಹಾಯಕರಾಗಿ ಶ್ರೀ ಭೀಮ್‌ರಾಜ್, ಶ್ರೀ ಮಲ್ಲಪ್ಪ, ಶ್ರೀಮತಿ ಶಶಿರೇಖಾ, ಶ್ರೀಮತಿ ಗೌರಾಬಾಯಿ ಇವರು ಕಾರ್ಯನಿರ್ವಹಿಸಿದರು.

ಜುಲೈ 17 ರಂದು ಮಧ್ಯಾಹ್ನ ಪ್ರಾರ್ಥನೆ ಮತ್ತು ಧ್ವಜಾರೋಹಣ ಸಮಾರಂಭದೊಂದಿಗೆ ತರಬೇತಿ ಶಿಬಿರಗಳು ಪ್ರಾರಂಭಗೊಂಡವು. **S.O.T** ಪ್ರಕಾರ ಮೂಲ ಮತ್ತು ಮುಂದುವರೆದ ತರಬೇತಿಯನ್ನು ನಡೆಸಲಾಯಿತು. ಜುಲೈ 19 ಮತ್ತು 20 ರಂದು ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಎನ್. ಶ್ರೀನಿವಾಸನ್, ಎಲ್.ಟಿ(ಸ್ಕೌಟ್), ಸಹಾಯಕ ರಾಜ್ಯ ಆಯುಕ್ತರು (ತರಬೇತಿ) ಹಾಗೂ ಉಸ್ತುವಾರಿ ರಾಜ್ಯ ಆಯುಕ್ತರು (ಸ್ಕೌಟ್), ವ.ಸಂ, ಶ್ರೀಮತಿ ಬಿ.ವಿ ರಾಮಲತಾ, ಎಲ್.ಟಿ(ರೇ), ರಾಜ್ಯ ಆಯುಕ್ತರು (ಗೈಡ್), ವ.ಸಂ ಇವರು ಭಾಗವಹಿಸಿದ್ದು ಸ್ಕೌಟ್ಸ್ ಮಾರ್ಗದರ್ಶನ ನೀಡಿದರು. ಪರಿಸರ ಗಣಪತಿ ಬಗ್ಗೆ ಶ್ರೀ ಗುರುಮೂರ್ತಿ ಆಚಾರ್‌ರವರು ಮಾಹಿತಿ ನೀಡಿದರು. ಯೋಗ ಪ್ರಾಣ ವಿದ್ಯಾ ಸಾಧನ ಸಂಸ್ಥೆಯಿಂದ ಶ್ರೀಮತಿ ಯು. ರಮ್ಯ ಆಶ್ವಿನ್‌ರವರು ಭಾಗವಹಿಸಿದ್ದರು. ಯೋಗ ಪ್ರಾಣ ವಿದ್ಯಾ ಸಾಧನೆಯ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡಿದರು.

ಜುಲೈ 22 ರಂದು ಸಂಜೆ ಭವ್ಯ ಶಿಬಿರಾಗ್ನಿ ಕಾರ್ಯಕ್ರಮವನ್ನು ನಡೆಸಲಾಯಿತು. ಶ್ರೀ ಎಂ.ಎ. ಚೆಲ್ಲಯ್ಯ ಸಂಯೋಜಕರು, ರಾಜ್ಯ ತರಬೇತಿ ಕೇಂದ್ರ, ದೊಡ್ಡಬಳ್ಳಾಪುರ ಉಪಸ್ಥಿತರಿದ್ದು ಶಿಬಿರಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ಜುಲೈ 23 ರಂದು ಬೆಳಿಗ್ಗೆ 07.00 ಗಂಟೆಗೆ ಸರ್ವಧರ್ಮ ಪ್ರಾರ್ಥನಾ ಸಮಾರಂಭವು ಜರುಗಿತು. ಶಿಬಿರಗಳ ಸಂಘಟನೆಯ ಸಂಪೂರ್ಣ ಜವಾಬ್ದಾರಿಯನ್ನು ಶ್ರೀ ನಾಗೇಶ್ ಆರ್. ಶಿವಪೂರ್ ಎಲ್.ಟಿ.(ಎಸ್), ಎಸ್.ಟಿ.ಸಿ.(ಎಸ್) ಮತ್ತು ಶ್ರೀಮತಿ ಕೆ.ವಿ ಶಾಮಲ ಎಲ್.ಟಿ.(ಗೈ), ಎಸ್.ಟಿ.ಸಿ.(ಗೈ)ರವರು ವಹಿಸಿದ್ದರು.








# ರಾಜ್ಯ ಮಟ್ಟದಿಂದ ಆಯೋಜಿಸಿದ್ದ ವಿಭಾಗೀಯ ಮಟ್ಟದ ಕಬ್‌ಮಾಸ್ಟರ್ಸ್, ಸ್ಕೌಟ್ ಮಾಸ್ಟರ್ಸ್ ಫ್ಲಾಕ್ ಲೀಡರ್ಸ್ ಮತ್ತು ಗೈಡ್ ಕ್ಯಾಪ್ಟನ್ಸ್‌ಗಳ ಮುಂದುವರೆದ ತರಬೇತಿ ಶಿಬಿರಗಳು

ರಾಜ್ಯ ಮಟ್ಟದಿಂದ ಆಯೋಜಿಸಿದ್ದ ವಿಭಾಗೀಯ ಮಟ್ಟದ ಕಬ್ ಮಾಸ್ಟರ್ಸ್, ಸ್ಕೌಟ್ ಮಾಸ್ಟರ್ಸ್, ಫ್ಲಾಕ್ ಲೀಡರ್ಸ್ ಮತ್ತು ಗೈಡ್ ಕ್ಯಾಪ್ಟನ್ಸ್‌ಗಳ ಮುಂದುವರೆದ ತರಬೇತಿ ಶಿಬಿರವನ್ನು ಆಯೋಜಿಸಲಾಗಿತ್ತು. ಶಿಬಿರದ ವಿವರ ಈ ಕೆಳಕಂಡಂತಿದೆ.

| ಕ್ರ.ಸಂ. | ತರಬೇತಿ ದಿನಾಂಕ | ತರಬೇತಿ ಸ್ಥಳ | ಭಾಗವಹಿಸಿದ ಜಿಲ್ಲೆಗಳು | ಗೈಡ್ ಶಾಖೆಯ ನಾಯಕರು | ಸ್ಕೌಟ್ ಶಾಖೆಯ ನಾಯಕರು |
|---|---|---|---|---|---|
| 1 | 24.06.2025 ರಿಂದು 30.06.2025 | ಕೊಂಡಜ್ಜಿ ಬಸಪ್ಪ ಸ್ಕೌಟ್ & ಗೈಡ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ಕೊಂಡಜ್ಜಿ, ದಾವಣಗೆರೆ | ದಾವಣಗೆರೆ, ಚಿತ್ರದುರ್ಗ, ಚಿಕ್ಕಮಗಳೂರು, ಶಿವಮೊಗ್ಗ ಹಾವೇರಿ | ಫ್ಲಾಕ್ ವಿಭಾಗಕ್ಕೆ– ಶ್ರೀಮತಿ ಸಿದ್ದಮ್ಮ ಎ.ಎಲ್.ಟಿ(ಬಿ) ಗೈಡ್ ವಿಭಾಗಕ್ಕೆ– ಶ್ರೀಮತಿ ರತ್ನ. ಎಂ ಎಲ್.ಟಿ(ಗೈ) | ಕಬ್ ವಿಭಾಗಕ್ಕೆ– ಶ್ರೀ ಆಂಜನಯ್ಯ ಎ.ಎಲ್.ಟಿ(ಕ) ಸ್ಕೌಟ್ ವಿಭಾಗಕ್ಕೆ– ಶ್ರೀ ಎಂ.ಆರ್. ಪಾಟೀಲ್ ಎಲ್.ಟಿ(ಸ್ಕೌ) ಶ್ರೀ ವಿಜಯ್ ಎಲ್.ಟಿ(ಸ್ಕೌ) |
| 2 | 24.06.2025 ರಿಂದ 30.06.2025 | ಕೊಪ್ಪಳ– ಜಿಲ್ಲಾ ತರಬೇತಿ ಕೇಂದ್ರ ಗುನ್ನಾಳ, ಕೊಪ್ಪಳ ಜಿಲ್ಲೆ | ಕೊಪ್ಪಳ, ಬಳ್ಳಾರಿ ಗದಗ, ವಿಜಯನಗರ, ರಾಯಚೂರು | ಗೈಡ್ ವಿಭಾಗಕ್ಕೆ– ಶ್ರೀಮತಿ ಸರೋಜ ಎ. ಎ.ಎಲ್.ಟಿ(ಗೈ) | ಕಬ್ ವಿಭಾಗಕ್ಕೆ– ಶ್ರೀ ಮಾರುತಿ ಆರೇರಾ ಎ.ಎಲ್.ಟಿ(ಕಬ್) ಸ್ಕೌಟ್ ವಿಭಾಗಕ್ಕೆ – ಶ್ರೀ ಶ್ರೀಕಾಂತ್ ಮಾಸಗಟ್ಟಿ ಎ.ಎಲ್.ಟಿ(ಸ್ಕೌಟ್) |
| 3 | 24.06.2025 ರಿಂದ 30.06.2025 | ವಿಜಯಪುರ– ವಾಸಂತಿಬಾಯಿ ಜಿಗಜಿನಿ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ತರಬೇತಿ ಕೇಂದ್ರ ಬುರಣಾಪುರ, ವಿಜಯಪುರ | ಬಾಗಲಕೋಟೆ, ವಿಜಯಪುರ, ಬೆಳಗಾವಿ (ಚಿಕ್ಕೋಡಿ) | ಗೈಡ್ ವಿಭಾಗಕ್ಕೆ– ಶ್ರೀಮತಿ ಲಕ್ಷ್ಮೀ.ಎಸ್. ಬಹದ್ದೂರಿ ಎ.ಎಲ್.ಟಿ(ಗೈ), ಬೆಳಗಾವಿ | ಸ್ಕೌಟ್ ವಿಭಾಗಕ್ಕೆ– ಶ್ರೀ ಅಮರೇಶ್ ಕೋರಿ ಎಲ್.ಟಿ(ಸ್ಕೌಟ್) |
| 4 | 24.06.2025 ರಿಂದ 30.06.2025 | ಉಡುಪಿ– ಡಾ. ವಿ.ಎಸ್. ಆಚಾರ್ಯ, ಜಿಲ್ಲಾ ತರಬೇತಿ ಕೇಂದ್ರ, ಉಡುಪಿ ಜಿಲ್ಲೆ | ಉಡುಪಿ, ದಕ್ಷಿಣ ಕನ್ನಡ, ಕೊಡಗು, ಶಿರಸಿ, ಕಾರವಾರ | ಫ್ಲಾಕ್ ವಿಭಾಗಕ್ಕೆ– ಗೈಡ್ ವಿಭಾಗಕ್ಕೆ– ಶ್ರೀಮತಿ ಸುಫಲಾ ಎಲ್.ಟಿ(ಗೈ) | ಕಬ್ ವಿಭಾಗಕ್ಕೆ– ಶ್ರೀ ನಾಗೇಶ್ .ಆರ್ ಶಿವಪೂರ್ ಎಲ್.ಟಿ (ಸ್ಕೌಟ್) ಮತ್ತು ಎಸ್.ಟಿ.ಸಿ(ಸ್ಕೌಟ್) ಸ್ಕೌಟ್ ವಿಭಾಗಕ್ಕೆ– ಶ್ರೀ ಬಿ ಆನಂದ ಅಡಿಗ ಎಲ್.ಟಿ(ಸ್ಕೌಟ್) |
| 5 | 24.06.2025 ರಿಂದ 30.06.2025 | ದೊಡ್ಡಬಳ್ಳಾಪುರ– ಡಾ॥ ಅನಿಬೆಸೆಂಟ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ ಚಿಕ್ಕಬಳ್ಳಾಪುರ, ಬೀದರ್, ಯಾದಗಿರಿ, ಕಲಬುರ್ಗಿ | ಬೆಂಗಳೂರು ದಕ್ಷಿಣ, ಉತ್ತರ, ಪೂರ್ವ, ಗ್ರಾಮಾಂತರ, ಬಿಬಿಎಂಪಿ, ಮೈಸೂರು, ಮಂಡ್ಯ ರಾಮನಗರ, ಕೋಲಾರ, ಮಧುಗಿರಿ, ತುಮಕೂರು | ಗೈಡ್ ವಿಭಾಗಕ್ಕೆ– ಶ್ರೀಮತಿ ಗೀತಾ ನಟರಾಜ್ ಎಲ್.ಟಿ(ಗೈ) ಡಾ, ಶಬಾನ ಎಲ್.ಟಿ (ಗೈ) | ಕಬ್ ವಿಭಾಗಕ್ಕೆ– ಶ್ರೀ ವಿ. ಬಾಬು ಎ.ಎಲ್.ಟಿ(ಕ) ಸ್ಕೌಟ್ ವಿಭಾಗಕ್ಕೆ– ಶ್ರೀ ಕೃಷ್ಣಯ್ಯ ಎಲ್.ಟಿ (ಸ್ಕೌ) ಶ್ರೀ ನಾಗೇಶ್ .ಆರ್ ಶಿವಪೂರ್ ಎಲ್.ಟಿ (ಸ್ಕೌಟ್) ಮತ್ತು ಎಸ್.ಟಿ.ಸಿ (ಸ್ಕೌಟ್) |
| 6 | 24.06.2025 ರಿಂದ 30.06.2025 | ಧಾರವಾಡ– ಸಸ್ಯಚೇತನ ಜಿಲ್ಲಾ ತರಬೇತಿ ಕೇಂದ್ರ, ದಡ್ಡಿಕಮಲಾಪುರ, ಧಾರವಾಡ | ಧಾರವಾಡ, ಬೆಳಗಾವಿ, ಶಿರಸಿ | ಫ್ಲಾಕ್ ವಿಭಾಗಕ್ಕೆ– ಶ್ರೀಮತಿ ಶಾಮಲ ಕೆ.ವಿ ಎಲ್.ಟಿ (ಗೈ), ಮತ್ತು ಎಸ್.ಟಿ.ಸಿ(ಗೈ) ಗೈಡ್ ವಿಭಾಗಕ್ಕೆ– ಶ್ರೀಮತಿ ರತ್ನವ್ವ ಗುಂಜಾಲ್ ಎಲ್.ಟಿ. (ಗೈ) | ಕಬ್ ವಿಭಾಗಕ್ಕೆ– ಶ್ರೀ ಎಸ್.ಎಸ್. ಹುಸೇನಿ ಎ.ಎಲ್.ಟಿ. (ಕಬ್) ಸ್ಕೌಟ್ ವಿಭಾಗಕ್ಕೆ– ಶ್ರೀ ಚಂದ್ರಶೇಖರ್ ಎ.ಎಲ್.ಟಿ, ಎ.ಎಲ್.ಟಿ (ಕ) ಶ್ರೀ ಸಿ.ಎಮ್ ಕೇಂಗಾರ್ ಎ.ಎಲ್.ಟಿ (ಸ್ಕೌ) |

ಸದರಿ ಶಿಬಿರಗಳ ಉದ್ಘಾಟನೆ ಸಮಾರಂಭವು ಆಯಾ ಶಿಬಿರಗಳ ನಾಯಕರ ಉಪಸ್ಥಿತಿಯಲ್ಲಿ ಜರುಗಿದವು.

ಶ್ರೀ ಪಿ.ಜಿ.ಆರ್. ಸಿಂಧ್ಯಾ, ರಾಜ್ಯ ಮುಖ್ಯ ಆಯುಕ್ತರು ಇವರು ವಿಜಯಪುರ ತರಬೇತಿ ಕೇಂದ್ರ, ಧಾರವಾಡ ತರಬೇತಿ ಕೇಂದ್ರ, ಕೊಂಡಜ್ಜಿ ತರಬೇತಿ ಕೇಂದ್ರ ಮತ್ತು ದೊಡ್ಡಬಳ್ಳಾಪುರ ತರಬೇತಿ ಶಿಬಿರಕ್ಕೆ ಭೇಟಿ ನೀಡಿ ಸ್ಕೌಟ್ಸ್ ಮತ್ತು ಗೈಡ್ಸ್ ಶಿಕ್ಷಣದ ಮಹತ್ವದ ಬಗ್ಗೆ ಹಾಗೂ ತರಬೇತುದಾರರು ಮತ್ತು ಶಿಬಿರಾರ್ಥಿಗಳು ಮಾಡಬೇಕಾದ ಕರ್ತವ್ಯಗಳ ಬಗ್ಗೆ ತಿಳಿಸಿ, ಯುವ ಜನಾಂಗದ ಶ್ರೇಯೋಭಿವೃದ್ಧಿಗೆ ಶ್ರಮಿಸಲುಕರೆ ನೀಡಿದರು.


ಕೊಂಡಜ್ಜಿ


ಕೊಂಡಜ್ಜಿ


ಕೊಂಡಜ್ಜಿ


ಕೊಂಡಜ್ಜಿ


ಕೊಂಡಜ್ಜಿ


ವಿಜಯಪುರ


ವಿಜಯಪುರ


ಉಡುಪಿ


ಉಡುಪಿ


ಉಡುಪಿ


ಕೊಪ್ಪಳ


ಕೊಪ್ಪಳ


ಧಾರವಾಡ


ಧಾರವಾಡ


ಧಾರವಾಡ


ಧಾರವಾಡ


ದೊಡ್ಡಬಳ್ಳಾಪುರ


ದೊಡ್ಡಬಳ್ಳಾಪುರ


ದೊಡ್ಡಬಳ್ಳಾಪುರ


ದೊಡ್ಡಬಳ್ಳಾಪುರ


ದೊಡ್ಡಬಳ್ಳಾಪುರ


ದೊಡ್ಡಬಳ್ಳಾಪುರ

ಯೋಗ ಪ್ರಾಣ ವಿದ್ಯಾ ಸಾಧನ ಸಂಸ್ಥೆಯಿಂದ ಶ್ರೀಮತಿ ಯು. ರಮ್ಯ ಆಶ್ವಿನ್‌ರವರು 4 ತರಬೇತಿ ಕೇಂದ್ರಗಳಿಗೆ ಭೇಟಿ ನೀಡಿ ಯೋಗ ಪ್ರಾಣ ವಿದ್ಯಾ ಸಾಧನೆಯ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡಿದರು. ದೊಡ್ಡಬಳ್ಳಾಪುರ ತರಬೇತಿ ಶಿಬಿರಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ, ಶ್ರೀ ಎನ್ ಶ್ರೀನಿವಾಸನ್ ಸಹಾಯಕ ರಾಜ್ಯ ಆಯುಕ್ತರು, ಎಲ್.ಟಿ (ಸ್ಕೌಟ್) ಭಾಗವಹಿಸಿದ್ದರು. 06 ತರಬೇತಿ ಕೇಂದ್ರಗಳಲ್ಲಿ ನಡೆದ ಎಲ್ಲಾ ತರಬೇತಿ ಶಿಬಿರಗಳಲ್ಲಿ ಒಟ್ಟು 545 ಶಿಬಿರಾರ್ಥಿಗಳು ಭಾಗವಹಿಸಿದ್ದು 70 ಸಿಬ್ಬಂದಿ ವರ್ಗದವರು ತರಬೇತಿ ನೀಡಿದರು.

ಜೂನ್ 30 ರಂದು ಎಲ್ಲಾ ತರಬೇತಿ ಕೇಂದ್ರಗಳಲ್ಲಿ ಸರ್ವಧರ್ಮ ಪ್ರಾರ್ಥನೆಯನ್ನು ನಡೆಸಲಾಯಿತು. ಮೇಲ್ಕಂಡ ತರಬೇತಿಗಳ ಸಂಘಟನೆಯ ಸಂಪೂರ್ಣ ಜವಾಬ್ದಾರಿಯನ್ನು ಶ್ರೀ ನಾಗೇಶ್ ಆರ್. ಶಿವಪೂರ್ ಎಲ್.ಟಿ.(ಎಸ್), ಎಸ್.ಟಿ.ಸಿ.(ಎಸ್) ಮತ್ತು ಶ್ರೀಮತಿ ಕೆ.ವಿ. ಶಾಮಲ, ಎಲ್.ಟಿ.(ಗೈ), ಎಸ್.ಟಿ.ಸಿ.(ಗೈ)ರವರು ವಹಿಸಿದ್ದರು.

# Congratulations





A Proud Moment for The Bharat Scouts and Guides Mr. Mohamed Ali Khalid, Addl. Chief National Commissioner & State Commissioner (Scout) Karnataka and Mr. Madhusudan Avala, Addl. International Commissioner, were honoured with the prestigious International Friendship Award by the National Scout Organization of Thailand on 30th June 2025, during the celebration of 114 Thailand's National Scout Day (NSOT) This international recognition is not only a personal honour but also a proud milestone for the The Bharat Scouts and Guides, showcasing the continued contribution of the Bharat Scouts and Guides to Gloobal Scouting.

# BEST WISHES







**Sri M.A. Chellaiah, Senior Adult Leader (S) a Samaja Snehi has turned @ 82 on 08.07.2025**

Sri P.G.R. Sindhia Former Minister and state chief commissioner Felicitated Sri M.A. Chellaiah at a Simple gathering of friends and well wishers at the conference hall of the BBMP District Association on July 08th. In his felicitation and presidential address he said the services rendered by him to the society in the filed of Education, Social, Community Service and to The Bharat Scouts and Guides is ever remembered by every one benefited through his valuable services.

Sri K. Gangappa Gowda, State Secretary, Smt. Harishilpa, K.A.S Special Land Acquisition Officer, addressed the gathering, Smt. B.V. Ramalatha, State Commissioner (AR), Sri M.S. Satheesh, Joint State Secretary (S), Dr. C.V. Krupa Vijai, Joint State Secretary (G), Dr. U. Karthikeryan, Yoga Instructor, Sri Karthik Yoga Trust (R) and the Staff Members were present.




## ಬಾಗಲಕೋಟೆ

* ಜುಲೈ 16 ರಂದು ಬಾಗಲಕೋಟೆ ಜಿಲ್ಲೆಯ, ಶಾಲಾ ಶಿಕ್ಷಣ ಇಲಾಖೆ ಹಾಗೂ ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆಗಳ ಸಮಾಲೋಚನಾ ಸಭೆಯು ಮಾಜಿ ಸಚಿವರು ಹಾಗೂ ಅಧ್ಯಕ್ಷರು ಶ್ರೀ ಎಸ್.ಆರ್. ಪಾಟೀಲ ಮತ್ತು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರ ಅಧ್ಯಕ್ಷತೆಯಲ್ಲಿ ಜರುಗಿತು. ಶ್ರೀ ಜಿ.ಎನ್. ಪಾಟೀಲ್, ಉಪಾಧ್ಯಕ್ಷರು ಶ್ರೀ ವೈ.ಎಂ. ಬೆಂಡಿಗೇರಿ, ಜಿಲ್ಲಾ ಕೋಶಾಧಿಕಾರಿಗಳು, DDPI ಶ್ರೀ ಹೆಚ್.ಜಿ. ಮಿರ್ಜಿ, ಶ್ರೀ ಎಸ್.ಎಸ್. ದಳವಾಯಿ, ಕಾರ್ಯದರ್ಶಿ ಹಾಗೂ SOC ಶ್ರೀಮತಿ ಮಂಜುಳಾ. ಸಿ, ಜಿಲ್ಲಾ ಸಂಘಟಕ ಕು. ಪ್ರಮೋದ ಚೌಗುಲೆ, ಶ್ರೀ ನಾರಾಯಣ ಯಳ್ಳಿಗುತ್ತಿ ಹಾಗೂ ತಾಲೂಕು ಕಾರ್ಯದರ್ಶಿಗಳು ಹಾಗೂ ಜಿಲ್ಲಾ ಪದಾಧಿಕಾರಿಗಳು ಭಾಗವಹಿಸಿದ್ದರು.



* ಜುಲೈ 16 ರಂದು ಶಾಲಾ ಶಿಕ್ಷಣ ಇಲಾಖೆ ಹಾಗೂ ಬಾಗಲಕೋಟೆ ಜಿಲ್ಲಾ ವತಿಯಿಂದ ಶಿಕ್ಷಣ ಇಲಾಖೆಯ ಅನುಷ್ಠಾನಾಧಿಕಾರಿಗಳಾದ BEO, BRCO, TPEO, ECO, BRP, CRP ರವರಿಗೆ ಸ್ಕೌಟ್ ಗೈಡ್ ಕುರಿತು ಮಾಹಿತಿ ಕಾರ್ಯಗಾರವನ್ನು ಬಾಪೂಜಿ ಬ್ಯಾಂಕ್ ಸಭಾಭವನ ನವನಗರದಲ್ಲಿ ಆಯೋಜಿಸಲಾಗಿತ್ತು. ಸದರಿ ಕಾರ್ಯಗಾರದಲ್ಲಿ ಮಾಜಿ ಸಚಿವರು ಹಾಗೂ ಅಧ್ಯಕ್ಷರಾದ ಶ್ರೀ ಎಸ್.ಆರ್. ಪಾಟೀಲ, ಮಾಜಿ ಸಚಿವರು ಹಾಗೂ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ, ಶ್ರೀ ಜಿ.ಎನ್. ಪಾಟೀಲ್, ಉಪಾಧ್ಯಕ್ಷರು ಶ್ರೀ ವೈ.ಎಂ. ಬೆಂಡಿಗೇರಿ, ಜಿಲ್ಲಾ ಕೋಶಾಧಿಕಾರಿಗಳು, ಆಆಕಖ ಶ್ರೀ ಹೆಚ್.ಜಿ. ಮಿರ್ಜಿ, ಶ್ರೀ ಎಸ್.ಎಸ್. ದಳವಾಯಿ, ಕಾರ್ಯದರ್ಶಿ ಹಾಗೂ ಖಔಅ ಶ್ರೀಮತಿ ಮಂಜುಳಾ. ಸಿ ಹಾಗೂ ಜಿಲ್ಲೆಯ 150ಕ್ಕೂ ಹೆಚ್ಚು ಶಿಕ್ಷಣ ಇಲಾಖೆ ಅಧಿಕಾರಿಗಳು ಹಾಗೂ ತಾಲೂಕಾ ಕಾರ್ಯದರ್ಶಿಗಳು ಜಿಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು.



## ಬಳ್ಳಾರಿ

* ಜುಲೈ 15ರಂದು ಶ್ರೀ ಪ್ರಶಾಂತ್ ಕುಮಾರ್ ಮಿಶ್ರಾ, ಭಾ.ಆ.ಸೇ., ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ದಂಡಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಸಂಸ್ಥೆ ಬಳ್ಳಾರಿ ಇವರು 2025–26ನೇಯ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯ ಪುಸ್ತಕಗಳನ್ನ ಬಿಡುಗಡೆ ಮಾಡಿ ಚಟುವಟಿಕೆಗಳಿಗೆ ಸಹಕಾರ ಮಾಡುತ್ತೇವೆ ಎಂದು ಹೇಳಿದರು. ನಂತರ ಡಾ. ವಿ.ಜೆ. ಶೋಬಾರಾಣಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಬಳ್ಳಾರಿ, ಡಾ. ಜಿ.ಎಂ. ತಿಪ್ಪೇಸ್ವಾಮಿ, ಪ್ರಾಂಶುಪಾಲರು, ಉಪನಿರ್ದೇಶಕರು (ಅಭಿವೃದ್ಧಿ) ಶಾಲಾ ಶಿಕ್ಷಣ ಇಲಾಖೆ ಬಳ್ಳಾರಿ, ಶ್ರೀಮತಿ ಕಸ್ತೂರಿ, ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಅಧ್ಯಕ್ಷರು, ಸ್ಥಳೀಯ ಸಂಸ್ಥೆ ಬಳ್ಳಾರಿ, ಶ್ರೀ ತುಕಾರಾಮರಾವ್, ಹಿರಿಯ ಸಹಾಯಕ ನಿರ್ದೇಶಕರು, ವಾರ್ತಾ ಇಲಾಖೆ ಬಳ್ಳಾರಿ ಇವರು ವಾರ್ಷಿಕ ಕ್ರಿಯಾ ಯೋಜನೆ ಪುಸ್ತಕಗಳನ್ನು ಬಿಡುಗಡೆ ಮಾಡಿ ಚಟುವಟಿಕೆಗಳಿಗೆ ಶುಭ ಕೋರಿದರು. ಇದೇ ಸಂದರ್ಭದಲ್ಲಿ ಶ್ರೀ ಎಂ.ಟಿ. ಮಲ್ಲೇಶ್, ಉಪಾಧ್ಯಕ್ಷರು, ಶ್ರೀ ಶಿವಾಜಿರಾವ್, ಉಪಾಧ್ಯಕ್ಷರು, ಶ್ರೀ ಕುಪಗಲ್ ವೀರೇಶ್, ಜಿಲ್ಲಾ ಆಯುಕ್ತರು (ಸ್ಕೌಟ್), ಶ್ರೀ ನಾಗರಾಜ್, ಜಿಲ್ಲಾ ತರಬೇತಿ ಆಯುಕ್ತರು (ಸ್ಕೌಟ್), ಶ್ರೀ ಕೆ. ದೊಡ್ಡಬಸಪ್ಪ, ಕಾರ್ಯದರ್ಶಿಗಳು ಸ್ಥಳೀಯ ಸಂಸ್ಥೆ ಬಳ್ಳಾರಿ, ಕು. ತಿಪ್ಪೇಶ, ರೋವರ್ ಹಾಗೂ ಕು. ಮಹಮ್ಮದ್ ಶರ್ಫುದ್ದೀನ್, ಜಿಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್ ಸಹಾಯಕರವರು ಉಪಸ್ಥಿತರಿದ್ದರು.



* ಜೂನ್ 21 ರಂದು 'ಯೋಗ ದಿನಾಚರಣೆ'ಯನ್ನು ಸರಕಾರಿ ಪ್ರೌಢಶಾಲೆ, ಅರಳಿಗನೂರು ತಾ॥ ಸಿರುಗುಪ್ಪ ಜಿ॥ ಬಳ್ಳಾರಿಯಲ್ಲಿ ಆಚರಿಸಲಾಯಿತು. ಸ್ಕೌಟ್ಸ್‌ಗಳು ಹಾಗೂ ವಿದ್ಯಾರ್ಥಿಗಳೊಂದಿಗೆ ಮುಖ್ಯ ಗುರುಗಳಾದ ಶ್ರೀ ಹುಸೇನ್ ಪೀರ್, ಸಹ ಶಿಕ್ಷಕರು ಪ್ರಾಥಮಿಕ ಶಾಲೆಯ ಮುಖ್ಯ ಗುರುಗಳಾದ ಶ್ರೀ ಪ್ರಭುಲಿಂಗಯ್ಯ ಸ್ವಾಮಿ ಭಾಗವಹಿಸಿದ್ದರು. ಶ್ರೀ ನಟರಾಜ ಸ್ವಾಮಿಯವರು ಪ್ರಥಮವಾಗಿ ಯೋಗದ ಬಗ್ಗೆ ಮಾಹಿತಿಯನ್ನು ತಿಳಿಸಿದರು. ಶಾಂತಿ ನಿಕೇತನ ವಿದ್ಯಾಮಂದಿರ ಆಂಗ್ಲಮಾಧ್ಯಮ ಶಾಲೆ ಸಿರುಗುಪ್ಪ ತಾ॥ ಬಳ್ಳಾರಿ ಜಿ॥ಯಲ್ಲಿ ಶಾಲಾ ಮುಖ್ಯಸ್ಥರಾದ ಶ್ರೀ ಕೆ. ಕೃಷ್ಣ, ಶಾಲಾ ಮುಖ್ಯೋಪಾದ್ಯಾಯಿನಿ ಶ್ರೀಮತಿ ಲಲಿತಾಶಾಸ್ತ್ರಿ ಹಾಗೂ ಸ್ಕೌಟ್ಸ್ ಶಿಕ್ಷಕರಾದ ಶ್ರೀ ಸುಧೀಂದ್ರ ಕೆ., ಗೈಡ್ಸ್ ಶಿಕ್ಷಕಿಯಾದ ಶ್ರೀಮತಿ ಯೋಗೇಶ್ವರಿ ಹಾಗೂ ಸ್ಕೌಟ್ಸ್–ಗೈಡ್ಸ್‌ಗಳಿಗೆ ಯೋಗ ಮಾಡಿ ವಿಶ್ವ ಯೋಗ ದಿನಾಚರಣೆಯನ್ನು ಆಚರಿಸಿದರು. ಸರಕಾರಿ ಹಿರಿಯ ಪ್ರಾಥಮಿಕ ಶಾಲೆ (ರಾಜೀವ್ ಗಾಂಧಿನಗರ) ಸಿರುಗುಪ್ಪದಲ್ಲಿ ಮುಖ್ಯಗುರುಗಳಾದ ಶ್ರೀಮತಿ ಗೀತಾ ಜೆ., ಗೈಡ್ಸ್ ಶಿಕ್ಷಕಿ, ಗೈಡ್ಸ್‌ಗಳಿಗೆ ಯೋಗ ಮಾಡಿಸಿ ಈ ವರ್ಷದ ಧ್ಯೇಯವಾಕ್ಯ "ಒಂದೇ ಭೂಮಿ ಒಂದೇ ಆರೋಗ್ಯ" ಯೋಗವು



ಸಾರ್ವಕಾಲಿಕತೆಗೆ ಸಾಕ್ಷಿ, ದೇಶ ಭಾಷೆ ಧರ್ಮಗಳ ಹಂಗಿಲ್ಲದೆ ದೇಶ ವಿದೇಶಗಳಲ್ಲಿಯೂ ಜನಪ್ರಿಯವಾಗಿದೆ ಎಂದು ತಿಳಿಸಿದರು. ಶ್ರೀಕೃಷ್ಣದೇವರಾಯ ಪ್ರೌಢಶಾಲೆ ಸಿರುಗುಪ್ಪ, ಸರಕಾರಿ ಪ್ರೌಢಶಾಲೆ ರಾರಾವಿ, ಸರಕಾರಿ ಪ್ರೌಢಶಾಲೆ ಬಲಕುಂದಿ, ಸದಾಶಿವರೆಡ್ಡಿ ಪ್ರೌಢಶಾಲೆ ದೇವನೂರು, ಸಿ.ಎಸ್.ಎಸ್. ಶಾಲೆ ಸಿಗುರುಪ್ಪ ಎಸ್.ಇ.ಎಸ್. ಶಾಲೆ ಸಿರುಗುಪ್ಪ ಹಾಗೂ ತಾಲ್ಲೂಕಿನ ವಿವಿಧ ಶಾಲೆಗಳಲ್ಲಿ ಯೋಗ ದಿನಾಚರಣೆಯನ್ನು ಆಚರಿಸಲಾಯಿತು.

## ಬೆಂಗಳೂರು ದಕ್ಷಿಣ

* ಬೆಂಗಳೂರು ದಕ್ಷಿಣ ಜಿಲ್ಲೆಯ ಸೆಂತ ಪೀಟರ್ಸ್ ಶಾಲೆಯಲ್ಲಿ ಜುಲೈ 05 ರಂದು ಶ್ರೀ ಕೆ. ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿಗಳು, ಶ್ರೀ ಎಂ.ಎಸ್. ಸತೀಶ್, ಜಿಲ್ಲಾ ಕಾರ್ಯದರ್ಶಿಗಳು ಶಾಲೆಯ ಹೊಸ ಸ್ಕೌಟ್ಸ್-ಗೈಡ್ಸ್ ಘಟಕಗಳನ್ನು ಉಧ್ಘಾಟಿಸಿ, ಸ್ಕೌಟ್ಸ್-ಗೈಡ್ಸ್‌ಗಳನ್ನು ಉದ್ದೇಶಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಶಾಲೆಯ ಆಡಳಿತ ಮಂಡಲಿಯ ಶ್ರೀ ಸಂಜಯ್ ಡಿ ಸೋಜಾರವರು, ಶಾಲೆಯ ಪ್ರಾಂಶುಪಾಲರು, ದಳನಾಯಕರುಗಳು ಸ್ಕೌಟ್ಸ್-ಗೈಡ್ಸ್‌ಗಳು ಉಪಸ್ಥಿತರಿದರು.



* ಬೆಂಗಳೂರು ದಕ್ಷಿಣ ಜಿಲ್ಲಾ ಸಂಸ್ಥೆ ವತಿಯಿಂದ ಜುಲೈ 10 ರಿಂದ 12ರ ವರಗೆ ರಾಜ್ಯ ಕೇಂದ್ರ ಕಚೇರಿ ಆವರಣದಲ್ಲಿ ಬನ್ನಿ ಲೀಡರ್ ತರಬೇತಿ ಶಿಬಿರವನ್ನು ಶ್ರೀಮತಿ ಕೃಪಾ ವಿಜಯ್ ಎಲ್.ಟಿ.(ಗೈಡ್) ಇವರ ನಾಯಕ್ವದಲ್ಲಿ ಆಯೋಜನೆ ಮಾಡಲಾಯಿತು. ಬೆಂಗಳೂರು ದಕ್ಷಿಣ ಜಿಲ್ಲೆಯ 14 ವಿವಿಧ ಶಾಲೆಗಳಿಂದ 26 ಶಿಬಿರಾರ್ಥಿಗಳು ತರಬೇತಿಯಲ್ಲಿ ಭಾಗವಹಿಸಿದರು. ತರಬೇತಿಯ ಸಮಾರೋಪ ಸಮಾರಂಭವು ಶ್ರೀ ಎಂ.ಕೆ ಖಾನ್‌ಜಿಲ್ಲಾ ಮುಖ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆಯಿತು. ಕಾರ್ಯಕ್ರಮದಲ್ಲಿ ಶ್ರೀ ಎ.ಎಸ್. ಮಧುಸೂಧನ್ ಉಪ ಅಂತರಾಷ್ಟ್ರೀಯ ಆಯುಕ್ತರು ಹಾಗೂ ಜಿಲ್ಲಾ ಕೋಶಾಧಿಕಾರಿಗಳು ಹಾಗೂ ಇತರರು ಉಪಸ್ಥಿತರಿದ್ದರು.



ಬೆಂಗಳೂರು ದಕ್ಷಿಣ ಜಿಲ್ಲೆಯ ಸೆಂಟ್ ಡೊಮಿನಿಕ್ಸ್ (ಐ.ಸಿ.ಎಸ್.ಇ) ಶಾಲೆಯಲ್ಲಿ ಜುಲೈ 18 ರಂದು ಶ್ರೀ ಎಂ.ಎಸ್. ಸತೀಶ್, ಜಿಲ್ಲಾ ಕಾರ್ಯದರ್ಶಿಗಳು ಶಾಲೆಯ ಹೊಸ ಸ್ಕೌಟ್ಸ್-ಗೈಡ್ಸ್ ಘಟಕಗಳನ್ನು ಉದ್ಘಾಟಿಸಿ, ಸ್ಕೌಟ್ಸ್-ಗೈಡ್ಸ್‌ಗಳನ್ನು ಉದ್ದೇಶಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಶ್ರೀಮತಿ ರೂಪಾ, ಜ್ಯೋತಿ ನಿವಾಸ್ ಕಾಲೇಜಿನ ಎನ್.ಸಿ.ಸಿ ಅಧಿಕಾರಿ, ಶಾಲೆಯ ಆಡಳಿತ ಮಂಡಳಿಯ ಸಿಸ್ಟರ್ ಎಲಿಜಬೆತ್, ಸಿಸ್ಟರ್ ಜೇನ್ ಮೇರಿಶಾಲೆಯ ಪ್ರಾಂಶುಪಾಲರು, ದಳ ನಾಯಕರುಗಳು, ಪೋಷಕರುಗಳು, ಸ್ಕೌಟ್ಸ್-ಗೈಡ್ಸ್‌ಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದರು.




ಬೆಂಗಳೂರು ದಕ್ಷಿಣ ಜಿಲ್ಲಾ ಸಂಸ್ಥೆ ವತಿಯಿಂದ ಜುಲೈ 19 ರಂದು ರಾಜ್ಯ ಕೇಂದ್ರ ಕಚೇರಿ ಆವರಣದಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯ ಶಿಕ್ಷಣ ಇಲಾಖೆಯ ಉಪನಿರ್ದೇಶಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಜಿಲ್ಲಾ ಮತ್ತು ತಾಲ್ಲೂಕ ದೈಹಿಕ ಶಿಕ್ಷಣಾಧಿಕಾರಿಗಳು, ಕ್ಷೇತ್ರ ಸಮಾನ್ವಯಾಧಿಕಾರಿಗಳು, ಇ.ಸಿ.ಓ, ಬಿ.ಆರ್.ಸಿ, ಸಿ.ಆರ್.ಪಿ. ಅಧಿಕಾರಿಗಳಿಗೆ ಮಾಹಿತಿ ಆಯೋಜಿಸಲಾಗಿತ್ತು. ಶಿಬಿರವನ್ನು ಸಭೆಯಲ್ಲಿ ರಾಜ್ಯ ಕಾರ್ಯದಶಿಗಳಾದ ಶ್ರೀ ಕೆ. ಗಂಗಪ್ಪಗೌಡ ರವರು ಸ್ಕೌಟಿಂಗ್ ಮತ್ತು ಗೈಡಿಂಗ್ ಬಗ್ಗೆ ಮಾಹಿತಿಯನ್ನು ನೀಡಿದರು. ಜಿಲ್ಲೆಯ ತರಬೇತಿಗಳ ಬಗ್ಗೆ ಸ್ಕೌಟ್ಸ್ ಜಿಲ್ಲಾ ತರಬೇತಿ ಆಯುಕ್ತರಾದ ಶ್ರೀ ಟಿ.ಕೆ ನಾರಾಯಣಸ್ವಾಮಿ ಮಾಹಿತಿಯನ್ನು ನೀಡಿದರು. ಶ್ರೀ ಎಂ.ಕೆ ಖಾನ್, ಜಿಲ್ಲಾ ಮುಖ್ಯ ಆಯುಕ್ತರು, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳಾದ ಶ್ರೀ ಶಿವಮೂರ್ತಿರವರು ಹಾಗೂ 95ಕ್ಕೂ ಹೆಚ್ಚಿನ ಶಿಕ್ಷಣ ಇಲಾಖೆಯ ಅಧಿಕಾರಿಗಳು ಭಾಗವಹಿಸಿದರು.



## ಬೆಂಗಳೂರು ಉತ್ತರ

* ಬೆಂಗಳೂರು ಉತ್ತರ ಜಿಲ್ಲೆ ವತಿಯಿಂದ ಜಿಲ್ಲಾ ಮಟ್ಟದ ಸ್ಕೌಟ್ಸ್ ಗೈಡ್ಸ್ ಪಟಾಲಂ ತರಬೇತಿ ಶಿಬಿರವನ್ನು ಜುಲೈ 05 ಮತ್ತು 06 ರಂದು ಅತೋನಿ ಕ್ಲಾರೆಂಟ್ ಸ್ಕೂಲ್ ಜಾಲಹಳ್ಳಿ ಬೆಂಗಳೂರು ಇಲ್ಲಿ ನಸಲಾಯಿತು. ಮಾನ್ಯ ಪ್ರಾಂಶುಪಾಲರಾದ ಪಾದರ್ ಥೋಮಸ್‌ರವರು ಶಿಬಿರಕ್ಕೆ ಚಾಲನೆ ನೀಡಿದರು. ಶಿಬಿರದಲ್ಲಿ ಪ್ರಥಮ ಚಿಕಿತ್ಸೆ, ಮ್ಯಾಪಿಂಗ್, ಅಂದಾಜು, ಧ್ವಜ ಕಟ್ಟುವುದು, ಗಂಟುಗಳು, ಲ್ಯಾಶಿಂಗ್ ಬಗ್ಗೆ ತಿಳಿಸಲಾಯಿತು. ನಂತರ, ನಗರ ಮೆರವಣಿಗೆ, ಆಟಗಳು ಮತ್ತು ಶಿಬಿರಾಗ್ನಿ ನಡೆಸಲಾಯಿತು. ಜುಲೈ 06 ರಂದು ಬಿಪಿ ಸಿಕ್ಸ್ ವ್ಯಾಯಾಮ, ಸರ್ವಧರ್ಮ ಪ್ರಾರ್ಥನೆ,





ಉಪಹಾರ ನೀಡಲಾಯಿತು. ಪ್ರಥಮ ಚಿಕಿತ್ಸೆ, ಮ್ಯಾಪಿಂಗ್ ಬಗ್ಗೆ ಹೆಚ್ಚಿನ ಮಾಹಿತಿ ನೀಡಲಾಯಿತು. ಸಮಾರೋಪ ಸಮಾರಂಭ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ಭಾಗವಹಿಸಿ ವಿದ್ಯಾರ್ಥಿಗಳಿಗೆ ಸ್ಕೌಟಿಂಗ್ ಚಳವಳಿಯ ವಿವರವನ್ನು ಮತ್ತು ಉತ್ತಮ ಹವ್ಯಾಸ ಬೆಳೆಸುವಂತೆ ಕರೆ ನೀಡಿದರು. ಶ್ರೀ ಬಿ.ಕೆ. ಶೇಷಾದ್ರಿ, ಜಿಲ್ಲಾ ಕಾರ್ಯದರ್ಶಿ ಎಲ್ಲರನ್ನೂ ಸ್ವಾಗತಿಸಿದರು. ಮಾನ್ಯ ಪಾಂಶುಪಾಲರಾದ ಫಾ. ತೋಮಸ್ ಇವರು ಶುಭಹಾರೈಸಿದರು. ಶ್ರೀ ಎಂ. ಪ್ರಭಾಕರ್ ಭಟ್, ರಾಜ್ಯ ಸಂಘಟನಾ ಆಯುಕ್ತರು ಸೌಟಿಂಗ ಕಾರ್ಯಕ್ರಮ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಕಾರ್ಯಕ್ರಮದ ಬಗ್ಗೆ ಮಾಹಿತಿ ನೀಡಿದರು. ಶಿಬಿರದ ನಾಯಕರಾದ ಶ್ರೀಮತಿ ರಶ್ಮಿ ಲೋಬೋ ಶಿಬಿರದ ವರದಿ ನೀಡಿದರು. ಶಿಬಿರಕ್ಕೆ ಎಲ್ಲಾ ರೀತಿಯ ಸಹಕಾರ ನೀಡಿದ ಶ್ರೀಮತಿ ತುಲಸಿ ಉತ್ತಪ್ಪ (ಶಾಲಾ ಇತರ ಕಾರ್ಯಕ್ರಮದ ಮುಖ್ಯಸ್ಥೆ) ಇವರರಿಗೆ ಧನ್ಯವಾದ ಸಲ್ಲಿಸಲಾಯಿತು. ಶಿಬಿರದಲ್ಲಿ ಆಲ್ವಿನ್ ರೋಬಾಟ್, ಸುಮತಿ ರಾಘು, ಲಾಜ್ರಸ್, ಸೌಂದರ್ಯ ರೇಣುಕಾ, ಬೀಮಪ್ಪ ಶಾಲಾ ಸ್ಕೌಟ್ಸ್ ಗೈಡ್ಸ್ ಕಬ್ ಬುಲ್ ಬುಲ್ ಶಿಕ್ಷಕರು ಎಲ್ಲಾ ರೀತಿಯ ಸಹಕಾರ ನೀಡಿದರು.

* ಬೆಂಗಳೂರು ಉತ್ತರ ಜಿಲ್ಲೆ ವತಿಯಿಂದ ಕಬ್–ಬುಲ್‌ಬುಲ್‌ಗಳಿಗೆ 'ಕಬ್–ಬುಲ್‌ಬುಲ್ ನಡಿಗೆ ಪ್ರಕೃತಿ ಕಡೆಗೆ' ಎಂಬ ವಿಶಿಷ್ಟ ಕಾರ್ಯಕ್ರಮವನ್ನು ಅನ್ನಪೂರ್ಣ ತಪೋವನ ದೊಡ್ಡ ಮರಳವಾಡಿ ಕನಕಪುರ ರಾಮನಗರ ಜಿಲ್ಲೆ ಇಲ್ಲಿ ಜೂನ್ 26 ಮತ್ತು 27 ರಂದು ನಡೆಸಲಾಯಿತು. ಕಾರ್ಯಕ್ರಮಕ್ಕೆ ಶ್ರೀ ಬಿ.ಕೆ. ಶೇಷಾದ್ರಿ ಚಾಲನೆ ನೀಡಿದರು. ಅನ್ನಪೂರ್ಣ ತಪೋವನ ಇವರ ವತಿಯಿಂದ ಯೋಗ ತರಬೇತಿ ನೀಡಲಾಯಿತು, ಜೂನ್ 27 ರಂದು ಪೂರ್ವಾಹ್ನ ಹಳ್ಳಿ ಜೀವನದ ಬಗ್ಗೆ ತಿಳಿಯಲು ಹೈಕ್ ಮಾಡಲಾಯಿತು. ವಿವಿಧ ಶಾಲೆಗಳಿಂದ 300 ಕಬ್–ಬುಲ್‌ಬುಲ್‌ಗಳು ಭಾಗವಹಿಸಿದರು.



ಬೆಂಗಳೂರು ಉತ್ತರ ಜಿಲ್ಲೆ ವತಿಯಿಂದ "ಸ್ಕೌಟ್ಸ್ ಗೈಡ್ಸ್ ನಡಿಗೆ ಹಳ್ಳಿ ಕಡೆಗೆ" ಎಂಬ ಸಮುದಾಯ ಸೇವಾ ಕಾರ್ಯಕ್ರಮದಡಿಯಲ್ಲಿ 36ನೇ 3 (ವರುಷದ) ತಿಂಗಳ ಕಾರ್ಯಕ್ರಮ ದಡಿಯಲ್ಲಿ ಜೂನ್ 31 ರಂದು ಗಂಟಿಗಾನಹಳ್ಳಿಯಲ್ಲಿ ಯಲಹಂಕ ಬೆಂಗಳೂರು ಇಲ್ಲಿ ಸಮುದಾಯ ಸೇವೆ ಮಾಡಲಾಯಿತು. ಗಂಟಿಗಾನಹಳ್ಳಿಯ ನದಿಯ ದಂಡೆಯಲ್ಲಿ ಶೇಖರಣೆಗೊಂಡ ಪ್ಲಾಸ್ಟಿಕ್ ತ್ಯಾಜ್ಯವನ್ನು ತೆಗೆದು ಸ್ವಚ್ಛಗೊಳಿಸಲಾಯಿತು. ಬೆಂಗಳೂರು ಉತ್ತರ ಜಿಲ್ಲೆಯ ವಿವಿಧ ಕಾಲೇಜುಗಳಿಂದ ಮತ್ತು ರಾಯನ್ ಇಂಟರ್ ನ್ಯಾಶನಲ್ ಸ್ಕೂಲ್ ಇಲ್ಲಿಂದ 60 ಸ್ಕೌಟ್ಸ್ ಗೈಡ್ಸ್ ಭಾಗವಹಿಸಿದ್ದರು.



## ಬೀದರ್

* ಡಾ. ಗುರಮ್ಮ ಸಿದ್ಧಾರೆಡ್ಡಿ, ಜಿಲ್ಲಾ ಮುಖ್ಯ ಆಯುಕ್ತರ ಮಾರ್ಗದರ್ಶನದಲ್ಲಿ ಜುಲೈ 17 ರಂದು ಶ್ರೀಮತಿ ಶಿಲ್ಪಾಶರ್ಮಾ, ಜಿಲ್ಲಾಧಿಕಾರಿಗಳು ಬೀದರ್ ಅವರು 2025–26ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯ ಪುಸ್ತಕಗಳನ್ನು ಬಿಡುಗಡೆ ಮಾಡಿ ಚಟುವಟಿಕೆಗಳಿಗೆ ಸಂಪೂರ್ಣ ಸಹಕಾರ ನೀಡುವುದಾಗಿ ತಿಳಿಸಿದರು. ನಂತರ ಶ್ರೀ ಗಿರೀಶ್ ದಿಲೀಪ್ ಬದೋಲೆ, ಭಾ.ಆ.ಸೇ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ಬೀದರ್ ರವರು ವಾರ್ಷಿಕ ಕ್ರಿಯಾಯೋಜನೆ ಪುಸ್ತಕಗಳನ್ನು ಬಿಡುಗಡೆ ಮಾಡಿ ಶುಭ ಕೋರಿ ಸ್ಕೌಟ್–ಗೈಡ್ ಚಟುವಟಿಕೆಗಳಿಗೆ ಎಲ್ಲಾ ರೀತಿಯ ಸಹಕಾರ ನೀಡುವುದಾಗಿ ಹೇಳಿದರು. ಇದೇ ಸಂದರ್ಭದಲ್ಲಿ ಡಾ. ಹೆಚ್.ಬಿ. ಭರಶೆಟ್ಟಿ, ಜಿಲ್ಲಾ ಆಯುಕ್ತರು, ಶ್ರೀ ರಮೇಶ್ ತಿಬಷೆಟ್ಟಿ, ಜಿಲ್ಲಾ ಕಾರ್ಯದರ್ಶಿಗಳು ಮುಂತಾದವರು ಉಪಸ್ಥಿತರಿದ್ದರು.

* 2025–26ನೇ ಸಾಲಿನ ಸ್ಕೌಟರ್ಸ್–ಗೈಡರ್ಸ್‌ಗಳಿಗೆ ಮೂಲ ತರಬೇತಿ ಶಿಬಿರವು ಜೂನ್ 24 ರಿಂದ 30, 2025ರ ವರೆಗೆ ಬೀದರ್ ಜಿಲ್ಲೆಯ ಕೆಳಕಂಡ ಸ್ಥಳೀಯ ಸಂಸ್ಥೆಗಳ ಹಂತದಲ್ಲಿ ನಡೆಯಿತು.

ಬೀದರ್ ಸ್ಥಳೀಯ ಸಂಸ್ಥೆಯಲ್ಲಿ ಸ್ಕೌಟ್ ಶಾಖೆಯಿಂದ 13 ಮತ್ತು ಗೈಡ್ ಶಾಖೆಯಿಂದ 23 ವಿದ್ಯಾರ್ಥಿಗಳು ಹಾಗು ನಾಯಕರಾಗಿ ಸ್ಕೌಟ್ ವಿಭಾಗದಿಂದ ಡಾ. ಭಾರಶೆಟ್ಟಿ ಭಾಗವಹಿಸಿದ್ದರು.

ಬಾಲ್ಕಿ ಸ್ಥಳೀಯ ಸಂಸ್ಥೆಯಲ್ಲಿ ಸ್ಕೌಟ್ 18, ಗೈಡ್ 18 ವಿದ್ಯಾರ್ಥಿಗಳು ಹಾಗು ನಾಯಕರಾಗಿ ಸ್ಕೌಟ್ ವಿಭಾಗದಿಂದ ಶ್ರೀ ನಭಿ ಮತ್ತು ಗೈಡ್ ವಿಭಾಗದಿಂದ ಶ್ರೀಮತಿ ಜಯಶೀಲ ಭಾಗವಹಿಸಿದ್ದರು.

ಹುಮ್ನಾಬಾದ್ ಸ್ಥಳೀಯ ಸಂಸ್ಥೆಯಲ್ಲಿ ಸ್ಕೌಟ್ 24, ಗೈಡ್ 12 ವಿದ್ಯಾರ್ಥಿಗಳು ಹಾಗು ನಾಯಕರಾಗಿ ಸ್ಕೌಟ್ ವಿಭಾಗದಿಂದ ಶ್ರೀ ಬಾಬುರಾವ್ ನಿಂಬೂರೆ ಮತ್ತು ಗೈಡ್ ವಿಭಾಗದಿಂದ ಶ್ರೀಮತಿ ಭುವನೇಶ್ವರಿ ಭಾಗವಹಿಸಿದ್ದರು.

ಬಸವಕಲ್ಯಾಣ ಸ್ಥಳೀಯ ಸಂಸ್ಥೆಯಲ್ಲಿ ಸ್ಕೌಟ್ 12, ಗೈಡ್ 12, ಕಬ್ 08, ಪ್ಯಾಕ್ 11 ಹಾಗು ನಾಯಕರಾಗಿ ಸ್ಕೌಟ್ ವಿಭಾಗದಿಂದ ಶ್ರೀ ಪೀರಪ್ಪ ಹುನಗುಂದ, ಗೈಡ್ ವಿಭಾಗದಿಂದ ಡಾ. ಮುಕ್ತಂಬಿ, ಕಬ್ ವಿಭಾಗದಿಂದ ಶ್ರೀ ಅನಿಲ್‌ಕುಮಾರ ಶಾಸ್ತ್ರಿ ಮತ್ತು ಬುಲ್‌ಬುಲ್ ವಿಭಾಗದಿಂದ ಶ್ರೀಮತಿ ಶರಣಮ್ಮ ಬಿರಾದಾರ್ ಭಾಗವಹಿಸಿದ್ದರು.

ಮೇಲ್ಕಂಡ ಶಿಬಿರಗಳಲ್ಲಿ ಬೀದರ್ ಜಿಲ್ಲೆಯಿಂದ ಒಟ್ಟು 152 ಶಿಕ್ಷಕರು ಭಾಗವಹಿಸಿ ಮೂಲ ತರಬೇತಿಯನ್ನು ಪಡೆದುಕೊಂಡರು. ಜೂನ್ 28 ರಂದು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಬೀದರ್ ಸ್ಥಳೀಯ ಸಂಸ್ಥೆ ತರಬೇತಿ ಸ್ಥಳಕ್ಕೆ ಆಗಮಿಸಿ ಶಿಬಿರಾರ್ಥಿಗಳಿಗೆ ಶುಭ ಹಾರೈಸಿ ವೆಲ್‌ಕಮ್‌ಕಿಲ್ ನೀಡಿದರು.





## ಚಿತ್ರದುರ್ಗ

* ಸ್ಥಳೀಯ ಸಂಸ್ಥೆ ಚಳ್ಳಕೆರೆ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ, ಚಳ್ಳಕೆರೆ ಇವರ ಸಂಯುಕ್ತ ಆಶ್ರಯದಲ್ಲಿ ಜೂನ್ 26 ರಂದು ಶ್ರೀ ಸ್ವಾಮಿ ವಿವೇಕಾನಂದ ಆಂಗ್ಲ ಮಾಧ್ಯಮ ಶಾಲೆ ಚಳ್ಳಕೆರೆಯಲ್ಲಿ, ಸರ್ಕಾರಿ, ಅನುದಾನಿತ, ಅನುದಾನ ರಹಿತ, ಕಿರಿಯ/ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯರು ಮತ್ತು ತರಬೇತಿ ಹೊಂದಿದ ಸ್ಕೌಟ್ಸ್ ಮತ್ತು ಗೈಡ್ಸ್ ಶಿಕ್ಷಕರಿಗೆ ಒಂದು ದಿನದ ಮಾಹಿತಿ ತರಬೇತಿಯನ್ನು ಜಿಲ್ಲಾ ಸಂಸ್ಥೆ ಚಿತ್ರದುರ್ಗ ವತಿಯಿಂದ ನೀಡಲಾಯಿತು, ಈ ತರಬೇತಿ ಶಿಬಿರವನ್ನು ಕ್ಷೇತ್ರಾಧಿಕಾರಿಗಳಾದ ಶ್ರೀ ಸುರೇಶ್‌ರವರು ಉದ್ಘಾಟನೆ ಮಾಡಿದರು. ಜಿಲ್ಲಾ ನೋಡಲ್ ಅಧಿಕಾರಿಗಳಾದ ಶ್ರೀ ತಿಪ್ಪೇಸ್ವಾಮಿಯವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಜಿಲ್ಲಾ ಸಂಘಟಕರಾದ ಶ್ರೀ ಮಲ್ಲೇಶಪ್ಪ ಕೆ.ಟಿ. ಸ್ಕೌಟ್ಸ್ ಮತ್ತು ಗೈಡ್ಸ್‌ನ ಇತಿಹಾಸ ಮತ್ತು ಸ್ಕೌಟ್ಸ್‌ನಿಂದ ಆಗುವ ಪ್ರಯೋಜನಗಳ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸಿದರು, ಜಿಲ್ಲಾ ಸಂಘಟನಾ ಶಿಕ್ಷಕರಾದ ಶ್ರೀ ಸಿ. ರವಿ, ಸ್ಕೌಟ್ಸ್ ಮತ್ತು ಗೈಡ್ಸ್‌ನ ವಿಧಾನಗಳನ್ನು ಹಾಗೂ ಪ್ರವೇಶದಿಂದ ತೃತೀಯ ಸೋಪಾನದವರಿಗೆ ಮಕ್ಕಳ ಪರೀಕ್ಷೆಯ ಬಗ್ಗೆ ಮಾಹಿತಿಯನ್ನು ನೀಡಿದರು, ತಾಲೂಕ ದೈಹಿಕ ಶಿಕ್ಷಣ ಪರಿವೀಕ್ಷಕರು ಶ್ರೀ ಸುನಿಲ್ ನಾಯ್ಕರವರು, ಶಿಕ್ಷಕರ ಸಂಘದ ಅಧ್ಯಕ್ಷರಾದ ಶ್ರೀಮತಿ ಸಣ್ಣಸುರಮ್ಮನವರು ಹಾಜರಿದ್ದರು.



* ಜುಲೈ 12 ರಂದು ಉಪನಿರ್ದೇಶಕರ ಕಛೇರಿ, ಪದವಿಪೂರ್ವ ಶಿಕ್ಷಣ ಇಲಾಖೆ (ಆಆಕಗ), ಚಿತ್ರದುರ್ಗ ಇಲ್ಲಿ 2025–2026ನೇ ಶೈಕ್ಷಣಿಕ ಸಾಲಿನ ವಾರ್ಷಿಕ ಕಾರ್ಯಕ್ರಮ ಯೋಜನಾ ಪುಸ್ತಕಗಳ ವಿತರಣೆಯು ನಡೆಯಿತು. ಈ ಕಾರ್ಯಕ್ರಮದಲ್ಲಿ ಶ್ರೀ ತಿಮ್ಮಯ್ಯ, ಉಪನಿರ್ದೇಶಕರು (DDPU), ಚಿತ್ರದುರ್ಗ ಶ್ರೀ ತಿಪ್ಪೇಸ್ವಾಮಿ, ರೋವರ್ ಉಸ್ತುವಾರಿ ಅಧಿಕಾರಿಗಳು ಶ್ರೀ ಕುಮಾರ್ ಸಂತೋಷ್, ಯುವ ಸಮಿತಿ ಅಧ್ಯಕ್ಷರು ಶ್ರೀ ಮಲ್ಲೇಶಪ್ಪ ಕೆ.ಟಿ., ಜಿಲ್ಲಾ ಆಯೋಜಕರು ಕುಮಾರ್ ಎಲ್. ಚಿದಾನಂದ, ಯುವ ಸಮಿತಿ ಕಾರ್ಯದರ್ಶಿ ಕನ್ನಡ ರೋವರ್ಸ್ ತಂಡದ ಸದಸ್ಯರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ, ಡಿಡಿಪಿಯು ಶ್ರೀ ತಿಮ್ಮಯ್ಯ ಅವರು ಪುಸ್ತಕಗಳನ್ನು ಬಿಡುಗಡೆ ಮಾಡಿದರು.



* ಜುಲೈ 12 ರಂದು ಪಿ.ಯು. ಪ್ರಾಂಶುಪಾಲರ ಸಭೆಯಲ್ಲಿ 107 ಘಟಕಗಳ ನೋಂದಣಿಯನ್ನು ಮಾಡಲಾಯಿತು.

## ದಕ್ಷಿಣ ಕನ್ನಡ

* ಜೂನ್ 17 ರಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ (ರಿ), ಮೂಡಬಿದಿರೆ ಇವರ ಸಹಭಾಗಿತ್ವದಲ್ಲಿ ಸ್ಕೌಟ್–ಗೈಡ್ ಕನ್ನಡ ಭವನ ಮೂಡಬಿದಿರೆ ಇಲ್ಲಿ ಆಳ್ವಾಸ್ ಶಿಕ್ಷಣ ಸಂಸ್ಥೆಗೆ ಒಳಪಟ್ಟ ಎಲ್ಲಾ ವಿದ್ಯಾ ಸಂಸ್ಥೆಯ ಪ್ರಾಂಶುಪಾಲರಿಗೆ, ಮುಖ್ಯ ಶಿಕ್ಷಕರಿಗೆ, ಆಡಳಿತ ಅಧಿಕಾರಿಗಳಿಗೆ, ಹಣಕಾಸು ಅಧಿಕಾರಿಗಳಿಗೆ, ತರಬೇತಿ ಹೊಂದಿರುವ 125ಕ್ಕಿಂತ ಹೆಚ್ಚು ದಳ ನಾಯಕರಿಗೆ ಜಿಲ್ಲಾ ಮುಖ್ಯ ಆಯುಕ್ತರು ಹಾಗೂ ಆಳ್ವಾಸ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ. ಎಂ. ಮೋಹನ್ ಆಳ್ವಾರವರ ಅಧ್ಯಕ್ಷತೆಯಲ್ಲಿ 2025–26ನೇ ಸಾಲಿನ ಕಾರ್ಯಕ್ರಮ, ಚಟುವಟಿಕೆ, ಶಿಬಿರ, ತರಬೇತಿಗಳು, ಸಂಸ್ಥೆಯಲ್ಲಿ ಎಲ್ಲಾ ವಿಭಾಗವನ್ನು ಅಭಿವೃದ್ಧಿ ಪಡಿಸುವ ಬಗ್ಗೆ ಪ್ರಗತಿ ಪರಿಶೀಲನಾ ಸಭೆ ನಡೆಯಿತು. ಸಭೆಯಲ್ಲಿ ಆಳ್ವಾಸ್ ಕಾಲೇಜು ಮೂಡಬಿದ್ರೆಯ ಪ್ರಾಂಶುಪಾಲರು ಡಾ. ಕುರಿಯನ್, ಆಳ್ವಾಸ್ ಇಂಜಿನಿಯರಿಂಗ್ ಕಾಲೇಜು ಮೂಡಬಿದ್ರೆಯ ಪ್ರಾಂಶುಪಾಲರು ಡಾ. ಪೀಟರ್ ಫೆರ್ನಾಂಡಿಸ್, ಜಿಲ್ಲಾ ಕೋಶಾಧಿಕಾರಿ ಶ್ರೀ ನವೀನ್‌ಚಂದ್ರ ಅಂಬೂರಿ, ರಾಜ್ಯ ಸಹಾಯಕ ಸಂಘಟನಾ ಆಯುಕ್ತರಾದ ಶ್ರೀ ಭರತ್‌ರಾಜ್ ಕೆ. ಉಪಸ್ಥಿತರಿದ್ದರು.



* ಜೂನ್ 17 ರಂದು ಮಾಲಿನ್ಯ ನಿಯಂತ್ರಣ ಮಂಡಳಿ, ಮಂಗಳೂರು, ಕಾನೂನು ಸಾಕ್ಷರತಾ ಸಂಘ, ಬೆಳ್ತಂಗಡಿ ಮತ್ತು ಉಜಿರೆಯ ಎಸ್.ಡಿ.ಎಂ. ಶಿಕ್ಷಣ ಸಂಸ್ಥೆ ಮತ್ತು ಬೆಳ್ತಂಗಡಿ ಸ್ಥಳೀಯ ಸಂಸ್ಥೆಯ ಸಹಭಾಗಿತ್ವದಲ್ಲಿ ವಿಶ್ವ ಪರಿಸರ ದಿನಾಚರಣೆಯ ನಿಮಿತ್ತ ಎಸ್.ಡಿ.ಎಂ ಸ್ನಾತಕೋತ್ತರ ಪದವಿ ಕಾಲೇಜಿನಿಂದ ಉಜಿರೆ ವೃತ್ತದ ಮೂಲಕ ಇಂದ್ರಪ್ರಸ್ಥ ಸಭಾಂಗಣದವರೆಗೆ ನಡೆದ ಪರಿಸರ ಜಾಗೃತಿ ಜಥಾದಲ್ಲಿ ಎಸ್.ಡಿ.ಎಂ. ಪದವಿ ಪೂರ್ವಕಾಲೇಜಿನ ರೋವರ್ಸ್–ರೇಂಜರ್ಸ್ ದಳದ ವಿದ್ಯಾರ್ಥಿಗಳು ಹಾಗೂ ಎಸ್.ಡಿ.ಎಂ.ನ ವಿವಿಧ ಪ್ರೌಢಶಾಲೆಗಳ ಸುಮಾರು 100ಕ್ಕಿಂತ ಹೆಚ್ಚು ಸ್ಕೌಟ್, ಗೈಡ್, ರೋವರ್ಸ್, ರೇಂಜರ್ಸ್‌ಗಳು ಹಾಗೂ ಶಿಕ್ಷಕರು ಪಾಲ್ಗೊಂಡಿದ್ದರು.




* ಜೂನ್ 19 ರಂದು ಶ್ರೀ ನಾರಾಯಣಗುರು ವಿದ್ಯಾಸಂಸ್ಥೆಯ ಭಾರತ್ ಗುರು ಜ್ಯೋತಿ ಸ್ಕೌಟ್–ಗೈಡ್‌ಗಳಿಂದ ಮಾದಕ ದ್ರವ್ಯದ ಅರಿವು ಮೂಡಿಸುವ ರೂಪಕ ಕಾರ್ಯಕ್ರಮ ನಡೆಯಿತು. ಎಲ್ಲಾ ಅಧ್ಯಾಪಕರ ಮಾರ್ಗದರ್ಶನದೊಂದಿಗೆ ಗೈಡ್ ಕ್ಯಾಪ್ಟನ್



ಶ್ರೀಮತಿ ಸಾವಿತ್ರಿ ಕಾರ್ಯಕ್ರಮವನ್ನು ನಿರ್ವಹಿಸಿದರು. ಲೇಡಿ ಸ್ಕೌಟ್ ಮಾಸ್ಟರ್ ಕುಮಾರಿ ವಿದ್ಯಾಶ್ರೀ ವಂದನೆಗೈದರು.

* ಜೂನ್ 20 ರಂದು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಂಗ್ಲ ಮಾಧ್ಯಮ ಶಾಲೆ, ಬೆಳ್ತಂಗಡಿ ಇಲ್ಲಿ ಹೊಸದಾಗಿ ತರಬೇತಿಗೊಂಡು ಆಗಮಿಸಿದ ಸ್ಕೌಟ್–ಗೈಡ್ ಶಿಕ್ಷಕರಿಗೆ ಚೇತರಿಕಾ ಶಿಬಿರ ನಡೆಯಿತು. ಈ ಕಾರ್ಯಕ್ರಮದಲ್ಲಿ ಬೆಳ್ತಂಗಡಿ ಪೋಲಿಸ್ ಇನ್ಸ್‌ಪೆಕ್ಟರ್ ಶ್ರೀ ಮುರಳಿಧರನ್, ಶಾಲಾ ಮುಖ್ಯ ಶಿಕ್ಷಕಿ ಶ್ರೀಮತಿ ಹೇಮಲತಾ ಎಂ.ಆರ್., ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ಪ್ರಮೀಳಾ, ಸ್ಕೌಟ್ ಮಾಸ್ಟರ್‌ಗಳು, ಕಬ್ ಮಾಸ್ಟರ್‌ಗಳು ಉಪಸ್ಥಿತರಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ಪ್ರಮೀಳಾ ನೆರವೇರಿಸಿದರು.

* ಜೂನ್ 20 ರಂದು ಸರಕಾರಿ ಪದವಿ ಪೂರ್ವಕಾಲೇಜು ಬೆಳ್ತಂಗಡಿಯಲ್ಲಿ ಸರೋಜಿನಿ ನಾಯ್ಡು ರೇಂಜರ್ಸ್ ಘಟಕದ ವತಿಯಿಂದ ವಿಶ್ವ ತಂಬಾಕು ರಹಿತ ದಿನದ ಅಂಗವಾಗಿ ಜಾಗೃತಿ ಕಾರ್ಯಕ್ರಮ ನಡೆಯಿತು. ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ವಿವೇಕ್ ವಿನ್ಸೆಂಟ್ ಪಾಯ್ಸ್ ಭಾಗವಹಿಸಿ ಸಂದೇಶವನ್ನು ನೀಡಿದರು. ಹಿರಿಯ ಉಪನ್ಯಾಸಕರಾಗಿರುವ ಶ್ರೀ ಆನಂದ್, ಡಾ. ಗಣೇಶ್, ರೇಂಜರ್ ಲೀಡರ್ ಶ್ರೀಮತಿ ಅಮೃತ ರಶ್ಮಿ ಫೆರ್ನಾಂಡಿಸ್ ಇವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ರೇಂಜರ್ ಸಮಿತ ಸ್ವಾಗತಿಸಿ, ರೋವರ್ ಪುನೀತ್ ವಂದಿಸಿದರು ಹಾಗೂ ರೇಂಜರ್ ಶ್ರೀಮತಿ ದಾಕ್ಷಾಯಿಣಿ ಕಾರ್ಯಕ್ರಮ ನಿರೂಪಿಸಿದರು.

* ಜೂನ್ 20 ರಂದು ಮೂಡಬಿದಿರೆ ಪುರಸಭೆ ಮತ್ತು ರೋಟರಿ ಸಂಸ್ಥೆ ಮೂಡಬಿದಿರೆ ಸಹಯೋಗದ "ಪ್ಲಾಸ್ಟಿಕ್ ತ್ಯಜಿಸಿ, ಬಟ್ಟೆಚೀಲ ಬಳಸಿ" ಅಭಿಯಾನದಲ್ಲಿ ರೋಟರಿ ಆಂಗ್ಲ ಮಾಧ್ಯಮ ಶಾಲೆಯ ಸ್ಕೌಟ್–ಗೈಡ್ ಮತ್ತು ಇಂಟರಾಕ್ಟ್ ಕ್ಲಬ್‌ನ ಒಟ್ಟು 21 ವಿದ್ಯಾರ್ಥಿಗಳು ಶಿಕ್ಷಕರ ಮಾರ್ಗದರ್ಶನದಲ್ಲಿ ಮಾರುಕಟ್ಟೆಗೆ ಬರುವ ಪ್ರತಿಯೊಬ್ಬರಿಗೂ ಬಟ್ಟೆ ಚೀಲಗಳನ್ನು ವಿತರಿಸಿದರು ಹಾಗೂ ಪ್ಲಾಸ್ಟಿಕ್ ನಿಷೇಧದ ಬಗ್ಗೆ ಮಾಹಿತಿ ನೀಡಿದರು. ಈ ಅಭಿಯಾನದಲ್ಲಿ ಎಲ್ಲಾ ವಿದ್ಯಾರ್ಥಿಗಳಿಗೆ "ಸ್ವಚ್ಛ ಭಾರತ ಹಸಿರು ಭಾರತ" ಪ್ರತಿಜ್ಞೆ ಬೋಧಿಸಿ ಪ್ಲಾಸ್ಟಿಕ್ ಬಳಕೆ ನಿಷೇದದಕುರಿತು ಮಾಹಿತಿ ನೀಡಿದರು. ರೋಟರಿ ಶಾಲೆಯ ಗೈಡ್ ಕ್ಯಾಪ್ಟನ್ ಶ್ರೀಮತಿ ವಿನಯ ಮತ್ತು ಇಂಟರಾಕ್ಟ್ ಸಂಯೋಜಕಿ ಶ್ರೀಮತಿ ರೇಖಾ ವೆಂಕಟೇಶ್ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು.

* ಜೂನ್ 21 ರಂದು ವಿಠ್ಠಲ್ ಜೇಸಿಸ್ ಆಂಗ್ಲ ಮಾಧ್ಯಮ ಪ್ರೌಢಶಾಲೆಯಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ವತಿಯಿಂದ ಡೆಂಗ್ಯೂ ಜ್ವರದ ಮಾಹಿತಿ ಕಾರ್ಯಾಗಾರ ನಡೆಯಿತು. ಸಂಪನ್ಮೂಲ ವ್ಯಕ್ತಿಯಾಗಿ ವಿಟ್ಲ ಪ್ರಾಥಮಿಕ ಆರೋಗ್ಯ ಕೇಂದ್ರದ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಯಾದ ಶ್ರೀಮತಿ ಕುಸುಮ ರವರು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಶಾಲಾ ಪ್ರಾಂಶುಪಾಲರಾದ ಶ್ರೀ ಜಯರಾಮರೈ, ಆಡಳಿತ ಅಧಿಕಾರಿ ಶ್ರೀ ರಾಧಾಕೃಷ್ಣ ಎರಂಬು, ಉಪ ಪ್ರಾಂಶುಪಾಲೆ ಶ್ರೀಮತಿ ಜ್ಯೋತಿ ಶೆಣೈ, ಪ್ರಾಥಮಿಕ ಆರೋಗ್ಯ ಕೇಂದ್ರ ವಿಟ್ಲದ ಹಿರಿಯ ಪ್ರಾಥಮಿಕ ಸುರಕ್ಷಾ ಅಧಿಕಾರಿ ಶ್ರೀಮತಿ ಇಂದಿರಾ, ಆಶಾ ಕಾರ್ಯಕರ್ತೆಯರಾದ ಶ್ರೀಮತಿ ವನಿತ, ಶ್ರೀಮತಿ ಉಮಾ ಉಪಸ್ಥಿತರಿದ್ದರು. ಶಾಲಾ ಗೈಡ್ ಶಿಕ್ಷಕಿ ಶ್ರೀಮತಿ ಜಯಶ್ರೀ ಕಾರ್ಯಕ್ರಮ ನಿರ್ವಹಿಸಿದರು. ಶಾಲಾ ದೈಹಿಕ ಶಿಕ್ಷಕಿ ಶ್ರೀಮತಿ ಶಶಿಕಲಾ ಸಹಕರಿಸಿದರು.

* ಜೂನ್ 28 ರಂದು ದ.ಕ. ಹಾಗೂ ಉಡುಪಿ ಜಿಲ್ಲಾ ಮುಸ್ಲಿಂ ಶಿಕ್ಷಣ ಸಂಸ್ಥೆಗಳ ಫೆಡರೇಷನ್ ನಿಂದ ವಾರ್ಷಿಕ ಸಭೆಯು ಶ್ರೀ ಮುಸಬ್ಬ ಪಿ. ಬ್ಯಾರಿರವರ ಅಧ್ಯಕ್ಷತೆಯಲ್ಲಿ ಮಂಗಳೂರಿನ ಬ್ಯಾರಿಸ್ ಸಂಸ್ಥೆಯಲ್ಲಿ ನಡೆಯಿತು. ಉಡುಪಿ ಹಾಗೂ ದ.ಕ ಜಿಲ್ಲೆಗಳ 120 ವಿದ್ಯಾ ಸಂಸ್ಥೆಗಳ ಅಧ್ಯಕ್ಷರು, ಸಂಚಾಲಕರು ಹಾಗೂ ಪ್ರಾಂಶುಪಾಲರುಗಳು ಬಾಗವಹಿಸಿದ್ದರು. ಈ ಸಂದರ್ಭದಲ್ಲಿ ಈ ಸಂಸ್ಥೆಗಳ ಸ್ಕೌಟ್–ಗೈಡ್ ನ ಕಾರ್ಯನಿರ್ವಹಕರಾದ ಎಡಿಸಿ ಶ್ರೀ ರೆಹಮತುಲ ರವರ ಸಹಕಾರದಿಂದ ಸ್ಕೌಟ್–ಗೈಡ್ ಮಾಹಿತಿ ಕಾರ್ಯಗಾರವನ್ನು ದ.ಕ. ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಬಿ.ಎಂ ತುಂಬೆ ಹಾಗೂ ಜಿಲ್ಲಾ ಕಾರ್ಯದರ್ಶಿ ಶ್ರೀ ಪ್ರತಿಮ್‌ಕುಮಾರ್ ಕೆ.ಎಸ್. ರವರು ನಡೆಸಿಕೊಟ್ಟರು. ವೇದಿಕೆಯಲ್ಲಿ ಸಂಸ್ಥೆಯ ಕಾರ್ಯದರ್ಶಿ ಶ್ರೀ ಆಯುಬ್ ರಹೆಮಾನ್ ಹಾಗೂ ಅನೇಕ ಆಡಳಿತ ಅಧಿಕಾರಿಗಳು ಉಪಸ್ಥಿತರಿದ್ದರು.



* ಜುಲೈ 04 ರಂದು ಕಟೀಲು ಶ್ರೀ ದುರ್ಗಾಪರಮೇಶ್ವರಿ ಪದವಿಪೂರ್ವ ಕಾಲೇಜಿನಲ್ಲಿ ರೋವರ್–ರೇಂಜರ್ ದಳಗಳ ಉದ್ಘಾಟನಾ ಸಮಾರಂಭದಲ್ಲಿ ಜಿಲ್ಲಾ ಕಾರ್ಯದರ್ಶಿ ಶ್ರೀ ಪ್ರತಿಮ್ ಕುಮಾರ್ ಕೆ.ಎಸ್. ಮಾಹಿತಿ ಕಾರ್ಯಾಗಾರವನ್ನು ನಡೆಸಿದರು. ಕಾಲೇಜಿನ ಪ್ರಾಂಶುಪಾಲೆ ಶ್ರೀಮತಿ ಎನ್. ಕುಸುಮ ಅಧ್ಯಕ್ಷತೆ ವಹಿಸಿದ್ದರು. ರೋವರ್ ಸ್ಕೌಟ್ ಲೀಡರ್ ಶ್ರೀ ರಂಜಿತ್ ಹಾಗೂ ರೇಂಜರ್ ಲೀಡರ್ ಶ್ರೀಮತಿ ಶ್ವೇತಾ ಉಪಸ್ಥಿತರಿದ್ದರು. ರೇಂಜರ್ ಶಾನ್ವಿ ಸ್ವಾಗತಿಸಿದರು. ರೋವರ್ ವಿನ್ಯಾಸ್ ಧನ್ಯವಾದ ನೀಡಿದರು. ರೇಂಜರ್ ಪ್ರಿಯಾಕಾರ್ಯಕ್ರಮ ನಿರೂಪಿಸಿದರು.

* ದಕ್ಷಿಣ ಕನ್ನಡ ಜಿಲ್ಲಾ ತರಬೇತಿ ಕೇಂದ್ರ ಪಿಲಿಕುಳದಲ್ಲಿ ಜುಲೈ 12 ಹಾಗೂ 13 ರಂದು ಜಿಲ್ಲಾ ಮಟ್ಟದ ಪಟಾಲಂ ನಾಯಕರ ಹಾಗೂ ಸಿಕ್ಸರ್ಸ್ ತರಬೇತಿಯು ಸ್ಕೌಟರ್ ಶ್ರೀಮತಿ ಲಕ್ಷ್ಮೀ ಕಾಮತ್, ಹೆಚ್.ಡಬ್ಲ್ಯೂ.ಬಿ. ಹಾಗೂ ಗೈಡರ್ ಶ್ರೀಮತಿ ನಯನಾ, ಹೆಚ್.ಡಬ್ಲ್ಯೂ.ಬಿ. ರವರ ನಾಯಕತ್ವದಲ್ಲಿ ನಡೆಯಿತು. ಗೈಡರ್ ಶ್ರೀಮತಿ ಕಾಮಾಕ್ಷಿ, ಸಾವಿತ್ರಿ, ವಿದ್ಯಾ ಕಾವೇರಿ, ಪೂರ್ಣಿಮಾ, ಶ್ರೀಮತಿ ರಾಧಿಕಾ ಕಾಮತ್ ಹಾಗೂ ಸ್ಕೌಟರ್ ಶ್ರೀ ನಾರಾಯಣ ಇವರು ಸಹಕರಿಸಿದರು.

* ದಕ್ಷಿಣ ಕನ್ನಡ ಜಿಲ್ಲಾ ತರಬೇತಿ ಕೇಂದ್ರ ಪಿಲಿಕುಳದಲ್ಲಿ ಜುಲೈ 12 ಹಾಗೂ 13 ರಂದು ಜಿಲ್ಲಾ ಮಟ್ಟದ ಸ್ಕೌಟರ್–ಗೈಡರ್‌ಗಳಿಗೆ ಸ್ಕೌಟರ್ ಶ್ರೀ ಬಿ.ಎಂ. ತುಂಬೆಯವರ ನಾಯಕತ್ವದಲ್ಲಿ ಪುನಃಶ್ಚೇತನಾ ಶಿಬಿರ ನಡೆಯಿತು. ಜಿಲ್ಲಾ ಕಾರ್ಯದರ್ಶಿ ಶ್ರೀ ಪ್ರತಿಮ್ ಕುಮಾರ್ ಕೆ.ಎಸ್. ಹಾಗೂ ಜಿಲ್ಲಾ ತರಬೇತಿ ಆಯುಕ್ತೆ ಶ್ರೀಮತಿ ಜಯಶ್ರೀ ಹಾಗೂ ಶ್ರೀ ನಾರಾಯಣ ಸಹಕರಿಸಿದರು.

* ದಕ್ಷಿಣ ಕನ್ನಡ ಜಿಲ್ಲಾ ತರಬೇತಿ ಕೇಂದ್ರ ಪಿಲಿಕುಳದಲ್ಲಿ ಜುಲೈ 13 ರಂದು ಜಿಲ್ಲಾ ಮಟ್ಟದ ಸ್ಟಡಿ ಸರ್ಕಲ್ ಶ್ರೀಮತಿ ಜಯಶ್ರೀ, ಜಿಲ್ಲಾ ಗೈಡ್ ತರಬೇತಿ ಆಯುಕ್ತರು ಇವರ ನಾಯಕತ್ವದಲ್ಲಿ ನಡೆಯಿತು. ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಬಿ.ಎಂ. ತುಂಬೆ ಹಾಗೂ ಜಿಲ್ಲಾ ಕಾರ್ಯದರ್ಶಿ ಶ್ರೀ ಪ್ರತಿಮ್ ಕುಮಾರ್ ಕೆ.ಎಸ್. ಸಹಕರಿಸಿದರು.



* ಜುಲೈ 13 ರಂದು ದರ್ಬೆ ಲಿಟ್ಲ್ ಫ್ಲವರ್ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವನಮಹೋತ್ಸವ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲೆಯ ಮುಖ್ಯ ಶಿಕ್ಷಕಿ ಶ್ರೀಮತಿ ಭಗಿನಿ ವೆನಿಶಾ ಬಿ.ಎಸ್. ವಹಿಸಿದ್ದರು. ಮುಖ್ಯ ಅತಿಥಿಯಾಗಿ ಅರಣ್ಯ ಸಂಚಾರಿ ದಳ ಮಂಗಳೂರು ಇಲ್ಲಿನ ವಲಯ ಅರಣ್ಯಾಧಿಕಾರಿಗಳಾದ ಶ್ರೀ ಸಂತೋಷ್ ಕುಮಾರ್ ರೈ ಭಾಗವಹಿಸಿದ್ದರು. ವೇದಿಕೆಯಲ್ಲಿ ರಕ್ಷಕ ಶಿಕ್ಷಕ ಸಂಘದ ಉಪಾಧ್ಯಕ್ಷರಾದ ಶ್ರೀಮತಿ ವಿನಯ ಸುವರ್ಣ, ಸುರಕ್ಷಾ ಸಮಿತಿ ಅಧ್ಯಕ್ಷರಾದ ಶ್ರೀ ಚೇತನ್, ಹಿರಿಯ ಶಿಕ್ಷಕಿ ಗೈಡ್ ಕ್ಯಾಪ್ಟನ್ ವಿಲ್ಮಾ ಫೆರ್ನಾಂಡಿಸ್ ಹಾಗೂ ಸ್ಕೌಟ್ ಶಿಕ್ಷಕ ಶ್ರೀ ಬಾಲಕೃಷ್ಣ ರೈ ಪೊರ್ದಾಲ್ ಉಪಸ್ಥಿತರಿದ್ದರು. ಸುಮಾರು 500 ಸ್ಕೌಟ್–ಗೈಡ್, ಕಬ್–ಬುಲ್‌ಬುಲ್‌ಗಳು ಭಾಗವಹಿಸಿದ್ದರು.



* ದಕ್ಷಿಣ ಕನ್ನಡ ಜಿಲ್ಲೆಯ ತರಬೇತಿ ಕೇಂದ್ರ ಪಿಲಿಕುಳ ಇಲ್ಲಿ ಜುಲೈ 12 ರಂದು ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಬಿ.ಎಂ ತುಂಬೆಯವರ ಅಧ್ಯಕ್ಷತೆಯಲ್ಲಿ ಪಟಾಲಂ ನಾಯಕರ ತರಬೇತಿ, ಸಿಕ್ಸರ್ಸ್ ಶಿಬಿರ, ಪುನಃಶ್ಚೇತನ ಶಿಬಿರ ಹಾಗೂ ಸ್ಟಡಿ ತರಬೇತಿಯು ಉದ್ಘಾಟನೆಗೊಂಡಿತು. ವೇದಿಕೆಯಲ್ಲಿ ಶಿಬಿರದ ನಾಯಕರುಗಳಾದ ಶ್ರೀಮತಿ ನಯನ, ಶ್ರೀಮತಿ ಶ್ರೀಲಕ್ಷ್ಮಿ ಕಾಮತ್ ಉಪಸ್ಥಿತರಿದ್ದರು. ಇವರೊಂದಿಗೆ ವ್ಯಾಸ ಮಹರ್ಷಿ ವಿದ್ಯಾಪೀಠದ ಮುಖ್ಯೋಪಾಧ್ಯಾಯಿನಿ ಗೈಡರ್ ಶ್ರೀಮತಿ ಕಾಮಾಕ್ಷಿ, ಗುರುಪುರ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ಜಯಲಕ್ಷ್ಮಿ, ಮಂಗಳೂರು ನಗರ ದಕ್ಷಿಣ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ಪ್ರೀತಿ ಲೋಬೋ ಉಪಸ್ಥಿತರಿದ್ದರು. ಶ್ರೀಮತಿ ಜಯಶ್ರೀ, ಜಿಲ್ಲಾ ಗೈಡ್ ತರಬೇತಿ ಆಯಕ್ತೆ ಸ್ವಾಗತಿಸಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಪ್ರತಿಮ್‌ಕುಮಾರ್ ಕೆ.ಎಸ್. ಧನ್ಯವಾದ ನೀಡಿಕಾರ್ಯಕ್ರಮ ನಿರ್ವಹಿಸಿದರು. ಜುಲೈ 13 ರಂದು ವಿಟ್ಲ ಸ್ಥಳೀಯ ಸಂಸ್ಥೆಯ ಶ್ರೀ ನಾರಾಯಣ ನಾಯಕ್‌ರವರ ಅಧ್ಯಕ್ಷತೆಯಲ್ಲಿ ಸಮಾರೋಪ ಸಮಾರಂಭ ನಡೆಯಿತು. ಸ್ಕೌಟರ್ ಶ್ರೀಮತಿ ಶ್ರೀಲಕ್ಷ್ಮಿ ಸ್ವಾಗತಿಸಿದರು, ಗೈಡರ್ ಶ್ರೀಮತಿ ನಯನ ಧನ್ಯವಾದ ನೀಡಿದರು. ಜಿಲ್ಲಾ ಗೈಡ್ ತರಬೇತಿ ಆಯುಕ್ತರಾದ ಶ್ರೀಮತಿ ಜಯಶ್ರೀ ಕಾರ್ಯಕ್ರಮ ನಿರ್ವಹಿಸಿದರು.

* ಸಂತ ಸೆಬಾಸ್ಟಿಯನ್‌ರ ಪದವಿ ಪೂರ್ವಕಾಲೇಜು, ಉಳ್ಳಾಲ, ಪೆರ್ಮನ್ನೂರು ಇಲ್ಲಿ ಜುಲೈ 11 ರಂದು ಇದರ ರೋವರ್ಸ್–ರೇಂಜರ್ಸ್ ನೂತನ ಘಟಕದ ಉದ್ಘಾಟನೆಯನ್ನು ಹಮ್ಮಿಕೊಳ್ಳಲಾಯಿತು. ವಿದ್ಯಾರ್ಥಿನಿ ಆಯಿಷಾ ಸಹಾನ ಕಾರ್ಯಕ್ರಮವನ್ನು ನಿರೂಪಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂತ ಸೆಬಸ್ಟಿಯನ್ನರ ಸಮೂಹ ಶಿಕ್ಷಣ ಸಂಸ್ಥೆಗಳ ಸಂಚಾಲಕರಾದ ಫಾದರ್ ಒಪ್ರಿಯನ್ ಪಿಂಟೋರವರು ವಹಿಸಿದ್ದರು. ದ.ಕ. ಜಿಲ್ಲಾ ಸಂಸ್ಥೆಯ ಸ್ಕೌಟ್ ಆಯುಕ್ತರಾದ ಶ್ರೀ ಬಿ.ಎಂ. ತುಂಬೆ ನೂತನ ಘಟಕವನ್ನು ಉದ್ಘಾಟಿಸಿದರು. ಉಳ್ಳಾಲ ಸ್ಥಳೀಯ ಸಂಸ್ಥೆಯ ಕೋಶಾಧಿಕಾರಿಯಾದಂತಹ ಶ್ರೀ ಕೆ.ಎಮ್.ಕೆ. ಮಂಜನಾಡಿ, ಸಂತ ಸೆಬಸ್ಟಿಯನ್ನರ ಪದವಿ ಪೂರ್ವಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಪ್ರಮಿಳ ಡಿಸೋಜಾ, ಕಾಲೇಜಿನ ನೂತನ ಘಟಕದ ರೇಂಜರ್ ಲೀಡರ್ ಕು. ನೂತನಾ ಎಂ.ಜೆ. ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಜಿಲ್ಲಾ ಕಾರ್ಯದರ್ಶಿಯಾ ಶ್ರೀ ಪ್ರತಿಮ್ ಕುಮಾರ್ ಕೆ.ಎಸ್., ಸ್ಕೌಟ್ಸ್ ಮತ್ತು ಗೈಡ್ಸ್ ಕುರಿತಾಗಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು. ವಿದ್ಯಾರ್ಥಿನಿ ಶೈಮಾ ವಂದಿಸಿದರು.



## ದಾವಣಗೆರೆ

* ಜೂನ್ 18 ರಂದು ಚನ್ನಗಿರಿ ಸ್ಥಳೀಯ ಸಂಸ್ಥೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ನೀತಿಗೆರೆಗೆ ಭೇಟಿ ನೀಡಿ ನುಗ್ಗೆಹಳ್ಳಿ ಗ್ರಾಮ ಪಂಚಾಯಿತಿಯಿಂದ ಬಂದಿರುವ ರೂ. 5,000ಗಳ ಅನುದಾನದ ಸಮವಸ್ತ್ರಗಳನ್ನು ಸ್ಕೌಟ್–ಗೈಡ್‌ಗಳಿಗೆ ವಿತರಿಸಲಾಯಿತು. ಈ



ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳು ಮತ್ತು ಸದಸ್ಯರಾದ ಶ್ರೀ ಕುಬೇರಪ್ಪ, ಶ್ರೀ ಶ್ರೀನಿವಾಸ್ ಮುಖ್ಯೋಪಾಧ್ಯಾಯರು, ಶ್ರೀ ಕಿರಣ್, ಸ್ಕೌಟ್ ಮಾಸ್ಟರ್ ಮತ್ತು ಸಹ ಶಿಕ್ಷಕರು, ಶ್ರೀಮತಿ ಶಾರದಾ ಮಾಗನಹಳ್ಳಿ ಜಿಲ್ಲಾ ಗೈಡ್ ಆಯುಕ್ತರು, ಶ್ರೀಮತಿ ರತ್ನ ಎಂ., ಜಿಲ್ಲಾ ಕಾರ್ಯದರ್ಶಿಗಳು, ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ. ಉಪಸ್ಥಿತರಿದ್ದರು.

* ಜೂನ್ 20 ರಂದು ದಾವಣಗೆರೆ ಜಿಲ್ಲಾ ಸಂಸ್ಥೆ, ಶ್ರೀ ಸಿದ್ದಗಂಗಾ ಸ್ಥಳೀಯ ಸಂಸ್ಥೆ ಮತ್ತು ಆಯುಷ್ ಇಲಾಖೆಯ ಸಹಭಾಗಿತ್ವದಲ್ಲಿ ಜಿಲ್ಲಾ ಮಟ್ಟದ ಅಂತರಾಷ್ಟ್ರೀಯ ಯೋಗ ದಿನಾಚರಣೆಯನ್ನು ಶ್ರೀ ಮುರುಘರಾಜೇಂದ್ರ ಜೆ. ಚಿಗಟೇರಿ, ಜಿಲ್ಲಾ ಮುಖ್ಯ ಆಯುಕ್ತರ ಮಾರ್ಗದರ್ಶನದಂತೆ ಸಿದ್ದಗಂಗಾ ಶಾಲೆಯಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಜಸ್ಟೀನ್ ಡಿಸೋಜ, ಜಿಲ್ಲಾ ಉಪಾಧ್ಯಕ್ಷರು ವಹಿಸಿದ್ದರು. ಸಿದ್ದಗಂಗಾ ಶಾಲೆ ಆಡಳಿತಾಧಿಕಾರಿಗಳು ವಿದ್ಯಾರ್ಥಿಗಳಿಗೆ ಯೋಗದ ಮಹತ್ವವನ್ನು ತಿಳಿಸಿದರು. ವಿಶೇಷ ಅತಿಥಿಗಳಾಗಿ ಡಾಕ್ಟರ್ ಸಿದ್ದೇಶ್ ಬೀಸ್ನಹಳ್ಳಿ, ಡಾಕ್ಟರ್ ರತ್ನ ಭಾಗವಹಿಸಿದ್ದರು. ಶ್ರೀಮತಿ ಶಿವಬಸವ್ವ ಕಲಕೋಟಿ ವಿದ್ಯಾರ್ಥಿಗಳಿಗೆ ಯೋಗ ಪ್ರಾತ್ಯಕ್ಷಿಕೆಯನ್ನು ಹೇಳಿಕೊಟ್ಟರು. ಈ ಸಂದರ್ಭದಲ್ಲಿ ಜಿಲ್ಲಾ ಪದಾಧಿಕಾರಿಗಳು ಶ್ರೀ ಮಹೇಶ್ ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಸಂಘಟಿಸಿದರು.



* ಜೂನ್ 20 ರಂದು ಡಿ.ಆರ್.ಎಂ ಸ್ಕೌಟ್ ಭವನದಲ್ಲಿ ಶ್ರೀ ಬೂಸ್ನೂರು ವಿಶ್ವನಾಥ್, ಜಿಲ್ಲಾ ಖಜಾಂಚಿಗಳು ವೈಯಕ್ತಿಕವಾಗಿ 20 ಸ್ಕೌಟ್–ಗೈಡ್‌ಗಳಿಗೆ ನೋಟ್ ಪುಸ್ತಕ, ಪೆನ್ನು, ಪೆನ್ಸಿಲ್, ಸ್ಕೇಲ್ ಹಾಗೂ ರಬ್ಬರನ್ನು ಉಚಿತವಾಗಿ ನೀಡಿದರು.



* ಜೂನ್ 26 ರಂದು ಜಿಲ್ಲಾ ಪೋಲೀಸ್ ಇಲಾಖೆ ವತಿಯಿಂದ ಆಯೋಜಿಸಿದ್ದ ಅಂತರಾಷ್ಟ್ರೀಯ ಮಾದಕದ್ರವ್ಯ ವಿರೋಧಿ ದಿನಾಚರಣೆಯ ಪ್ರಯುಕ್ತ ಹೈಸ್ಕೂಲ್ ಮೈದಾನದಿಂದ ರೇಣುಕಾ ಮಂದಿರದ ವರೆಗೆ ಜಾಗೃತಿ ಜಾಥಾದಲ್ಲಿ ಜಿಲ್ಲೆಯ ವಿವಿಧ ಶಾಲೆಯ ಸ್ಕೌಟ್ಸ್–ಗೈಡ್ಸ್ ಮಕ್ಕಳು ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಗೌರವಾನ್ವಿತ



ಜಿಲ್ಲಾ ಸತ್ರ ನ್ಯಾಯಾಧೀಶರು, ಮಾನ್ಯ ಐಜಿಪಿ, ಪೂರ್ವ ವಲಯ, ಮಾನ್ಯ ಸಂಸದರು, ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ, ಉಪನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ, ಸ್ಕೌಟ್ ಮಾಸ್ಟರ್‌ಗಳು, ಗೈಡ್ ಕ್ಯಾಪ್ಟನ್‌ಗಳು ಉಪಸ್ಥಿತರಿದ್ದರು.

* ಜೂನ್ 27 ರಂದು ಶ್ರೀಮತಿ ಶಾರದಾ ಮಾಗನಹಳ್ಳಿ ಜಿಲ್ಲಾ ಗೈಡ್ ಆಯುಕ್ತರು ಮತ್ತು ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ.ರವರು ಜಗಳೂರು ಸ್ಥಳೀಯ ಸಂಸ್ಥೆಗೆ ಭೇಟಿ ನೀಡಿ ಶ್ರೀ ನಾಗೇಂದ್ರಪ್ಪ ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳೊಂದಿಗೆ ಗ್ರಾಮ ಪಂಚಾಯಿತಿಗಳಿಂದ ಬಂದಿದ್ದ ಅನುದಾನದಲ್ಲಿ ಖರೀದಿಸಿದ್ದ ಸ್ಕೌಟ್-ಗೈಡ್ ಸಮವಸ್ತ್ರಗಳನ್ನು ಆಯಾಗ್ರಾಮ ಪಂಚಾಯಿತಿ ಶಾಲೆಗಳ ಮಕ್ಕಳಿಗೆ ವಿತರಿಸಿದರು. ಈ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಸದಸ್ಯರು, ಅಧ್ಯಕ್ಷರು ಇತರೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

* ಜೂನ್ 28 ರಂದು ದಾವಣಗೆರೆ ಉತ್ತರ ವಲಯ ಸ್ಥಳೀಯ ಸಂಸ್ಥೆಯ ಆರ್.ವಿ.ಜಿ.ಕೆ. ಶಾಲೆ ಮತ್ತು ವಾಸವಿ ಹಿರಿಯ ಪ್ರಾಥಮಿಕ ಶಾಲೆಯ ಸಹಭಾಗಿತ್ವದಲ್ಲಿ ಪರಿಸರ ದಿನಾಚರಣೆ ಅಂಗವಾಗಿ ಪರಿಸರ ಜಾಗೃತಿ ಜಾಥಾವನ್ನು ಆಯೋಜಿಸಲಾಗಿತ್ತು.

* ಜುಲೈ 02 ರಿಂದ 04ರ ವರೆಗೆ ದಾವಣಗೆರೆ ಜಿಲ್ಲಾ ಸಂಸ್ಥೆ ವತಿಯಿಂದ ರಾಜ್ಯಪುರಸ್ಕಾರ ಪೂರ್ವಭಾವಿ ಪರೀಕ್ಷಾ ಶಿಬಿರವನ್ನು ಆಯೋಜಿಸಲಾಗಿತ್ತು. ಶಿಬಿರದ ಮುಖ್ಯಸ್ಥರಾಗಿ ಶ್ರೀಮತಿ ರತ್ನ ಎಂ., ಜಿಲ್ಲಾ ಕಾರ್ಯದರ್ಶಿಗಳು, ಶಿಬಿರದ ಮೇಲ್ವಿಚಾರಕರಾಗಿ ಶ್ರೀ ಸಿ.ಆರ್. ಮರುಳಪ್ಪ, ಶ್ರೀಮತಿ ಸಾವಿತ್ರಮ್ಮ, ಶಿಬಿರದ ನಾಯಕರಾಗಿ ಶ್ರೀ ಜೆ.ಎಸ್. ವಿಜಯ್ ಮತ್ತು ಶ್ರೀಮತಿ ಕಲ್ಲಮ್ಮ, ಶಿಬಿರದ ಆಯೋಜಕರಾಗಿ ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ. ಮತ್ತು ಶಿಬಿರದ ಸುರಕ್ಷತಾ ಅಧಿಕಾರಿಗಳಾಗಿ ಶ್ರೀ ನವೀನ್, ಜಿಲ್ಲಾ ಸಹಾಯಕ ಆಯುಕ್ತರು ಕಾರ್ಯನಿರ್ವಹಿಸಿದರು. ಈ ಸಂದರ್ಭದಲ್ಲಿ ಜುಲೈ 03 ರಂದು ಶ್ರೀ ಮುರುಘ ರಾಜೇಂದ್ರ ಜೆ. ಚಿಗಟೇರಿ, ಜಿಲ್ಲಾ ಮುಖ್ಯ ಆಯುಕ್ತರು ಜಿಲ್ಲಾ ಪುರಸ್ಕಾರ ಪ್ರಶಸ್ತಿ ಪ್ರಧಾನ ಮಾಡಿದರು. ಈ ಸಂದರ್ಭದಲ್ಲಿ ಶ್ರೀ ಎ.ಪಿ. ಷಡಾಕ್ಷರಪ್ಪ, ಜಿಲ್ಲಾ ಸ್ಕೌಟ್ ಆಯುಕ್ತರು, ಶ್ರೀಮತಿ ಶಾರದ ಮಾಗನಹಳ್ಳಿ ಜಿಲ್ಲಾ ಗೈಡ್ ಆಯುಕ್ತರು ಹಾಗೂ ಇತರರು ಶಿಬಿರದಲ್ಲಿ ಭಾಗವಹಿಸಿ ಮಕ್ಕಳಿಗೆ ಶುಭ ಹಾರೈಸಿದರು. ಶಿಬಿರದಲ್ಲಿ 525 ಸ್ಕೌಟ್ಸ್-ಗೈಡ್ಸ್‌ಗಳು ಭಾಗವಹಿಸಿದ್ದರು.



* ಜುಲೈ 11 ರಂದು ರಾಜ್ಯ ಸಂಸ್ಥೆಯಿಂದ ಬಂದಿರುವ 2025-26ನೇ ಸಾಲಿನ ವಾರ್ಷಿಕ ಕಾರ್ಯಕ್ರಮಗಳ ಯೋಜನ ಪುಸ್ತಕಗಳನ್ನು ಶ್ರೀ ಗಿಟ್ಟೆ ಮಾಧವ್ ವಿಠ್ಠಲ್ ರಾವ್, ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮತ್ತು ಶ್ರೀಮತಿ ಉಮಾ ಪ್ರಶಾಂತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಇವರಿಗೆ ವಿತರಿಸಲಾಯಿತು. ಈ ಸಂದರ್ಭದಲ್ಲಿ ಶ್ರೀಮತಿ ರತ್ನ ಎಂ., ಜಿಲ್ಲಾ ಕಾರ್ಯದರ್ಶಿಗಳು ಮತ್ತು ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ ಉಪಸ್ಥಿತರಿದ್ದರು.





## ಹಾಸನ

* "ಬೇಸಿಗೆ ಶಿಬಿರಗಳು ಮಕ್ಕಳ ಮನೋವಿಕಾಸಕ್ಕೆ ಎಡೆ ಮಾಡಿಕೊಡುತ್ತದೆ. ಚಿಣ್ಣರಿಗಾಗಿ ಹಮ್ಮಿಕೊಂಡಿರುವ "ಪ್ರತಿಭಾ ಕಲರವ" ಮಕ್ಕಳಲ್ಲಿ ಸೃಜನಾತ್ಮಕತೆಯನ್ನು ವೃದ್ಧಿಸುತ್ತದೆ" ಎಂದು ಜಿಲ್ಲಾ ಮುಖ್ಯ ಆಯುಕ್ತರಾದ ಡಾ॥ ವೈ.ಎಸ್. ವೀರಭದ್ರಪ್ಪ ಅಭಿಪ್ರಾಯಪಟ್ಟರು. ಅವರು ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ(ರಿ.), ಬೆಂಗಳೂರು ಹಾಗೂ ಜಿಲ್ಲಾ ಸಂಸ್ಥೆ ಹಾಸನ ವತಿಯಿಂದ ಜಿಲ್ಲಾ ಸ್ಕೌಟ್ಸ್ ಸಮುದಾಯ ಭವನದಲ್ಲಿ ಜನನಿ ಫೌಂಡೇಷನ್ ಚಿಕ್ಕಕೊಂಡಗೊಳ ಮತ್ತು ಹಾಸನಾಂಬ ಮಹಿಳಾ ಸಂಘ, ಹೇಮಾವತಿ ನಗರ ಸಹಕಾರದಲ್ಲಿ ಹತ್ತರಿಂದ ಹದಿನಾರು ವರ್ಷ ವಯೋಮಿತಿಯ ಮಕ್ಕಳಿಗಾಗಿ ಹಮ್ಮಿಕೊಂಡ ಮೂರು ದಿನಗಳ "ಚಿಣ್ಣರ ಪ್ರತಿಭಾ ಕಲರವ" ಕಾರ್ಯಕ್ರಮದ ಉದ್ಘಾಟನೆ ಮಾಡಿ ಮಾತನಾಡಿದರು. ಕೇಂದ್ರ ಕನ್ನಡ ಸಾಹಿತ್ಯ ವೇದಿಕೆಯ ಸಂಸ್ಥಾಪಕ ಅಧ್ಯಕ್ಷ ಶ್ರೀ ಕೊಟ್ರೇಶ್ ಎಸ್. ಉಪ್ಪಾರ್, ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ "ಪಠ್ಯೇತರ ಚಟವಟಿಕೆಗಳು ಮಕ್ಕಳಲ್ಲಿ ಸೃಜನಾತ್ಮಕ ಮನೋಧೋರಣೆಯನ್ನು ಹೆಚ್ಚಿಸುವುದರ ಜೊತೆಗೆ ಪಠ್ಯದಲ್ಲಿಯೂ ಕ್ರಿಯಾಶೀಲವಾಗಿ ತೊಡಗಿಕೊಳ್ಳಲು ಸಹಕಾರಿಯಾಗುತ್ತದೆ" ಎಂದರು. ವೇದಿಕೆಯಲ್ಲಿ ಜನನಿ ಫೌಂಡೇಷನ್ ಅಧ್ಯಕ್ಷೆ ಶ್ರೀಮತಿ ಎಚ್.ಎಸ್. ಭಾನುಮತಿ, ಹಾಸನಾಂಬ ಮಹಿಳಾ ಸಂಘದ ಅಧ್ಯಕ್ಷೆ ಶ್ರೀಮತಿ ಪದ್ಮಾವತಿ ವೆಂಕಟೇಶ್ ಸೇರಿದಂತೆ ಹಲವರು ಮಾತನಾಡಿದರು. ವೇದಿಕೆಯಲ್ಲಿ ಜಿಲ್ಲಾ ಸಂಸ್ಥೆಯ ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿ ಮುಂತಾದವರು ಹಾಜರಿದ್ದರು.



* ಅರಸೀಕೆರೆ ತಾಲ್ಲೂಕು ಸಂಸ್ಥೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಬಾಣವಾರದಲ್ಲಿ ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ಪುನಃಶ್ಚೇತನ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಯಿತು. ಈ ಕಾರ್ಯಕ್ರಮದ ಉದ್ಘಾಟನೆಯನ್ನು ಕಾಲೇಜು ಪ್ರಾಂಶುಪಾಲರಾದ ಶ್ರೀ ಮಹೇಂದ್ರರವರು ನೇರವೇರಿಸಿಕೊಟ್ಟರು. ಎ.ಎಸ್.ಓ.ಸಿ ಶ್ರೀಮತಿ ಪ್ರಿಯಾಂಕ ಮತ್ತು ಗೈಡ್ ಶಿಕ್ಷಕಿ ಶ್ರೀಮತಿ ಶೋಭಾರವರು ವಿದ್ಯಾರ್ಥಿಗಳಿಗೆ ಸ್ಕೌಟಿಂಗ್ ಗೈಡಿಂಗ್ ಚಟುವಟಿಕೆಯ ಬಗ್ಗೆ ಸಂಕ್ಷಿಪ್ತವಾದ ಮಾಹಿತಿಯನ್ನು ನೀಡಿದರು. ಈ ಸಂದರ್ಭ್ದಲ್ಲಿ ರೇಂಜರ್ ಲೀಡರ್ ಶ್ರೀಮತಿ ಪ್ರಿಯಾಂಕ ಮತ್ತು ರೋವರ್ ಸ್ಕೌಟ್ ಲೀಡರ್ ಉಪಸ್ಥೀತರಿದ್ದರು.

* ಹಾಸನ ಜಿಲ್ಲಾ ಸಂಸ್ಥೆಯ ಕೇಂದ್ರ ಸ್ಥಾನೀಕ ಆಯುಕ್ತರಾದ ಪ್ರೊ. ಜಿ.ಡಿ. ನಾರಾಯಣರವರ ನಿವೃತ್ತಿ ಅಭಿನಂದನ ಸಮಾರಂಭ ಹಾಗೂ ಅಭಿನಂದನ ಗ್ರಂಥ ಬಿಡುಗಡೆ ಕಾರ್ಯಕ್ರಮವನ್ನು ಪಡುವಲಹಿಪ್ಪೆ, ಹೊಳೆನರಸೀಪುರ ತಾಲ್ಲೂಕಿನಲ್ಲಿ ಆಯೋಜನೆ ಮಾಡಲಾಯಿತು. ಈ ಕಾರ್ಯಕ್ರಮಕ್ಕೆ ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಹಾಗೂ ಮೈಸೂರು ವಿಭಾಗ ಸಹಾಯಕ ರಾಜ್ಯ ಆಯುಕ್ತರಾದ ಶ್ರೀ ಬಿ.ಕೆ. ಬಸವಾರಜು ಹಾಗೂ ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿ ಭಾಗವಹಿಸಿ ಶುಭ ಕೋರಿದರು. ಈ ಸಂದರ್ಭದಲ್ಲಿ ರಾಜ್ಯ ಮುಖ್ಯ ಆಯುಕ್ತರು ಹಾಸನ ವಿಶ್ವ



ವಿದ್ಯಾಲಯದ ಕುಲಸಚಿವರನ್ನು ಭೇಟಿ ಮಾಡಿ ರೋವರ್ಸ್ ರೇಂಜರ್ಸ್ ಚಟುವಟಿಕೆಯ ಬಗ್ಗೆ ಚರ್ಚೆ ನಡೆಸಿದರು. ಶ್ರೀಮತಿ ಪ್ರಿಯಾಂಕ, ಎ.ಎಸ್.ಓ.ಸಿ. ಮತ್ತು ಪಡುವಲಹಿಪ್ಪೆ ಕಾಲೇಜಿನ ರೋವರ್ ಸ್ಕೌಟ್ ಲೀಡರ್ ರೋವರ್ಸ್ ರೇಂಜರ್ಸ್ ಉಪಸ್ಥಿತರಿದ್ದರು.

* ಚನ್ನರಾಯಪಟ್ಟಣ ತಾಲ್ಲೂಕಿನ ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನ ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ರಾಜ್ಯ ಪುರಸ್ಕಾರ್ ಪರೀಕ್ಷಾ ಶಿಬಿರದ ಪೂರ್ವ ಸಿದ್ಧತ ಕಾರ್ಯಗಾರವನ್ನು ಆಯೋಜನೆ ಮಾಡಲಾಯಿತು. ಶ್ರೀಮತಿ ಪ್ರಿಯಾಂಕ, ಎ.ಎಸ್.ಓ.ಸಿ.ರವರು ಭಾಗವಹಿಸಿ ಮಾಹಿತಿಯನ್ನು ನೀಡಿದರು. ಈ ಸಂದರ್ಭದಲ್ಲಿ ಕಾಲೇಜು ಪ್ರಾಂಶುಪಾಲರು ಪ್ರೊ. ಮಂಜುನಾಥ್‌ರವರು ಭಾಗವಹಿಸಿ ವಿದ್ಯಾರ್ಥಿಗಳಿಗೆ ರಾಜ್ಯ ಪುರಸ್ಕಾರ್ ಪ್ರಮಾಣ ಪತ್ರವನ್ನು ವಿತರಣೆ ಮಾಡಿ ಶುಭ ಕೋರಿದರು. ರೋವರ್ ಸ್ಕೌಟ್ ಲೀಡರ್ ಡಾ. ಪ್ರವೀಣ್ ಕುಮಾರ್ ಮತ್ತು ರೇಂಜರ್ ಲೀಡರ್ ನಿರೋಶ ರವರು ಉಪಸ್ಥಿತರಿದ್ದರು.



* ಜಿಲ್ಲಾ ಸಂಸ್ಥೆ ಮತ್ತು ಸಕಲೇಶಪುರ ತಾಲ್ಲೂಕು ಸ್ಥಳೀಯ ಸಂಸ್ಥೆ ಮತ್ತು ಪುರಸಭೆ ಅರಣ್ಯಾಧಿಕಾರಿಗಳ ಸಹಯೋಗದಲ್ಲಿ ಜಿಲ್ಲಾ ಮಟ್ಟದ ಪರಿಸರ ದಿನಾಚರಣೆ ಕಾರ್ಯಕ್ರಮವನ್ನು ಸಕಲೇಶಪುರ ತಾಲ್ಲೂಕಿನಲ್ಲಿ ಆಯೋಜನೆ ಮಾಡಲಾಯಿತು. ಸಕಲೇಶಪುರ ತಾಲ್ಲೂಕಿನ ಪುರಸಭೆಯ ಅಧ್ಯಕ್ಷರು. ಗಿಡಗಳನ್ನು ನೆಡುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿರವರು ಪ್ಲಾಸ್ಟಿಕ್ ಮುಕ್ತ ಮಾಡುವುದು ನಮ್ಮೆಲ್ಲರ ಕರ್ತವ್ಯ ಹಾಗೂ ಜವಾಬ್ದಾರಿ ಆಗಿದೆ ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಮನೆಯಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡಲು ಪೋಷಕರಿಗೆ ತಿಳಿಸಲು ಮಾಹಿತಿಯನ್ನು ನೀಡಿದರು, ವಕೀಲರು ಮತ್ತು ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಕೃಷ್ಣಮೂರ್ತಿರವರು ವಿದ್ಯಾರ್ಥಿಗಳಿಗೆ ಸಕಲೇಶಪುರ ತಾಲ್ಲೂಕಿನ ಪರಿಸರದ ಬಗ್ಗೆ ಮಾಹಿತಿಯನ್ನು ನೀಡಿ ಒಂದು ವಿದ್ಯಾರ್ಥಿ ಒಂದು ಗಿಡಗಳನ್ನು ದತ್ತು ಪಡೆಯುವುದಕ್ಕೆ ಸಲಹೆ ನೀಡಿದರು ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಸ್ಟೀಫನ್ ಪ್ರಕಾಶ್ ವಿದ್ಯಾರ್ಥಿಗಳಿಗೆ ಶುಭಕೋರಿದರು ಮಾಜಿ ಪುರಸಭೆ ಅಧ್ಯಕ್ಷರು ಹಾಗೂ ತಾಲ್ಲೂಕು ಕಾರ್ಯದರ್ಶಿ ಕಾರ್ಯಕ್ರಮವನ್ನು ಸಂಘಟಿಸಿದರು.

* ವಿಶ್ವೇಶ್ವರಯ್ಯ ಪಬ್ಲಿಕ್ ಸ್ಕೂಲ್ ಆಲೂರು ಇಲ್ಲಿ ವಿಶ್ವ ಪರಿಸರ ದಿನದ ಅಂಗವಾಗಿ ಗಿಡ ನೆಡುವ ಮತ್ತು ಗಿಡವಿತರಿಸುವ ಕಾರ್ಯಕ್ರಮದ ಜೊತೆ ಪರಿಸರ ಜಾಗೃತಿ ಮೂಡಿಸಲು ಜಾಥಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಬ್ ವಿಭಾಗದ ವಿದ್ಯಾರ್ಥಿಗಳು ಬಿಜದುಂಡೆಯನ್ನು ತಯಾರಿಸಿದರು. ಈ ಕಾರ್ಯಕ್ರಮದಲ್ಲಿ ಶಾಲಾ ಮುಖ್ಯಸ್ಥರಾದ ಶ್ರೀ ಹೆಚ್.ವಿ. ನಾಗಭೂಷಣ್, ಮುಖ್ಯ ಶಿಕ್ಷಕಿ ಶ್ರೀಮತಿ ಪೂರ್ಣಿಮಾ ಸಿ.ಎಸ್. ಹಾಗೂ ಎಲ್ಲಾ ಶಿಕ್ಷಕರು ಭಾಗವಹಿಸಿದರು.

* ಜಿಲ್ಲಾ ಸಂಸ್ಥೆ ವತಿಯಿಂದ ವಿಶ್ವೇಶ್ವರಯ್ಯ ಪಬ್ಲಿಕ್ ಶಾಲೆ, ಆಲೂರು ಇಲ್ಲಿ ಕಬ್ ಘಟಕದ ವಿದ್ಯಾರ್ಥಿಗಳಿಗೆ ಮೇ 01 ರಿಂದ 03ರ ವರೆಗೆ ಬೇಸಿಗೆ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಸ್ಥೆಯ ಮುಖ್ಯ ಶಿಕ್ಷಕಿಯಾದಂತ ಶ್ರೀಮತಿ ಪೂರ್ಣಿಮಾ ಮೇಡಂ ನೆರವೇರಿಸಿದರು. ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಸಂಸ್ಥೆಯ ಪ್ರಾಂಶುಪಾಲರಾದ ಶ್ರೀ ಎಚ್.ವಿ. ನಾಗಭೂಷಣ್ ರವರು ವಹಿಸಿ ಮಕ್ಕಳಿಗೆ ಬೇಸಿಗೆ ಶಿಬಿರವನ್ನು ಹಮ್ಮಿಕೊಳ್ಳುವುದರಿಂದ ಮಕ್ಕಳಲ್ಲಿ ಸೃಜನಶೀಲತೆ ಮತ್ತು ಕ್ರಿಯಾತ್ಮಕತೆಯನ್ನು ಹೆಚ್ಚಿಸುತ್ತದೆ ಎಂದು ಹೇಳಿದರುಯ.

* ಅಂತರಾಷ್ಟ್ರೀಯ ಬೂಕರ್ ಪ್ರಶಸ್ತಿ ಪುರಸ್ಕೃತರಾದ ಹಾಗೂ ಹಾಸನ ಜಿಲ್ಲೆಯ ಶ್ರೀಮತಿ ಬಾನು ಮುಷ್ತಾಕ್‌ರವರಿಗೆ ಹಾಸನ ಜಿಲ್ಲೆಯ ನಾಗರಿಕ ಸನ್ಮಾನ ಕಾರ್ಯಕ್ರಮವನ್ನು ಆಯೋಜನೆ ಮಾಡಿದರು. ಜಿಲ್ಲಾ ಸಂಸ್ಥೆಯಪರವಾಗಿ ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಭಾಗವಹಿಸಿ ಅವರಿಗೆ ಗೌರವ ಸಮರ್ಪಿಸಿದರು.

* ಹಾಸನ ಜಿಲ್ಲಾ ಸಂಸ್ಥೆ ವತಿಯಿಂದ ಜಿಲ್ಲಾ ಮಟ್ಟದ ರಾಜ್ಯ ಪುರಸ್ಕಾರ ಪೂರ್ವ ಸಿದ್ಧತಾ ಪರೀಕ್ಷ ಶಿಬಿರವನ್ನು ಹಾಸನ ಜಿಲ್ಲಾ ಸ್ಕೌಟ್ ಭವನದಲ್ಲಿ ಆ ಯೋಜನೆ ಮಾಡಲಾಯಿತು ಶಿಬಿರದ ಉದ್ಘಾಟನೆಯನ್ನು ಜಿಲ್ಲಾ ಆಯುಕ್ತರಾದ ಶ್ರೀ ಸ್ಟೀಫನ್ ಪ್ರಕಾಶ್‌ರವರು ನೆರವೇರಿಸಿಕೊಟ್ಟರು. ಶ್ರೀ ಎಂ.ಎಸ್. ಪ್ರಕಾಶ್, ಜಿಲ್ಲಾ ತರಬೇತಿಯ ಆಯುಕ್ತರು ಹಾಗೂ ಶ್ರೀಮತಿ ಬಿ.ಎಲ್. ಮಮತಾರವರು ಶಿಬಿರದ ನಾಯಕರುಗಳಾಗಿ ಕಾರ್ಯನಿರ್ವಹಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿ ಉಪಾಧ್ಯಕ್ಷರು ಶ್ರೀಮತಿ ಗಿರಿಜಾಂಬಿಕರವರು ಶಿಬಿರಕ್ಕೆ ಭೇಟಿ ನೀಡಿ ವಿದ್ಯಾರ್ಥಿಗಳಿಗೆ ಶುಭ ಕೋರಿದರು ಶ್ರೀಮತಿ ಪ್ರಿಯಾಂಕ, ಸಹಾಯಕ ರಾಜ್ಯ ಸಂಘಟನಾ ಆಯುಕ್ತರು ಸಂಘಟಿಸಿದರು.

* ಜುಲೈ 12 ರಂದು ಹಾಸನ ಜಿಲ್ಲೆಯ ಎಚ್.ಕೆ.ಎಸ್. ಅಂತರಾಷ್ಟ್ರೀಯ ಶಾಲೆಯಲ್ಲಿ ಸ್ಕೌಟ್ ಗೈಡ್ ಘಟಕ ಉದ್ಘಾಟನಾ ಸಮಾರಂಭ ಹಾಗೂ ತರಬೇತಿ ಪಡೆದ ಶಿಕ್ಷಕರಿಗೆ ಪ್ರಮಾಣ ಪತ್ರ ವಿತರಣಾ ಕಾರ್ಯಕ್ರಮ ಮತ್ತು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಅಭಿನಂದನ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ಈ ಸಂದರ್ಭದಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಶಾಲೆಯ ಸ್ಕೌಟ್ ಗೈಡ್ ಘಟಕವನ್ನು ಉದ್ಘಾಟನೆ ಮಾಡಿ ವಿದ್ಯಾರ್ಥಿಗಳಿಗೆ ಶುಭ ಕೋರಿದರು. ತರಬೇತಿಯನ್ನು ಪಡೆದ ಶಿಕ್ಷಕರುಗಳಿಗೆ ಪ್ರಮಾಣ ಪತ್ರವನ್ನು ವಿತರಣೆ ಮಾಡಿ ಘಟಕವನ್ನು ಉತ್ತಮವಾಗಿ ನಡೆಸಿಕೊಂಡು ಹೋಗುವುದಕ್ಕೆ ಮಾರ್ಗದರ್ಶನ ನೀಡಿದರು ಈ ಸಂದರ್ಭದಲ್ಲಿ ಶಾಲಾ ನಿರ್ದೇಶಕರಾದ ಶ್ರೀ ಹೆಚ್.ಕೆ. ಸುರೇಶ್, ಕಾರ್ಯದರ್ಶಿ ಶ್ರೀಮತಿ ಕೋಮಲ ಸುರೇಶ್ ಶಾಲಾ ಕಾರ್ಯದರ್ಶಿ ಶ್ರೀ ಪ್ರಶಾಂತ್ ಗೌಡ ಹಾಗೂ ಶಾಲಾ ಮುಖ್ಯೋಪಾಧ್ಯಾಯರು ಡಾ. ಗೌರಿ ಹಾಗೂ ASCಬಸವರಾಜುರವರು ಉಪಸ್ಥಿತರಿದ್ದರು.




* ಹಾಸನ ಜಿಲ್ಲಾ ಸಂಸ್ಥೆಯಲ್ಲಿ ಜುಲೈ 12 ರಂದು ಜಿಲ್ಲಾ ಸ್ಕೌಟ್ ಭವನದಲ್ಲಿ ಪ್ರಗತಿ ಪರಿಶೀಲನಾ ಸಭೆಯನ್ನು ಆಯೋಜನೆ ಮಾಡಲಾಯಿತು. ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ಮುಖ್ಯ ಆಯುಕ್ತರು ಡಾ. ವೈ.ಎಸ್. ವೀರಭದ್ರಪ್ಪರವರ ವಹಿಸಿಕೊಂಡಿದ್ದರು. ಸಭೆಯಲ್ಲಿ ಮಾನ್ಯ ರಾಜ್ಯ ಮುಖ್ಯ ಆಯುಕ್ತರು ಪಿ.ಜಿ.ಆರ್ ಸಿಂಧ್ಯರವರು ಭಾಗವಹಿಸಿ 2025–26ನೇ ಸಾಲಿನ ವಾರ್ಷಿಕ ಯೋಜನೆ ಪುಸ್ತಕವನ್ನು ಬಿಡುಗಡೆ ಮಾಡಿ ಪ್ರತಿ ತಿಂಗಳು ನಡೆಯಬೇಕಾಗಿರುವ ಕಾರ್ಯ ಚಟುವಟಿಕೆಗಳ ಬಗ್ಗೆ ಹಾಗೂ ಸ್ಕೌಟ್ ಗೈಡ್ ಪ್ರಗತಿಯನ್ನು ಬೆಳೆಸಲು ಹೊಸ ಆಲೋಚನೆಗಳ ಬಗ್ಗೆ ಮಾಹಿತಿಯನ್ನು ನೀಡಿದರು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಹಾಸನ ಜಿಲ್ಲೆಯ ಉಪನಿರ್ದೇಶಕರಾದ ಶ್ರೀ ಎಚ್.ಎಸ್. ಚಂದ್ರಶೇಖರ್‌ರವರು ಸಭೆಯನ್ನು ಉದ್ದೇಶಿಸಿ ಸ್ಕೌಟ್–ಗೈಡ್ ಚಟುವಟಿಕೆಯ ಕ್ರಿಯಾ ಶೀಲತೆಯ ಬಗ್ಗೆ ಮಾಹಿತಿಯನ್ನು ನೀಡಿದರು.



* ಜುಲೈ 09 ರಂದು ಹಾಸನ ಜಿಲ್ಲೆ ಚನ್ನರಾಯಪಟ್ಟಣದಲ್ಲಿ ಶಿಕ್ಷಣ ತಜ್ಞ, ಸಮಾಜ ಸೇವಕರಾದ ಹಾಗೂ ಚನ್ನರಾಯಪಟ್ಟಣ ತಾಲೂಕು ಸಹಾಯಕ ಜಿಲ್ಲಾ ಆಯುಕ್ತರಾಗಿದ್ದ

ಹಾಗೂ ಹಾಸನ ಜಿಲ್ಲಾ ಸಂಸ್ಥೆಗೆ ಅಪಾರ ಸೇವೆ ಸಲ್ಲಿಸಿರುವ ದಿ. ಶ್ರೀ ಎಚ್.ಎಂ. ಗೌಡಯ್ಯ ರವರಿಗೆ ನುಡಿ ನಮನ ಕಾರ್ಯಕ್ರಮದಲ್ಲಿ ಮಾನ್ಯ ರಾಜ್ಯ ಮುಖ್ಯ ಆಯುಕ್ತರು ಶ್ರೀ ಪಿ.ಜಿ.ಆರ್. ಸಿಂಧ್ಯರವರು ಭಾಗವಹಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಪೂಜ್ಯ ಶ್ರೀ ಶ್ರೀ ಶಂಭುನಾಥ ಸ್ವಾಮೀಜಿ, ಶ್ರೀ ಆದಿ ಚುಂಚನಗಿರಿ ಮಹಾಸಂಸ್ಥಾಪನ ಮಠ ಹಾಸನ, ಶ್ರೀ ಕೆ.ಎಂ. ಶಿವಲಿಂಗೇಗೌಡ, ಅಧ್ಯಕ್ಷರು, ಕರ್ನಾಟಕ ಗೃಹ ಮಂಡಳಿ ಹಾಗೂ ಶಾಸಕರು, ಅರಸೀಕೆರೆ ವಿಧಾನ ಸಭಾ ಕ್ಷೇತ್ರ ಹಾಗೂ ಶ್ರೀ ಸಿ.ಎನ್. ಬಾಲ ಕೃಷ್ಣ ಮಾನ್ಯ ಶಾಸಕರು, ಶ್ರವಣಬೆಳಗೊಳ ವಿಧಾನ ಸಭಾ ಕ್ಷೇತ್ರ, ಇನ್ನೂ ಅನೇಕ ನಾಯಕರು ಹಾಗೂ ಸಾರ್ವಜನಿಕರು ಹಾಸನ ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಭಾಗವಹಿಸಿದ್ದರು.



* ಶ್ರೀ ಆದಿಚುಂಚನಗಿರಿ ಶಾಲೆಯ ಕಬ್ ಬುಲ್ ಬುಲ್‌ಗಳಿಂದ ಪ್ಲಾಸ್ಟಿಕ್ ಮುಕ್ತ ನಿವಾರಣ ಚಟುವಟಿಕೆಯನ್ನು ಮಾಡಿಸಲಾಯಿತು. ಈ ಸಂಧರ್ಭದಲ್ಲಿ ಕಬ್ ಮಾಸ್ಟರ್ ಶ್ರೀಮತಿ ಮಾನಸ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ದರ್ಶನರವರು ಉಪಸ್ಥಿತರಿದ್ದರು.

* ಹಾಸನ ಜಿಲ್ಲಾ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಸುರೇಶ್ ಗುರೂಜಿ, ಜಿಲ್ಲಾ ಖಜಾಂಚಿಗಳಾದ ಶ್ರೀ ರಮೇಶ್ ಹಾಗೂ ಪ್ರಿಯಾಂಕಾ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಪೇಟೆ, ಬಾಣಾವರ, ಅರಸೀಕೆರೆ ತಾಲ್ಲೂಕಿಗೆ ಭೇಟಿ ನೀಡಿ ಅಬ್ದುಲ್ ಕಲಾಂ ಸ್ಕೌಟ್ ಮತ್ತು ಕಿತ್ತೂರು ರಾಣಿ ಚೆನ್ನಮ್ಮ ಗೈಡ್ ಘಟಕವನ್ನು ವೀಕ್ಷಿಸಿ ಸ್ಕೌಟ್ ಮಾಸ್ಟರ್ ಮತ್ತು ಗೈಡ್ ಕ್ಯಾಪ್ಟನ್ ಹಾಗೂ ಎಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ ಶುಭ ಹಾರೈಸಿದರು ಹಾಗೂ ಸಲಹೆ ಸೂಚನೆಗಳನ್ನು ನೀಡಿದರು. ಈ ಸಂದರ್ಭದಲ್ಲಿ ಮುಖ್ಯೋಪಾಧ್ಯಾಯರು ಸಹ ಶಿಕ್ಷಕರು ಹಾಗೂ ರೇಂಜರ್ಸ್‌ಗಳು ಹಾಜರಿದ್ದರು.

* ಜುಲೈ 01 ರಂದು ಹಳೆಬೀಡಿನ ಎಸ್.ಜಿ.ಆರ್. ಶಾಲೆಯ ವಿದ್ಯಾರ್ಥಿಗಳು ಹಳೆಬೀಡಿನ ಸರ್ಕಾರಿ ಆಸ್ಪತ್ರೆ ಹಾಗೂ ಖಾಸಗಿ ಆಸ್ಪತ್ರೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ವೈದ್ಯರಿಗೆ 'ವೈದ್ಯರ ದಿನಾಚರಣೆ' ಅಂಗವಾಗಿ ಹೂ ಹಾಗೂ ಹೂ ಗುಚ್ಛಗಳನ್ನು ನೀಡುವ ಮೂಲಕ ಅವರ ಸೇವೆಗೆ ವಂದನೆಗಳನ್ನು ಸಲ್ಲಿಸಿದರು. ಈ ಸಂದರ್ಭದಲ್ಲಿ ಎಸ್.ಜಿ.ಆರ್. ಶಾಲೆಯ ಗೈಡ್ ಕ್ಯಾಪ್ಟನ್ ಶಾಲೆಯ ಮುಖ್ಯ ಶಿಕ್ಷಕ ಸಿದ್ದೇಶ್ ಡಾ. ಉಮೇಶ್ ಶೆಟ್ಟಿ (ಹೊಯ್ಸಳ ಕ್ಲಿನಿಕ್), ಡಾ. ಹನುಮಂತ ಶೆಟ್ಟಿ (ಜ್ಯೋತಿ ಕ್ಲಿನಿಕ್), ಹಳೇಬೀಡು ಸಮುದಾಯ ಆರೋಗ್ಯ ಕೇಂದ್ರದ ಡಾ. ಅನಿಲ್ ಕುಮಾರ್ ಲೋಕೇಶ್ ಕೆ.ಯು, ಡಾ. ವಿನಯ್ (ಮಹಾಲಕ್ಷ್ಮಿ ಕ್ಲಿನಿಕ್) ಚಂದ್ರಕಾಂತ, ತ್ಯಾಗರಾಜ, ಆಸ್ಪತ್ರೆಯ ಸಿಬ್ಬಂದಿ ಜೊತೆಗೆ ಫ್ಲಾಕ ಲೀಡರ್ ಶ್ರೀಮತಿ ಸವಿತಾ ರಾಧಾ ಸ್ಕೌಟ್ ಮಾಸ್ಟರ್ ಶ್ರೀಮತಿ ಅನಿತಾ ಅರವಿಂದ ಭಾಗವಹಿಸಿದ್ದರು.



* "ಸ್ಕೌಟ್ಸ್ ಮತ್ತು ಗೈಡ್ಸ್‌ಗಳಲ್ಲಿ ದೇವರಿಗಾಗಿ ಸೇವೆ, ದೇಶಕ್ಕಾಗಿ ಸೇವೆ, ಇತರರಿಗಾಗಿ ಸೇವೆ ಹಾಗೂ ಸ್ವಯಂ ಮೌಲ್ಯಗಳ ವರ್ಧನೆಯನ್ನು ಬೆಳೆಸುತ್ತದೆ" ಎಂದು ಭೈರಾಪುರದ ಬೆಥಸ್ದ ಆಂಗ್ಲೆ ಮಾಧ್ಯಮ ಶಾಲೆಯ ಪ್ರಾಂಶುಪಾಲೆ ಶ್ರೀಮತಿ ರೀನಾ ಮ್ಯಾಥೀವ್ ಅಭಿಪ್ರಾಯಪಟ್ಟರು. ಅವರು ಜಿಲ್ಲಾ ಸಂಸ್ಥೆ ಹಾಸನ ಹಾಗೂ ಸ್ಥಳೀಯ ಸಂಸ್ಥೆ ಆಲೂರು ವತಿಯಿಂದ ಭೈರಾಪುರದ ಬೆಥಸ್ದ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಸ್ಕೌಟ್ಸ್ & ಗೈಡ್ಸ್ ಜಿಲ್ಲಾಮಟ್ಟದ ತೃತೀಯ ಸೋಪಾನ ಪರೀಕ್ಷಾ ಶಿಬಿರದ ಉದ್ಘಾಟನಾ ಕಾರ್ಯಕ್ರಮದಲ್ಲಿ ಗಿಡಕ್ಕೆ ನೀರೆರೆಯುವ ಮೂಲಕ ಚಾಲನೆ ನೀಡಿ ಮಾತನಾಡಿದರು. ಜಿಲ್ಲಾ ಸಹಾಯಕ ಆಯುಕ್ತ ಎಂ. ಬಾಲಕೃಷ್ಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ "ಸಮಾಜ ನಮಗೇನು ಕೊಟ್ಟಿದೆ ಎನ್ನುವುದಕ್ಕಿಂತಲೂ ಸಮಾಜಕ್ಕಾಗಿ, ಈ ನಾಡು–ನುಡಿಗಾಗಿ ನಾನೇನು ಕೊಟ್ಟಿದ್ದೇನೆ ಎನ್ನುವ ಹಿನ್ನೆಲೆಯಲ್ಲಿ ಇಲ್ಲಿ ಅನೇಕರು ನಿಸ್ವಾರ್ಥ ಸೇವೆ ಸಲ್ಲಿಸುತ್ತಿದ್ದಾರೆ" ಎಂದರು. ರಾಜ್ಯ ಸಹಾಯಕ ಸಂಘಟನಾ ಆಯುಕ್ತೆ ಎಚ್. ಎಂ. ಪ್ರಿಯಾಂಕ ಮುಖ್ಯ ಅತಿಥಿಯಾಗಿ ಮಾತನಾಡಿ "ಭಾರತ್ ಸ್ಕೌಟ್ಸ್ & ಗೈಡ್ಸ್‌ಗಳನ್ನು ಮಾನಸಿಕ ಹಾಗೂ ದೈಹಿಕವಾಗಿ ಸದೃಢಗೊಳಿಸುತ್ತದೆ. ಇಲ್ಲಿನ ಪಠ್ಯೇತರ ಚಟುವಟಿಕೆಗಳು ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗಿವೆ" ಎಂದರು. ಕಾರ್ಯಕ್ರಮದಲ್ಲಿ ತಾಲ್ಲೂಕು ಕಾರ್ಯದರ್ಶಿ ಶ್ರೀ ಕೊಟ್ರೇಶ್ ಎಸ್. ಉಪ್ಪಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ವೇದಿಕೆಯಲ್ಲಿ ತಾಲ್ಲೂಕು ಖಜಾಂಚಿ ಬಿ.ಎಸ್.ಹಿಮ, ತಾಲ್ಲೂಕು ಜಂಟಿ ಕಾರ್ಯದರ್ಶಿ ಎಲಿಜಬೆತ್ ಎಂ.ಎಲ್. ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿ ನಡೆದು ಬಂದ ಹಾದಿಯ ಬಗ್ಗೆ ಮಾತನಾಡಿದರು. ಈ ಸಂದರ್ಭದಲ್ಲಿ ಸ್ಕೌಟ್ಸ್ ಮಾಸ್ಟರ್, ಗೈಡ್ಸ್ ಕ್ಯಾಪ್ಟನ್‌ಗಳು ಉಪಸ್ಥಿತರಿದ್ದರು.

* "ಮಕ್ಕಳಲ್ಲಿ ಚಿಕ್ಕಂದಿನಿಂದಲೇ ಸ್ಕೌಟ್ಸ್ ಮತ್ತು ಗೈಡ್ಸ್ ವಿಧೇಯತೆ, ಪರಿಶುದ್ಧತೆ ಹಾಗೂ ಸೇವಾ ಮನೋಭಾವವನ್ನು ಬೆಳೆಸುವುದರ ಜೊತೆಗೆ ಸಾಮಾಜಿಕ ವಿಕಸನವನ್ನುಂಟು ಮಾಡುತ್ತದೆ" ಎಂದು ಭೈರಾಪುರದ ಎಸ್.ವಿ. ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ಶ್ರೀ ಬಿ.ಜಿ. ಗಿರೀಶ್ ಅಭಿಪ್ರಾಯಪಟ್ಟರು. ಅವರು ಜಿಲ್ಲಾ ಸಂಸ್ಥೆ ಹಾಸನ, ಸ್ಥಳೀಯ ಸಂಸ್ಥೆ ಆಲೂರು ಸಹಯೋಗದಲ್ಲಿ ಭೈರಾಪುರದ ಎಸ್. ವಿ. ಪಬ್ಲಿಕ್ ಶಾಲೆಯಲ್ಲಿ ಕಬ್ಸ್ ಮತ್ತು ಬುಲ್ಬುಲ್ಸ್‌ಗಳಿಗಾಗಿ ಹಮ್ಮಿಕೊಂಡಿದ್ದ ಜಿಲ್ಲಾ ಹಂತದ ಚತುರ್ಥ ಚರಣ್ ಹಾಗೂ ಹೀರಕ್ ಪಂಕ್ ಪರೀಕ್ಷಾ ಶಿಬಿರವನ್ನು ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿದರು. ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಸ್ಟೀಫನ್ ಪ್ರಕಾಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ "ಮಕ್ಕಳ ಬೌದ್ಧಿಕ, ಸಾಮಾಜಿಕ, ಸಾಂಸ್ಕೃತಿಕ ವಿಕಸನಕ್ಕಾಗಿ, ಮಕ್ಕಳ ಸರ್ವಾಂಗೀಣ ಅಭ್ಯುದಯಕ್ಕಾಗಿ ಹುಟ್ಟಿಕೊಂಡ ಸ್ಕೌಟ್ಸ್ ಮತ್ತು ಗೈಡ್ಸ್ ಕೇವಲ ಭಾರತವಷ್ಟೇ ಅಲ್ಲದೇ ಜಾಗತಿಕವಾಗಿ 200ಕ್ಕೂ ಹೆಚ್ಚಿನ ದೇಶಗಳಲ್ಲಿ ನಿರಂತರವಾಗಿ ಕೆಲಸ ಮಾಡುತ್ತಾ ಬರುತ್ತಿದೆ ಎಂದರು. ರಾಜ್ಯ ಸಹಾಯಕ ಸಂಘಟನಾ ಆಯುಕ್ತೆ ಶ್ರೀ ಎಚ್.ಎಂ. ಪ್ರಿಯಾಂಕ ಮಾತನಾಡಿ "ಜಿಲ್ಲೆಯಲ್ಲಿ ಆಲೂರು ತಾಲ್ಲೂಕು ಚಿಕ್ಕದಾದರೂ ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳಲ್ಲಿ ಕ್ರಿಯಾಶೀಲವಾಗಿದೆ" ಎಂದರು. ತಾಲ್ಲೂಕು ಕಾರ್ಯದರ್ಶಿ ಶ್ರೀ ಕೊಟ್ರೇಶ್ ಎಸ್. ಉಪ್ಪಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ವೇದಿಕೆಯಲ್ಲಿ ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷ ಶ್ರೀ ತಿಮ್ಮೇಗೌಡ, ಶಾಲಾ ಮುಖ್ಯ ಶಿಕ್ಷಕಿ ಶ್ರೀ ನಳಿನ ಗಿರೀಶ್ ಸೇರಿದಂತೆ ಹಲವರು ಮಾತನಾಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಸಹಾಯಕ ಆಯುಕ್ತ ಶ್ರೀ ಎಂ. ಬಾಲಕೃಷ್ಣ, ಜಿಲ್ಲಾ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಕೆ.ಸಿ. ಗೀತಾ, ಶ್ರೀ ದೇವರಾಜ್, ಶಾಲಾಭಿವೃದ್ಧಿ ಸಮಿತಿಯ ಉಪಾಧ್ಯಕ್ಷ ಶ್ರೀ ದೇವೇಂದ್ರ, ಜಿಲ್ಲಾ ಸಹಾಯಕ ಆಯುಕ್ತೆ ಶ್ರೀಮತಿ ಪ್ರೇಮಾ ಪ್ರಕಾಶ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

* ಹಾಸನ ಜಿಲ್ಲಾ ಸಂಸ್ಥೆಯಲ್ಲಿ ಸ್ಕೌಟ್ ಮತ್ತು ಗೈಡ್‌ಗಳಿಗೆ ಜಿಲ್ಲಾ ಮಟ್ಟದ ತೃತೀಯ ಸೋಪಾನ ಪರೀಕ್ಷಾ ಶಿಬಿರವನ್ನು ಜಿಲ್ಲಾ ಸ್ಕೌಟ್ ಭವನದಲ್ಲಿ ಆಯೋಜನೆ ಮಾಡಲಾಗಿತ್ತು. ಪರೀಕ್ಷಾ ಶಿಬಿರವನ್ನು ಜಿಲ್ಲಾ ಮುಖ್ಯ ಆಯುತ್ತರಾದ ಡಾ. ವೈ.ಎಸ್. ವೀರಭದ್ರಪ್ಪರವರು ಉದ್ಘಾಟನೆ ಮಾಡಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿರವರು ಪ್ರಾಸ್ತಾವಿಕ ನುಡಿಗಳನ್ನು ನುಡಿದರು ಶಿಬಿರದ ನಾಯಕರುಗಳಾಗಿ ಜಿಲ್ಲಾ ತರಬೇತಿ ಆಯುಕ್ತರಾದ ಶ್ರೀಮತಿ ಕಾತ್ಯಾಯಿನಿ ಕೆ.ಪಿ. ಹಾಗೂ ಶ್ರೀ ಗಂಗಾ ನಾಯಕ್‌ರವರು ಕಾರ್ಯನಿರ್ವಹಿಸಿದರು.

* ಹಾಸನ ಜಿಲ್ಲಾ ಸಂಸ್ಥೆಯಲ್ಲಿ ವಿಶ್ವ ಯೋಗ ದಿನಾಚರಣೆಯನ್ನು ಶ್ರೀ ಸುರೇಶ್ ಗುರೂಜಿ ಜಿಲ್ಲಾ ಕಾರ್ಯದರ್ಶಿ ಹಾಗೂ ಯೋಗ ಶಿಕ್ಷಕರು ಇವರ ಮಾರ್ಗದರ್ಶನದಲ್ಲಿ ಆಚರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಸಂಸ್ಥೆ ಪದಾಧಿಕಾರಿಗಳು ಶಿಕ್ಷಕರು ಉಪಸ್ಥಿತರಿದ್ದರು.

## ಹಾವೇರಿ

* ಜುಲೈ 14 ರಂದು ಹಾವೇರಿ ಜಿಲ್ಲಾ ಸಂಸ್ಥೆಯ ಸಮಾಲೋಚನೆ ಸಭೆಯನ್ನು ಹಾವೇರಿಯ ನೂತನ ಸ್ಕೌಟ್ಸ್ ಭವನದಲ್ಲಿ ಆಯೋಜಿಸಲಾಗಿತ್ತು. ಈ ಸಭೆಯಲ್ಲಿ ಶ್ರೀ ಪಿ.ಜಿ.ಆರ್. ಸಿಂಧ್ಯಾ ಮಾನ್ಯ ರಾಜ್ಯ ಮುಖ್ಯ ಆಯುಕ್ತರು ಸಭೆಯಲ್ಲಿ ಪಾಲ್ಗೊಂಡು ಜಿಲ್ಲೆಯಲ್ಲಿ ಸ್ಕೌಟಿಂಗ್ ಅಭಿವೃದ್ಧಿ ಪಡಿಸುವ ಬಗ್ಗೆ ಹಾಗೂ ವಿವಿಧ ವಿಚಾರಗಳ ಬಗ್ಗೆ ಚರ್ಚಿಸಿದರು, ಈ ಸಂದರ್ಭದಲ್ಲಿ, ಶ್ರೀ ಸುರೇಶ್ ಹುಗ್ಗಿ DCC ಹಾಗೂ ಉಪನಿರ್ದೇಶಕರು ಸಾ.ಶಿ.ಇ. ಹಾವೇರಿ, SOC(S) ಶ್ರೀ ಎಂ. ಪ್ರಭಾಕರ್ ಭಟ್, SOC (G), ಶ್ರೀಮತಿ ಮಂಜುಳಾ .ಸಿ ಹಾಗೂ ಹಾವೇರಿ ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಎಲ್ಲಾ ತಾಲೂಕ ಕಾರ್ಯದರ್ಶಿಗಳು ಭಾಗವಹಿಸಿದ್ದರು.



## ಕಾರವಾರ (ಉ.ಕ.)

* ಜೂನ್ 05 ರಂದು ಹಳದೀಪುರದ ಪಿ.ಎಂ. ಶ್ರೀ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಜಿಲ್ಲಾ ಮಟ್ಟದಲ್ಲಿ ಪರಿಸರ ದಿನಾಚರಣೆ ಹಮ್ಮಿಕೊಳ್ಳಲಾಗಿತ್ತು. ಜಿಲ್ಲಾ ಮುಖ್ಯ ಆಯುಕ್ತರಾದ ಡಾ॥ ಜಿ.ಜಿ. ಸಭಾಹಿತ್‌ರವರು ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟನೆ ಮಾಡಿದರು. ಅಧ್ಯಕ್ಷತೆಯನ್ನು ಎಸ್.ಡಿ.ಎಂ.ಸಿ ಅಧ್ಯಕ್ಷರು ವಹಿಸಿದ್ದರು. ಶಾಲೆಯ ಮುಖ್ಯೋಪಾಧ್ಯಾಯರು, ಶಿಬ್ಬಂದಿ ವರ್ಗದವರು ಕಬ್, ಬುಲ್ ಬುಲ್, ಸ್ಕೌಟ್ಸ್-ಗೈಡ್ಸ್ ಹಾಗೂ ಶಾಲೆಯ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಶಾಲೆಯ ವರಾಂಡಾದಲ್ಲಿ ಗಿಡವನ್ನು ನೆಡಲಾಯಿತು.



* ಭಟ್ಕಳ, ಕುಮಟಾ ಹಾಗೂ ಹೊನ್ನಾವರ ಸ್ಥಳೀಯ ಸಂಸ್ಥೆಯ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ ಜೂನ್ 18, 19 ಹಾಗೂ 20 ರಂದು ಜಿಲ್ಲಾ ಮಟ್ಟದ ರಾಜ್ಯ ಪುರಸ್ಕಾರ ಪೂರ್ವಸಿದ್ಧತಾ ಪರೀಕ್ಷಾ ಶಿಬಿರವನ್ನು ಅಗ್ರಹಾರದಲ್ಲಿ ಹಮ್ಮಿಕೊಳ್ಳಲಾಗಿತ್ತು. ಇದರಲ್ಲಿ ಒಟ್ಟು 61 ಮಕ್ಕಳು ಉಪಸ್ಥಿತರಿದ್ದರು. ಸ್ಕೌಟ್ ವಿಭಾಗಕ್ಕೆ ನಾಯಕರಾಗಿ ಶ್ರೀ ಬಿ.ಡಿ. ಫರ್ನಾಂಡಿಸ್, ಗೈಡ ವಿಭಾಗಕ್ಕೆ ನಾಯಕರಾಗಿ ಹಾಗೂ ಶಿಬಿರದ ಉಸ್ತುವಾರಿಯನ್ನು ಎ.ಎಸ್.ಓ.ಸಿ ಶ್ರೀಮತಿ ಭಾರತಿ ಡಾಯಸ್‌ರವರು ನಿರ್ವಹಿಸಿದರು. ಉದ್ಘಾಟನಾ



ಸಮಾರಂಭದ ಅಧ್ಯಕ್ಷತೆಯನ್ನು, ಜಿಲ್ಲಾ ಮುಖ್ಯ ಆಯುಕ್ತರಾದ ಡಾ. ಜಿ.ಜಿ.ಸಬಾಹಿತರು ವಹಿಸಿದ್ದರು. ಜಿಲ್ಲಾ ಗೈಡ್ ಆಯುಕ್ತರಾದ ಶ್ರೀಮತಿ ಶೋಭಾ ಕುಲಕರ್ಣಿ, ದಳ ನಾಯಕರುಗಳು ಉಪಸ್ಥಿತರಿದ್ದರು. ಬೆಳಗಿನ ತಿಂಡಿ ವ್ಯವಸ್ಥೆಯನ್ನು ಶ್ರೀ ನಾರಾಯಣ್ ಪ್ರಭು ಹಾಗೂ ಸಂತೋಷರವರು ವಹಿಸಿಕೊಂಡಿದ್ದರು ಮಧ್ಯಾಹ್ನದ ಊಟದ ವ್ಯವಸ್ಥೆಯನ್ನು ಲೀಲಾ ಗಣಪತಿ ಚ್ಯಾರಿಟೇಬಲ್ ಟ್ರಸ್ಟ್‌ನವರು ಮಾಡಿದರು.

* ಜೂನ 27 ಮತ್ತು 28ರಂದು ಹೊನ್ನಾವರ, ಭಟ್ಕಳ, ಕುಮಟಾ ತಾಲ್ಲೂಕಿನ ಸ್ಕೌಟ್ಸ್, ಗೈಡ್ಸ್, ಕಬ್, ಬುಲ್‌ಬುಲ್‌ಗಳಿಗೆ ಜಿಲ್ಲಾ ಪುರಸ್ಕಾರ ಪರೀಕ್ಷಾ ಶಿಬಿರವನ್ನು ಹವ್ಯಕ ಕಲ್ಯಾಣ ಮಂಟಪ, ಕರ್ಕಿಯಲ್ಲಿ ಹಮ್ಮಿಕೊಳ್ಳಲಾಗಿತ್ತು. 249 ಅಭ್ಯರ್ಥಿಗಳು ಅವರೊಂದಿಗೆ ಸ್ಕೌಟರ್ಸ್-ಗೈಡರ್ಸ್‌ಗಳು ಹಾಜರಿದ್ದರು. ಈ ಕ್ಯಾಂಪಿನ ಉಸ್ತುವಾರಿಯನ್ನು ಎ.ಎಸ್.ಓ.ಸಿ. ಶ್ರೀಮತಿ ಭಾರತಿ ಡಾಯಸ್‌ರವರು ನಿರ್ವಹಿಸಿದರು. ಸ್ಕೌಟ್ ವಿಭಾಗಕ್ಕೆ ಶ್ರೀ ಬಿ.ಡಿ. ಫರ್ನಾಂಡಿಸ್ ಗೈಡ್ ವಿಭಾಗಕ್ಕೆ ಶ್ರೀ ಚಂದ್ರಕಲಾ ದೇಶಭಂಡಾರಿ, ಕಬ್ ವಿಭಾಗಕ್ಕೆ ಶ್ರೀ ಬಿ.ವಿ. ನಾಯ್ಕ ಬೊಮ್ಮನ್, ಬುಲ್‌ಬುಲ್ ವಿಭಾಗಕ್ಕೆ ಶ್ರೀಮತಿ ಶಾರದಾ ಹೆಗಡೆಯವರು ಕಾರ್ಯನಿರ್ವಹಿಸಿದರು. ತಿಂಡಿ ಊಟದ ವ್ಯವಸ್ಥೆಯನ್ನು ಶ್ರೀ ಜಿ.ಆರ್. ಮಡಿವಾಳರವರು ನಿರ್ವಹಿಸಿದರು. ಜಿಲ್ಲೆಯ ಡಿಸಿಸಿ ಡಾ. ಜಿ.ಜಿ. ಸಭಾಹಿತ್, ಡಿಸಿಜಿ ಶ್ರೀಮತಿ ಶೋಭಾ ಕುಲಕರ್ಣಿ, ಜಿಲ್ಲಾ ಕಾರ್ಯದರ್ಶಿ ಶ್ರೀ ಆರ್.ಟಿ. ಹೆಬ್ಬಾರ ಉಪಸ್ಥಿತರಿದ್ದರು.



* ಜಿಲ್ಲಾ ಮಟ್ಟದ 2ನೇ ಜಿಲ್ಲಾ ಮಟ್ಟದ ರಾಜ್ಯ ಪುರಸ್ಕಾರ ಪೂರ್ವಸಿದ್ಧತಾ ಪರೀಕ್ಷಾ ಶಿಬಿರ ಹಾಗೂ ತೃತೀಯ ಸೋಪಾನ ಪರೀಕ್ಷಾ ಶಿಬಿರವನ್ನು ಜೂನ್ 30 ಮತ್ತು ಜುಲೈ 01 ರಂದು ಕಾರವಾರದ ಬಾಲಮಂದಿರ ಶಾಲೆಯಲ್ಲಿ ಹಮ್ಮೀಕೊಳ್ಳಲಾಗಿತ್ತು. ಒಟ್ಟು 142 ಮಕ್ಕಳು ಹಾಜರಿದ್ದರು. ಕಾರವಾರ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ಗಣೇಶ ಬಿಷ್ಠಣ್ಣರವರು ಮೊದಲ ದಿನ ಉಪಸ್ಥಿತರಿದ್ದು ಎಲ್ಲಾ ವ್ಯವಸ್ಥೆಯನ್ನು ಗಮನಿಸಿದರು. ಸ್ಕೌಟ್ ವಿಭಾಗಕ್ಕೆ ಶ್ರೀ ಬಿ.ಡಿ. ಫರ್ನಾಂಡಿಸ್‌ರವರು ಹಾಗೂ ಗೈಡ್ ವಿಭಾಗಕ್ಕೆ ಎ.ಎಸ್.ಓ.ಸಿ ಶ್ರೀಮತಿ ಭಾರತಿ ಡಾಯಸ್‌ರವರು ನಾಯಕರಾಗಿ ಕಾರ್ಯನಿರ್ವಹಿಸಿದರು.

* ಜುಲೈ 18 ಮತ್ತು 19 ರಂದು ರಾಜ್ಯ ಸ್ಕೌಟ್ ಸಂಘಟನಾ ಆಯುಕ್ತರಾದ ಶ್ರೀ ಎಂ. ಪ್ರಭಾಕರ ಭಟ್ಟರವರು ಜಿಲ್ಲೆಗೆ ಭೇಟಿ ನೀಡಿ ಕಾರವಾರ ಜಿಲ್ಲಾಧಿಕಾರಿ ಶ್ರೀಮತಿ ಲಕ್ಷ್ಮಿಪ್ರಿಯಾ ಕೆ., ಭಾ.ಆ.ಸೇ ರವರನ್ನು, ಮಕ್ಕಳ ಮತ್ತು ಮಹಿಳಾ ಕಲ್ಯಾಣ ಇಲಾಖೆಯ ಉಪನಿರ್ದೇಶಕರನ್ನು, ನಗರದ ಶಾಲೆ ಕಾಲೇಜುಗಳನ್ನು, ಕಾರವಾರದ ನಂತರ ಅಂಕೋಲಾದ ಶಾಲೆಗಳಿಗೆ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ ಭೇಟಿ ನೀಡಿ ವಾರ್ಷಿಕ ಕಾರ್ಯಕ್ರಮದ ಯೋಜನೆಯ ಪುಸ್ತಕವನ್ನು ನೀಡಿ ಸ್ಕೌಟಿಂಗ್ ಗೈಡಿಂಗ್ ಬೆಳವಣಿಗೆಗೆ ಸಹಕಾರ ನೀಡುವಂತೆ ಅಧಿಕಾರಿ/ ಶಾಲಾ ವಿನಂತಿಸಲಾಯಿತು.



## ಕೊಡಗು

* ಜುಲೈ 03 ರಂದು ಜಿಲ್ಲಾ ತರಬೇತಿ ಭವನ ನಿರ್ಮಾಣಕ್ಕೆ ಎರಡು ಕೋಟಿ ರೂ. ಅನುದಾನ ಬಿಡುಗಡೆ ಮಾಡಲಾಗುವುದು ಎಂದು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ತಿಳಿಸಿದ್ದಾರೆ. ನಗರದ ಭಾರತ್ ಸ್ಕೌಟ್ ಮತ್ತು ಗೈಡ್ ಶ್ರೀಮತಿ ಪೊನ್ನಮ್ಮ ಕುಶಾಲಪ್ಪ ಭವನದ ಸಭಾಂಗಣದಲ್ಲಿ ನಡೆದ ಪದಾಧಿಕಾರಿಗಳ ಸಮಾಲೋಚನ ಸಭೆಯಲ್ಲಿ ಅವರು ಮಾತನಾಡಿದರು. ಸ್ಕೌಟ್ಸ್–ಗೈಡ್ಸ್‌ನ ಜಿಲ್ಲಾ ಪ್ರಧಾನ ಆಯುಕ್ತರಾದ ಶ್ರೀ ಕೆ.ಟಿ. ಬೇಬಿ ಮ್ಯಾಥ್ಯೂ ಮಾತನಾಡಿ "ಸ್ಕೌಟ್ಸ್–ಗೈಡ್ಸ್ ಜಿಲ್ಲಾ ತರಬೇತಿ ಭವನ ನಿರ್ಮಾಣಕ್ಕೆ ರೂ. 2 ಕೋಟಿ ಅನುದಾನ ಬಿಡುಗಡೆ ಆಗಲಿದೆ. ಆ ನಿಟ್ಟಿನಲ್ಲಿ ವಿವಿಧ ಚಟುವಟಿಕೆ ಹಮ್ಮಿಕೊಳ್ಳಲಾಗಿದೆ. ಆದಿವಾಸಿ ಮಕ್ಕಳಿಗೆ ಶಿಕ್ಷಣ ಮತ್ತು ಆರೋಗ್ಯ ಸಂಬಂಧ ಜಾಗೃತಿ ಮೂಡಿಸಲಾಗುತ್ತದೆ ಎಂದರು. ಸಂಸ್ಥೆಯ ಸಹ ಆಯುಕ್ತ ಶ್ರೀ ಬಸವರಾಜ್ ಮಾತನಾಡಿ ಸ್ಕೌಟ್ಸ್–ಗೈಡ್ಸ್ ಚಟುವಟಿಕೆಗಳು ಮನೆ ಮನೆ ತಲುಪಬೇಕು ಎಲ್ಲರೂ ಉತ್ಸಾಹದಿಂದ ಪಾಲ್ಗೊಳ್ಳುವಂತಾಗಬೇಕು ಎಂದರು. ಸಂಘಟನಾ ಆಯುಕ್ತರಾದ ಶ್ರೀ ಪ್ರಭಾಕರ್ ಭಟ್ ಮಾತನಾಡಿ "ಸ್ಕೌಟ್ಸ್–ಗೈಡ್ಸ್ ಸಂಸ್ಥೆಯನ್ನು ಮತ್ತಷ್ಟು ಗಟ್ಟಿಗೊಳಿಸಬೇಕು ಪರಿಸರ ಸ್ನೇಹಿ ಗಣೇಶ ಹಬ್ಬ ಆಚರಣೆ ಮಾಡಬೇಕು ಎಂದರು. ಈ ಸಂದರ್ಭದಲ್ಲಿ ಮಾತನಾಡಿದ ಶ್ರೀ ಟಿ.ಜಿ. ಪ್ರೇಮ್‌ಕುಮಾರ್ ಅವರು ಸ್ಕೌಟ್ಸ್–ಗೈಡ್ಸ್ ಚಟುವಟಿಕೆಯಲ್ಲಿ ಎಲ್ಲರೂ ತೊಡಗಿಸಿಕೊಳ್ಳುವಂತರಾಗಬೇಕು ಎಂದರು. ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರಾದ ಶ್ರೀ ಸಿ. ಶ್ರೀರಂಗಧಾಮಪ್ಪ ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಶ್ರೀಮತಿ ಜ್ಯೋತಿ ಕ್ಷೇತ್ರ ಶಿಕ್ಷಣಾಧಿಕಾರಿ ಡಾ. ಬಿ.ಸಿ. ದೊಡ್ಡೇಗೌಡ, ಜಿಲ್ಲಾ ಗೈಡ್ ಆಯುಕ್ತರಾದ ಶ್ರೀಮತಿ ರಾಣಿ ಮಾಚಯ್ಯ, ಜಿಲ್ಲಾ ಪದಾಧಿಕಾರಿಗಳು ಶಾಲಾ ಶಿಕ್ಷಣ ಇಲಾಖೆ ಉಪಯೋಜನ ಸಮನ್ವಯಾಧಿಕಾರಿ ಶ್ರೀ ಎಂ. ಕೃಷ್ಣಪ್ಪ, ಜಿಲ್ಲಾ ದೈಹಿಕ ಶಿಕ್ಷಣ ಪರಿವೀಕ್ಷಕಿ ಶ್ರೀಮತಿ ಗಾಯತ್ರಿ, ವಿವಿಧ ಘಟಕಗಳ ಪದಾಧಿಕಾರಿಗಳು, ರೋವರ್ಸ್‌ಗಳು ಭಾಗವಹಿಸಿದ್ದರು. ಶ್ರೀಮತಿ ಕೆ.ಯು. ರಂಜಿತ್ ಕಾರ್ಯಕ್ರಮ ನಿರ್ವಹಿಸಿದರು. ಕಾರ್ಯದರ್ಶಿ ಶ್ರೀಮತಿ ಎಂ.ಎಂ. ವಸಂತಿ ವಂದಿಸಿದರು. ಇದೇ ವೇಳೆ ಸಂಸ್ಥೆ ರಾಜ್ಯ ಮುಖ್ಯ ಆಯುಕ್ತರು ಶ್ರೀ ಪಿ.ಜಿ.ಆರ್. ಸಿಂಧ್ಯರವರು ವಿವಿಧ ಪ್ರಶಸ್ತಿ ಪಡೆದವರು ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರನ್ನು ಸನ್ಮಾನಿಸಿ ಗೌರವಿಸಲಾಯಿತು.





## ಕೋಲಾರ

* ಮೇ 19 ರಂದು ನಗರದ ಮಹಿಳಾ ಸಮಾಜ ಶಾಲೆಯ ಸ್ಕೌಟ್ಸ್ ಗೈಡ್ಸ್‌ಗಳಿಂದ ಕೋಲಾರ ನಗರದಲ್ಲಿ ರಸ್ತೆ ಬದಿ ಗಿಡಗಳನ್ನು ನೆಡಲಾಯಿತು. ಈ ಸೇವಾ ಕಾರ್ಯಕ್ಕೆ ಜಿಲ್ಲಾ ಗೈಡ್ ಆಯುಕ್ತರಾದ ಶ್ರೀಮತಿ ನವೀನರವರು ಚಾಲನೆ ನೀಡಿದರು.



* ಮೇ 23 ರಂದು ಕೋಲಾರ ಜಿಲ್ಲೆಯ ಪ್ರೌಢಶಾಲಾ ಮುಖ್ಯಶಿಕ್ಷರಿಗೆ ಸಾಮಾನ್ಯ ಮಾಹಿತಿ ಶಿಬಿರವನ್ನು ಜಿಲ್ಲಾ ಉಪ ನಿರ್ದೇಶಕರಾದ ಶ್ರೀಯುತ ಕೃಷ್ಣಮೂರ್ತಿರವರ ಅಧ್ಯಕ್ಷತೆಯಲ್ಲಿ ಸ್ಕೌಟ್ ಭವನದಲ್ಲಿ ನಡೆಸಲಾಯಿತು.



* ಜೂನ್ 01 ರಂದು ಪರಿಸರ ದಿನಾಚರಣೆ ಅಂಗವಾಗಿ ಶಾಲಾಮಕ್ಕಳಿಗೆ ಚಿತ್ರಕಲೆ ಮತ್ತು ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪ ಚಾಲನೆ ನೀಡಿದರು.

* ಜೂನ್ 05 ರಂದು ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ನಗರದ ಮಲಬಾರ್ ಗೋಲ್ಡ್ ರವರ ಜೊತೆಗೂಡಿ ನಗರದಲ್ಲಿ ಅಲಂಕಾರಿಕ ಗಿಡಗಳನ್ನು ನಾಟಿ ಮಾಡಲಾಯಿತು. ನಗರದ "ಎಲ್ಲಾ ಅಂಗಡಿ ಮತ್ತು ಸಂಸ್ಥೆಗಳ ಮುಖ್ಯಸ್ಥರು ನಗರದ ಹಸಿರೀಕರಣಕ್ಕೆ ಕೈಜೋಡಿಸಲಿ" ಎಂದು ಶ್ರೀಮತಿ ಲಕ್ಷ್ಮೀದೇವಮ್ಮ ರಮೇಶ್ ತಿಳಿಸಿದರು. ನಗರದ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ ಮಳಿಗೆ ಎದುರು ಸ್ಕೌಟ್ಸ್ ಗೈಡ್ಸ್ ಸಂಸ್ಥೆ, ರೋಟರಿ ಕೋಲಾರ ನಂದಿನಿ, ಜಿಲ್ಲಾ ಪರಿಸರ ಇಲಾಖೆ ಮತ್ತು ಮಲಬಾರ್ ಮಳಿಗೆಯ ಸಂಯುಕ್ತ ಆಶ್ರಯದಲ್ಲಿ ಆಯೋಜನೆ ಮಾಡಿದ್ದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪ ರವರು ಮಾತನಾಡಿ "ಸ್ಕೌಟ್ಸ್ ಗೈಡ್ಸ್ ಸಂಸ್ಥೆ ಕಳೆದ 118 ವರ್ಷಗಳಿಂದ ವಿದ್ಯಾರ್ಥಿಗಳಲ್ಲಿ ಪರಿಸರ ಕಾಳಜಿಯನ್ನು ಬೆಳೆಸಲು ಹಾಗೂ ಪರಿಸರದಲ್ಲಿ ಮರಗಳನ್ನು ಹೆಚ್ಚಿಸಲು ಪ್ರಯತ್ನ ಮಾಡುತ್ತಾ ಬಂದಿದೆ" ಎಂದು ತಿಳಿಸಿದರು. ರೋಟರಿ ಕೋಲಾರ ನಂದಿನಿ ಅಧ್ಯಕ್ಷ ಸ್ಕೌಟ್ ಬಾಬು ಮಾತನಾಡಿ ಪರಿಸರ ದಿವನ್ನು ಕೇವಲ ಒಂದು ದಿನಕ್ಕೆ ಮಾತ್ರ ಮೀಸಲಾಗಿರಸದೇ ಪ್ರತಿನಿತ್ಯ "ಪರಿಸರ ದಿನಾಚರಣೆಯನ್ನು ಆಚರಿಸಬೇಕು"



ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಮಲಬಾರ್ ಸಂಸ್ಥೆಯ ಶ್ರೀ ಅಲ್ತಾಫ್, ಶ್ರೀ ನಾರಾಯಣಸ್ವಾಮಿ, ಶ್ರೀ ಪ್ರಿಯೇಶ್, ರೋಟರಿ ನಿರ್ದೇಶಕರಾದ ಶ್ರೀ ರಮೇಶ್ ನಾಯಕ್, ಸ್ಕೌಟ್ಸ್-ಗೈಡ್ಸ್ ಸಂಸ್ಥೆಯ ಯುವ ಸಮಿತಿಯ ಉಪಾಧ್ಯಕ್ಷರುಗಳು ಉಪಸ್ಥಿತರಿದ್ದರು.

* ಜೂನ್ 05 ರಂದು ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ನಗರದ ಆರ್.ಎಲ್. ಜಾಲಪ್ಪ ಶಾಲೆಯವರ ಜೊತೆಗೂಡಿ ನಗರದಲ್ಲಿ 300 ಗಿಡಗಳನ್ನು ನಾಟಿ ಮಾಡಲಾಯಿತು.

* ಜೂನ್ 07 ರಂದು ಪರಿಸರ ದಿನಾಚರಣೆ ಅಂಗವಾಗಿ ಶಾಲಾ ಮಕ್ಕಳಿಗೆ ಚಿತ್ರಕಲೆ ಮತ್ತು ಪ್ರಬಂಧ ಸ್ಪರ್ಧೆಯ ವಿಜೇತರಿಗೆ ಬಹುಮಾನ ಸಮಾರಂಭವನ್ನು ಏರ್ಪಡಿಸಲಾಗಿತ್ತು.

* ಜೂನ್ 10 ರಂದು ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ನಗರದ ಅಮರಜ್ಯೋತಿ ಶಾಲೆಯ ಮತ್ತು ಸರ್ಕಾರಿ ಶಾಲೆರವರ ಜೊತೆಗೂಡಿ ನಗರದಲ್ಲಿ 150 ಗಿಡಗಳನ್ನು ನಾಟಿ ಮಾಡಲಾಯಿತು.

* ಜೂನ್ 13 ರಂದು ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆಗಳ ಪ್ರಗತಿ ಪರಿಶೀಲನಾ ಸಭೆಯು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್ ಸಿಂಧ್ಯಾರವರ ಅಧ್ಯಕ್ಷತೆಯಲ್ಲಿ ಜರುಗಿತು.



* "ಪೂರ್ವ ಪ್ರಾಥಮಿಕ ಶಾಲಾ ಹಂತದಿಂದ ಸ್ನಾತಕೋತ್ತರ ಹಂತದ ವರೆಗೆ ವಿವಿಧ ಹಂತಗಳಲ್ಲಿ ಸ್ಕೌಟ್-ಗೈಡ್ಸ್ ಶಿಕ್ಷಣವನ್ನು ರೂಪಿಸಿದ್ದು ಈ ಶಿಕ್ಷಣವನ್ನು ಎಲ್ಲಾ ವಿದ್ಯಾರ್ಥಿಗಳಿಗೂ ತಲುಪಿಸುವಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದು" ಎಂದು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾ ತಿಳಿಸಿದರು.

* ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪರವರು ಮಾತನಾಡಿ "ಶಿಕ್ಷಕರು ಮನಸ್ಸು ಮಾಡಿದರೆ ಮಾತ್ರ ಸ್ಕೌಟ್ಸ್-ಗೈಡ್ಸ್ ಚಳುವಳಿ ಎಲ್ಲಾ ವಿದ್ಯಾರ್ಥಿಗಳಿಗೆ ತಲುಪಿಸುವಲ್ಲಿ ಸಾಧ್ಯ" ಎಂದು ತಿಳಿಸಿದರು.

* ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಶ್ರೀ ಕೃಷ್ಣಮೂರ್ತಿ ರವರು ಮಾತನಾಡಿ "ಸ್ಕೌಟ್ಸ್-ಗೈಡ್ಸ್ ಶಿಕ್ಷಣ ಪ್ರತಿವಾರಕ್ಕೊಮ್ಮ ಕಡ್ಡಾಯವಾಗಿ ತರಗತಿಗಳಲ್ಲಿ ನಡೆಯುವ ಹಾಗೆ ಕ್ರಮ ಕೈಗೊಳ್ಳಲಾಗುವುದು" ಎಂದು ತಿಳಿಸಿದರು.



* ಗೈಡ್ಸ್ ಆಯುಕ್ತೆ ಶ್ರೀಮತಿ ನವೀನಾರವರು ಮಾತನಾಡಿ "ಮಕ್ಕಳಲ್ಲಿ ಮತ್ತು ಸಮಾಜದಲ್ಲಿ ಬದಲಾವಣೆ ತರಲು ಎಲ್ಲರೂ ಬಯಸುತ್ತೇವೆ, ಆದರೆ ನಾವು ಬದಲಾಗಿ ನಮ್ಮನ್ನು ನೋಡಿ ಇತರರು ಬದಲಾಗುವಂತೆ ನಾವು ನಡೆದುಕೊಳ್ಳಬೇಕು" ಎಂದು ತಿಳಿಸಿದರು. ಈ ಸಂಧರ್ಭದಲ್ಲಿ ರಾಜ್ಯ ತರಬೇತಿ ಆಯುಕ್ತೆ ಶ್ರೀಮತಿ ಶ್ಯಾಮಲ, ಜಿಲ್ಲಾ ಅಧ್ಯಕ್ಷರಾದ ಶ್ರೀ ಬಿ. ಸಪ್ಪಗೌಡ, ಸ್ಕೌಟ್ ಆಯುಕ್ತರಾದ ಶ್ರೀ ಕೆ.ಆರ್. ಸುರೇಶ್, ಉಪಾಧ್ಯಕ್ಷರಾದ ಡಾ॥ ಚಂದ್ರಶೇಖರ್, ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆಗಳ ಪದಾದೀಕಾರಿಗಳು ಉಪಸ್ಥಿತರಿದ್ದರು.

* ಸ್ಕೌಟ್ ಭವನದಲ್ಲಿ ಉಚಿತ ಕಂಪ್ಯೂಟರ್ ತರಬೇತಿ ಕೇಂದ್ರವನ್ನು ರಾಜ್ಯ ಪ್ರಧಾನ ಆಯುಕ್ತರು ಮತ್ತು ಜಿಲ್ಲಾ ಪಧಾಧಿಕಾರಿಗಳು ಉದ್ಘಾಟಿಸಿದರು.

* ಜೂನ್ 13 ರಂದು ಜಿಲ್ಲಾ ಆಯುಷ್ ಇಲಾಖೆ, ರೋಟರಿ ಕೋಲಾರ ನಂದಿನಿ ಜೊತೆಗೂಡಿ ಔಷಧಿ ಸಸ್ಯಗಳನ್ನು ಉದ್ಯಾನವನದಲ್ಲಿ ನೆಡಲಾಯಿತು. ಇದೇ ದಿನ ಯೋಗ ದಿನಾಚರಣೆಯನ್ನು ಆಚರಿಸಲಾಯಿತು.

* ಜೂನ್ 14 ರಂದಿ ಬಂಗಾರಪೇಟೆ ತಾಲ್ಲೂಕಿನ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಶಾಲೆಯ ಶಿಕ್ಷಕರಿಗೆ ಪ್ರಾರಂಭಿಕ ತರಬೇತಿ ಶಿಬಿರವನ್ನು ಆಯೋಜಿಸಿ 26 ಶಿಕ್ಷರಿಗೆ ತರಬೇತಿ ನೀಡಲಾಯಿತು.



## ಕೊಪ್ಪಳ

* ವಿಭಾಗ ಮಟ್ಟದ ಸ್ಕೌಟ್ಸ್ ಮಾಸ್ಟರ್ ಗೈಡ್ಸ್ ಕ್ಯಾಪ್ಟನ್, ಕಬ್ ಮಾಸ್ಟರ್, ಪ್ಲಾಕ್ ಲಿಡರ್ ಮುಂದುವರೆದ ತರಬೇತಿ ಶಿಬಿರವು. ಜಿಲ್ಲಾ ತರಬೇತಿ ಮತ್ತು ಶಿಬಿರ ಕೇಂದ್ರ ಗುನ್ನಳ್ಳಿ ತಾ. ಕೊಪ್ಪಳ ಇಲ್ಲಿ ಜೂನ್ 24 ರಿಂದ 30ರ ವರೆಗೆ ಜರುಗಿತು.




* ಜೂನ್ 25 ರಂದು ಶಿಬಿರದ ಉದ್ಘಾಟನಾ ಸಮಾರಂಭ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಹೆಚ್.ಎಮ್. ಸಿದ್ದರಾಮ್ ಸ್ವಾಮಿ, ರಾಜ್ಯ ಉಪಾಧ್ಯಕ್ಷರು ಹಾಗು ಜಿಲ್ಲಾ ಮುಖ್ಯ ಆಯುಕ್ತರು ರವರು ವಹಿಸಿದ್ದರು. ಶ್ರೀಮತಿ ಮಲ್ಲೇಶ್ವರಿ ಜೂಜಾರೆ, ಕಲ್ಯಾಣ ಕರ್ನಾಟಕ ಉಸ್ತುವಾರಿ ಇವರು ಶಿಬಿರದ ಕುರಿತು ಪ್ರಾಸ್ತಾವಿಕ ನುಡಿಗಳನ್ನು ಹೆಳಿದರು, ಶಿಬಿರದ ಉದ್ಘಾಟನೆಯನ್ನು ಶ್ರೀ ವಿಠ್ಠಲ್ ಜಾಬಗೊಂಡರ. ಯುವ ಜನ ಸೇವಾ ಕ್ರೀಡಾ ಇಲಾಖೆ, ಜಿಲ್ಲಾಧಿಕಾರಿಗಳು ಜ್ಯೋತಿ ಬೆಳಗಿಸುವುದರೊಂದಿಗೆ ನೆರವೇರಿಸಿ ಮಾತನಾಡಿದರು. ಶ್ರೀಶೈಲ್ ಬಿರಾದಾರ್, ಉಪನಿರ್ದೇಶಕರು ಕೊಪ್ಪಳ ಇವರು ಶಿಬಿರಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ತರಬೇತಿ ಪಡೆದು ಮಕ್ಕಳಿಗೆ ತರಬೇತಿಯನ್ನು ನೀಡುತ್ತಾ ಘಟಕಗಳನ್ನು ಪ್ರಾರಂಭಿಸುವುದರೊಂದಿಗೆ ಕೈಲಾದ ಮಟ್ಟಿಗೆ ಸೇವಾ ಕಾರ್ಯಗಳನ್ನು ಮಾಡಲು ಸೂಚಿಸಿದರು. ಶ್ರೀ ಮಲ್ಲಿಕಾರ್ಜುನ ಚೌಕಿಮಠ, ಜಿಲ್ಲಾ ಆಯುಕ್ತರು





(ಸ್ಕೌಟ್)ರವರು ಉಪಸ್ಥಿತರಿದ್ದು. ಶಿಬಿರದಲ್ಲಿ ಶಿಕ್ಷಕರು ತರಬೇತಿಯನ್ನು ಪಡೆದು ನೀಡಿರುವ ತರಬೇತಿಯ ಸಮಗ್ರ ಮಾಹಿತಿಗಳನ್ನು ಮಕ್ಕಳಿಗೆ ವರ್ಗಾಯಿಸಲು ಹೇಳಿದರು. ಶ್ರೀ ಶ್ರೀಕಾಂತ್ ಮಾಸಗಟ್ಟಿ, ಜಿಲ್ಲಾ ತರಬೇತಿ ಆಯುಕ್ತರು (ಸ್ಕೌಟ್) ಮತ್ತು ಸ್ಕೌಟ್ಸ್ ವಿಭಾಗದ ಶಿಬಿರದ ನಾಯಕರು. ಹಾಗೂ ಶ್ರೀಮತಿ ಸರೋಜಾ ಜಿಲ್ಲಾ ತರಬೇತಿ ಆಯುಕ್ತರು (ಗೈಡ್) ಹಾಗೂ ಗೈಡ್ ಶಿಬಿರದ ನಾಯಕರು ಜಿಲ್ಲಾ ಪದಾಧಿಕಾರಿಗಳು ಶಿಬಿರ ಉದ್ಘಾಟನಾ ಸಮಾರಂಭ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಸ್ಕೌಟ್ಸ್ ಶಿಬಿರಾರ್ಥಿಗಳು 32, ಗೈಡ್ಸ್ ಶಿಬಿರಾರ್ಥಿಗಳು 26, ಕಬ್ ಶಿಬಿರಾರ್ಥಿಗಳು 05, ಒಟ್ಟು ಶಿಬಿರಾರ್ಥಿಗಳು 63 ಜನ ಭಾಗವಹಿಸಿರುತ್ತಾರೆ. ಕಾರ್ಯಕ್ರಮದ ನಿರುಪಣೆಯನ್ನು ಶ್ರೀ ಶರೀಫ್ ಹತ್ತಿಮತ್ತೂರ್ ಎಎಸ್ಓಸಿ ರವರು ಮಾಡಿದರು. ಶ್ರೀ ವೀರನಗೌಡ ಪೊಲೀಸ್ ಪಾಟೀಲ್, ಅವರು ಸರ್ವರನ್ನು ವಂದನಾರ್ಪಣೆ ಮಾಡಿದರು.



* ಜಿಲ್ಲಾ ಮಟ್ಟದ ನಿಪುಣ ಪರೀಕ್ಷಾ ಶಿಬಿರ ಹಾಗೂ ಜಿಲ್ಲಾ ಮಟ್ಟದ ರೇಂಜರ್ಸ್ ಪ್ರೇರಣಾ ಶಿಬಿರವು. ಜುಲೈ 02 ರಿಂದ 04ರ ವರೆಗೆ ಜಿಲ್ಲಾ ತರಬೇತಿ ಮತ್ತು ಶಿಬಿರ ಕೇಂದ್ರ ಗುನ್ನಳ್ಳಿ ತಾ. ಕೊಪ್ಪಳ ಇಲ್ಲಿ ಜರುಗಿತ್ತು. ಶಿಬಿರದ ನಾಯಕರಾಗಿ ಶ್ರೀ ಮಂಜುನಾಥ್ RSL HWB, ಶ್ರೀಮತಿ ಶ್ರೀದೇವಿ ತಟ್ಟಿ, RL ರವರು ಕಾರ್ಯನಿರ್ವಹಿಸಿದರು. ಶ್ರೀಮತಿ ಮಲ್ಲೇಶ್ವರಿ ಜೂಜಾರಿ ಇವರು, ರೇಂಜರ್ಸ್‌ಗಳಿಗೆ, ಪ್ರೇರಣಾ ಶಿಬಿರ ಕುರಿತು ಮತ್ತು ಪರೀಕ್ಷಾ ಶಿಬಿರದ ವಿಷಯಗಳನ್ನು ಪಾಠ ಬೋಧನೆ ಮಾಡಿದರು. ಶಿಬಿರದಲ್ಲಿ ಒಟ್ಟು 54 ರೋವರ್, 74 ರೇಂಜರ್ಸ್, 10 ಸಿಬ್ಬಂದಿಗಳು, ಒಟ್ಟು 138 ಜನ ಭಾಗವಹಿಸಿದ್ದರು.

* ಜುಲೈ 11 ರಂದು ಜಿಲ್ಲಾಡಳಿತ ಭವನ ಕೊಪ್ಪಳದಲ್ಲಿ ಹೊಸದಾಗಿ ಆಗಮಿಸಿದ ಶ್ರೀ ಸುರೇಶ್ ಇಟ್ನಾಳ. ಮಾನ್ಯ ಜಿಲ್ಲಾಧಿಕಾರಿಗಳು ಇವರನ್ನು ಜಿಲ್ಲಾ ಪದಾಧಿಕಾರಿಗಳು ಸನ್ಮಾನಿಸಿ ಸ್ವಾಗತಿಸಿದರು. 2025–26ನೇಯ ಸಾಲಿನ ವಾರ್ಷಿಕ ಕ್ರಿಯಾಯೋಜನೆಯ ಪುಸ್ತಕಗಳನ್ನ ಬಿಡುಗಡೆ ಮಾಡಿ ಚಟುವಟಿಕೆಗಳಿಗೆ ಸಹಕಾರ ಮಾಡುತ್ತೇವೆ ಎಂದು ಹೇಳಿದರು. ನಂತರ ಶ್ರೀ ವರ್ಣಿತ ನೇಗಿ ಮಾನ್ಯ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಉಪಾಧ್ಯಕ್ಷರು ಜಿಲ್ಲಾ ಸಂಸ್ಥೆ ಕೊಪ್ಪಳ ಇವರನ್ನೂ ಸಹ ಕೂಡ ಜಿಲ್ಲಾ ಸಂಸ್ಥೆ ಪರವಾಗಿ ಸನ್ಮಾನಿಸಿ ಸ್ವಾಗತಿಸಲಾಯಿತು. ವಾರ್ಷಿಕ ಕ್ರಿಯಾಯೋಜನೆ ಪುಸ್ತಕಗಳನ್ನು ಬಿಡುಗಡೆ ಮಾಡಿ ಚಟುವಟಿಕೆಗಳಿಗೆ ಶುಭ ಕೋರುತ್ತಾ ನಮ್ಮ ಸಹಕಾರ ಸದಾ ಕಾಲ ಇರುತ್ತದೆ ಎಂದು ತಿಳಿಸಿದರು. ಶ್ರೀ ಜಗದೀಶ್, ಉಪ ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಶ್ರೀ ಶ್ರೀಶೈಲ್ ಬಿರಾದರ್, ಉಪನಿರ್ದೇಶಕರು ಶಾಲಾ ಶಿಕ್ಷಣ ಇಲಾಖೆ ಕೊಪ್ಪಳ ಮತ್ತು ಕೊಪ್ಪಳ ಜಿಲ್ಲಾ ಸಂಸದರು ಶಾಸಕರು ಕಚೇರಿಯಲ್ಲಿ ಸಹ ವಾರ್ಷಿಕ ಕ್ರಿಯಾಯೋಜನೆ ಪುಸ್ತಕಗಳನ್ನು ನೀಡಲಾಯಿತು. ಸರ್ವರೂ ಸ್ಕೌಟ್ಸ್ ಗೈಡ್ಸ್ ಚಟುವಟಿಕೆಗಳಿಗೆ ಸಹಕಾರ ಮಾಡುತ್ತೇವೆ ಎಂದು ಶುಭ ಕೋರಿದರು. ಈ ಸಂದರ್ಭದಲ್ಲಿ ಶ್ರೀ ಹೆಚ್ ಎಮ್. ಸಿದ್ದರಾಮ್ ಸ್ವಾಮಿ, ರಾಜ್ಯ ಉಪಾಧ್ಯಕ್ಷರು ಹಾಗೂ ಜಿಲ್ಲಾ ಮುಖ್ಯ ಆಯುಕ್ತರು ಶ್ರೀಮತಿ ಅರುಣಾ ವಸ್ತ್ರದ. ಜಿಲ್ಲಾ ಉಪಾಧ್ಯಕ್ಷರು ಆಯುಕ್ತರು (ಗೈಡ್ಸ್)ರವರು, ಮತ್ತು ಶ್ರೀ ಶರೀಫ್ ಹತ್ತಿಮತ್ತೂರ್ ಎ.ಎಸ್.ಓ.ಸಿ.ರವರು ಉಪಸ್ಥಿತರಿದ್ದರು.



## ಮಧುಗಿರಿ

* ಜೂನ್ 16 ರಂದು ಪಾವಗಡದ ಜಿಎಫ್‌ಜಿಸಿ ಕಾಲೇಜಿನಲ್ಲಿ ತಾಲೂಕು ಮಟ್ಟದ ಯುವ ನಾಯಕರು ಹಾಗೂ ಜಿಲ್ಲಾ ಮಟ್ಟದ ಯುವನಾಯಕರ ಸಭೆಯನ್ನು ಆಯೋಜಿಸಿದ್ದು ಈ ಸಭೆಯಲ್ಲಿ ಯುವ ನಾಯಕರ ಕರ್ತವ್ಯದ ಬಗ್ಗೆ ಮಾಹಿತಿ ನೀಡಲಾಯಿತು ತಾಲೂಕುಗಳಿಂದ ಆಯ್ಕೆಯಾಗಿ ಬಂದ ಯುವ ನಾಯಕರನ್ನು ಜಿಲ್ಲಾ ಯುವನಾಯಕರ ಅಧ್ಯಕ್ಷರಾದ ಶ್ರೀ ಶ್ರೀನಿವಾಸ್ ಸ್ವಾಗತಿಸಿದರು ಮತ್ತು ರಾಜ್ಯ ಸಂಸ್ಥೆಯ ತರಬೇತಿ ಕಾರ್ಯಾಗಾರದಲ್ಲಿ ತಿಳಿಸಿದ ಮಾಹಿತಿಗಳನ್ನು ಪ್ರಸ್ತುತಪಡಿಸಿದರು. ಶ್ರೀ ಕರಿಸಿದ್ದಪ್ಪ ಟಿ., ಸಹಾಯಕ ರಾಜ್ಯ ಸಂಘಟನಾ ಆಯುಕ್ತರು ಯುವ ನಾಯಕರ ಜವಾಬ್ದಾರಿ ಸ್ಥಳೀಯ ಮತ್ತು ಜಿಲ್ಲಾ ಸಂಸ್ಥೆಯ ಸಹಕಾರಿಯಾಗಿ ಕರ್ತವ್ಯ ನಿರ್ವಹಿಸುವ ಬಗ್ಗೆ ಮಾಹಿತಿ ನೀಡಿದರು ನಂತರ ಮಧ್ಯಾಹ್ನದ ಅವಧಿಯಲ್ಲಿಓ ವೈಎಂಎಸ್ ಮಾಡುವುದರ ಬಗ್ಗೆ ಮಾಹಿತಿ ನೀಡಿದರು.



* ಜೂನ್ 19 ರಂದು ಎಂಜಿಎಂ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಆಯುಷ್ ಇಲಾಖೆಯ ವತಿಯಿಂದ ಹಾಗೂ ಜಿಲ್ಲಾ ಸಂಸ್ಥೆ ವತಿಯಿಂದ ಯೋಗಾಭ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಆಯುಷ್ ಇಲಾಖೆಯ ಅಧಿಕಾರಿಯಾದ ಡಾಕ್ಟರ್ ನವೀನ್ ಕುಮಾರ್ ಯೋಗ ಮಾಡುವ ಉದ್ದೇಶ ಹಾಗೂ ಪ್ರಯೋಜನದ ಬಗ್ಗೆ ಸವಿಸ್ತಾರವಾಗಿ ತಿಳಿಸಿದರು. ಸ್ಥಳೀಯ ಹಾಗೂ ಜಿಲ್ಲಾ ಸಂಸ್ಥೆ ಕೋಶಾಧಿಕಾರಿ ಶ್ರೀಮತಿ ಉಮಾ ಮಲ್ಲೇಶ್ ಮತ್ತು ಸ್ಕೌಟ್–ಗೈಡ್ ಶಿಕ್ಷಕರು ಶಿಕ್ಷಕಿಯರು ಪದಾಧಿಕಾರಿಗಳು ಎ.ಎಸ್.ಓ.ಸಿ. ಶ್ರೀ ಕರಿಸಿದ್ದಪ್ಪ ಟಿ. ಇತರೆ ಶಿಕ್ಷಕರುಗಳು ಭಾಗವಹಿಸಿದ್ದರು.

* ಜೂನ್ 21 ರಂದು ವಿಶ್ವ ಯೋಗ ದಿನಾಚರಣೆಯ ಅಂಗವಾಗಿ ಕೆ.ಆರ್. ಬಡಾವಣೆ ಸರ್ಕಾರಿ ಪ್ರೌಢಶಾಲಾ ಹಾಗೂ ಪಿ.ಎಂ. ಶಾಲೆ ಆವರಣದಲ್ಲಿ ಪತಂಜಲಿ ಸಂಸ್ಥೆ ಹಾಗೂ ತಾಲೂಕ್ ಆಡಳಿತ ವತಿಯಿಂದ ನಡೆಸಿದ ಯೋಗ ಕಾರ್ಯಕ್ರಮದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಹನುಮಂತ್ ರಾಯಪ್ಪ, ಜಿಲ್ಲಾ ದೈಹಿಕ ಶಿಕ್ಷಣ ಪರೀವಿಕ್ಷಕರಾದ ಶ್ರೀ ಶೆಟ್ಟಿಮನಿ, ಶ್ರೀ ದೊಡ್ಡ ಎರಗಾಮಯ್ಯ, ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷಕರು ಪತಂಜಲಿ ಶಿಕ್ಷಣ ಸಂಸ್ಥೆಯ ಶ್ರೀ ನರಸಿಂಹಮೂರ್ತಿ ಹಾಗೂ ಇತರೆ ಪದಾಧಿಕಾರಿಗಳು ಅಧಿಕಾರಿ ವರ್ಗದವರು ಸ್ಕೌಟ್–ಗೈಡ್ಸ್ ಮತ್ತು ಇತರೆ ವಿದ್ಯಾರ್ಥಿಗಳು ಪಾಲ್ಗೊಂಡು ಯೋಗಾಭ್ಯಾಸ ನಡೆಸಿದರು. ಯೋಗ ಶಿಕ್ಷಣದ ಬಗ್ಗೆ ಮಾಹಿತಿಯನ್ನು ಶ್ರೀನರಸಿಂಹಮೂರ್ತಿ ನೀಡಿದರು. ಇದೇ ದಿನ ಸರ್ಕಾರಿ ಜೂನಿಯರ್ ಕಾಲೇಜ್ ಆವರಣದಲ್ಲಿ



ವಿಶ್ವ ಯೋಗ ದಿನಾಚರಣೆಯನ್ನು ಮಕ್ಕಳು ಯೋಗ ಮಾಡುವ ಮುಖಾಂತರ ಆಚರಿಸಿದರು. ಪ್ರಾಥಮಿಕ ಪ್ರೌಢಶಾಲೆ ವಿದ್ಯಾರ್ಥಿಗಳು ಇದೇ ದಿನ ಪುರಸಭಾ ಸಭಾಂಗಣದಲ್ಲಿ ಯೋಗ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅಭ್ಯಾಸ ನಡೆಸಿದರು.

* ಜೂನ್ 21 ರಂದು ಮಧುಗಿರಿ ಶಿರಾ, ಕೊರಟಗೆರೆ, ಪಾವಗಡ ಸ್ಥಳೀಯ ಸಂಸ್ಥೆಗಳಲ್ಲಿ ತಾಲೂಕ್ ಆಡಳಿತ ಮತ್ತು ಶಾಲಾ ಹಂತಗಳಲ್ಲಿವಿಶ್ವ ಯೋಗ ದಿನಾಚರಣೆಯನ್ನು ನಡೆಸಲಾಯಿತು.

* ಜೂನ್ 26 ರಂದು ಶಿರಾ ಜಿ.ಎಫ್.ಜಿ.ಸಿ. ಕಾಲೇಜಿನಿಂದ ಮಾದಕ ದ್ರವ್ಯಗಳ ವಿರೋಧಿ ದಿನ ಕಾರ್ಯಕ್ರಮವನ್ನು ನಗರದ ಪ್ರಮುಖ ಬೀದಿಗಳಲ್ಲಿ ಜಾಥಾ ಮಾಡುವ ಮುಖಾಂತರ ಆಚರಿಸಲಾಯಿತು.

* ಜೂನ್ 26 ರಂದು ಕೊರಟಗೆರೆ ತಾಲೂಕ್ ಆಡಳಿತ ಪೊಲೀಸ್ ಇಲಾಖೆ, ಸ್ಥಳೀಯ ಸಂಸ್ಥೆ ಹಾಗೂ ಇತರೆ ಇಲಾಖೆಗಳ ಸಹಯೋಗದೊಂದಿಗೆ ಮಾದಕ ದ್ರವ್ಯ ವಿರೋಧಿ ದಿನಾಚರಣೆ ಅಂಗವಾಗಿ ನಗರದ ತಹಸಿಲ್ದಾರ್ ಕಚೇರಿಯಿಂದ ಕೆಎಸ್ಆರ್‌ಟಿಸಿ ಬಸ್ ಸ್ಟಾ ್ಯಂಡ್‌ವರೆಗೆ ಜಾಥಾವನ್ನು ನಡೆಸಲಾಯಿತು. ಈ ಕಾರ್ಯಕ್ರಮದಲ್ಲಿ ತಾಲೂಕು ದಂಡಾಧಿಕಾರಿಗಳಾದ ಶ್ರೀ ಮಂಜುನಾಥ್, ತಹಸೀಲ್ದಾರ್. ಶ್ರೀ ಅನಿಲ್ ಕುಮಾರ್ ವೃತ್ತ ನೀಕ್ಷಕರು ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ತಾಲೂಕು ಅಧ್ಯಕ್ಷರಾದ ಶ್ರೀ ಕೆ.ಆರ್. ಓಬಳರಾಜ್, ಸ್ಕೌಟ್–ಗೈಡ್ ಶಿಕ್ಷಕ–ಶಿಕ್ಷಕಿಯರು, 250 ಸ್ಕೌಟ್–ಗೈಡ್ಸ್‌ಗಳು ಹಾಗೂ ನಗರದ ಇತರೆ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಶಿಕ್ಷಕರು ಉಪನ್ಯಾಸಕರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

* ಜೂನ್ 27 ರಂದು ನಾಡಪ್ರಭು ಶ್ರೀ ಕೆಂಪೇಗೌಡ ಜನ್ಮದಿನಾಚರಣೆಯನ್ನು ನಗರದ ಕೆ.ಆರ್. ಬಡಾವಣೆಯ ಪಿ.ಎಂ. ಶಾಲೆ ಹಾಗೂ ಸರ್ಕಾರಿ ಪ್ರೌಢಶಾಲಾ ಆವರಣದಲ್ಲಿ ಆಚರಿಸಲಾಯಿತು ಈ ಕಾರ್ಯಕ್ರಮದಲ್ಲಿ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ನಾಗರಾಜ್, ಕೆಂಪೇಗೌಡರು ಬೆಂಗಳೂರು ನಗರವನ್ನು ಆಗಿನ ಕಾಲದಲ್ಲೇ ಮುಂದಿನ ಮುನ್ನೋಟವನ್ನು ಇಟ್ಟುಕೊಂಡು ಹೇಗೆ ರಚನೆ ಮಾಡಿದರು ಎಂಬುದರ ಬಗ್ಗೆ ತಿಳಿಸಿದರು. ಶ್ರೀ ರಾಜಪ್ಪ ಮುಖ್ಯ ಶಿಕ್ಷಕರು, ಸಂಸ್ಥೆ ಕಾರ್ಯದರ್ಶಿ ಶ್ರೀ ತಿಮ್ಮರಾಜ್ ಎನ್.ಎಂ. ಭಾಗವಹಿಸಿದ್ದರು. ಶಿಕ್ಷಕ–ಶಿಕ್ಷಕಿಯರು ಇತರೆ ಶಿಕ್ಷಕರು ಹಾಗೂ 250 ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.



* ಜೂನ್ 30 ರಿಂದ ಜುಲೈ 06ರ ವರೆಗೆ ಶಿರಾ ಸ್ಥಳೀಯ ಸಂಸ್ಥೆ ವತಿಯಿಂದ ಶಿಕ್ಷಕ ಶಿಕ್ಷಕಿಯರಿಗೆ ಸ್ಕೌಟ್ ಮಾಸ್ಟರ್ ಗೈಡ್ ಕ್ಯಾಪ್ಟನ್ ಮೂಲ ತರಬೇತಿಯ ಶಿಬಿರವನ್ನು ಹಮ್ಮಿಕೊಂಡಿದ್ದು ಈ ಶಿಬಿರದ ಉದ್ಘಾಟನೆಯನ್ನು ಶ್ರೀ ತಿಮ್ಮರಾಜು, ಪ್ರಾಂಶುಪಾಲರು ಟಿಟಿಐ ಇವರು ನೆರವೇರಿಸಿದರು. ಈ ಶಿಬಿರದಲ್ಲಿ ಶ್ರೀ ನಾಗೇಶ್ ಆರ್. ಶಿವಪುರ್, ರಾಜ್ಯ ತರಬೇತಿ ಆಯುಕ್ತರು (ಸ್ಕೌಟ್) ಇವರು ಪ್ರಾಸ್ತಾವಿಕ ನುಡಿಗಳನ್ನು ಆಡಿದರು. ಶ್ರೀ ಚಂದ್ರಶೇಖರ್, ಎ.ಡಿ.ಸಿ.(ಸ್ಕೌ) ಮತ್ತು 21 ಗೈಡ್, 29 ಸ್ಕೌಟ್ ಶಿಬಿರಾರ್ಥಿಗಳು ಪಾಲ್ಗೊಂಡಿದ್ದರು.



* ಜುಲೈ 01 ರಂದು ಎಂಜಿಎಂ ಶಾಲೆ ಆವರಣದಲ್ಲಿ ಪರಿಸರ ದಿನಾಚರಣೆಯ ಸಂಬಂಧವಾಗಿ ಪ್ರಬಂಧ ಸ್ಪರ್ಧೆ ಚಿತ್ರಕಲೆ ಹಾಗೂ ಭಾಷಣ ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರಶಸ್ತಿಗಳಿಗೆ ಆಯ್ಕೆಯಾದ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು.

* ಜುಲೈ 01 ರಂದು "ನಮ್ಮ ಆಹಾರ ನಮ್ಮ ಆರೋಗ್ಯ" ಕಾರ್ಯಕ್ರಮದಲ್ಲಿ ಮಕ್ಕಳಿಂದ ಹಣ್ಣು ಹೂವು ತರಕಾರಿ ಗಳನ್ನು ಯಾವ ಗಿಡ ಸಸ್ಯಗಳಿಂದ ಯಾವ ಹಣ್ಣು ಹೂವು ತರಕಾರಿಗಳನ್ನು ಬೆಳೆಯುತ್ತೇವೆ ಅವುಗಳನ್ನು ಗುರುತಿಸುವುದು ಹೇಗೆ ಎಂದು ತಿಳಿಸಿದರು.

## ಮಂಡ್ಯ

* ಜುಲೈ 12 ಮತ್ತು 13 ರಂದು ಮಂಡ್ಯ ಜಿಲ್ಲೆಯ ಸ್ಕೌಟ್–ಗೈಡ್ ರಾಜ್ಯ ಪುರಸ್ಕಾರ ಪೂರ್ವ ತರಬೇತಿ ಪರೀಕ್ಷಾ ಶಿಬಿರ ಏರ್ಪಡಿಸಲಾಗಿತ್ತು. ಗೈಡ್ ವಿಭಾಗದಿಂದ 32 ಮತ್ತು ಸ್ಕೌಟ್ ವಿಭಾಗದಿಂದ 20 ಮಕ್ಕಳು ಹಾಜರಿದ್ದರು. ಶಿಬಿರ ನಾಯಕತ್ವವನ್ನು ಶ್ರೀಮತಿ ಶಬಾನ, ಶ್ರೀಮತಿ ಮಂಜುಳಾ, ಶ್ರೀಮತಿ ಶಿವಕುಮಾರಿ, ಶ್ರೀ ರಾಮಕೃಷ್ಣ, ಶ್ರೀ ಸುಂದರೇಶ್ ಇವರುಗಳು ವಹಿಸಿಕೊಂಡಿದ್ದರು. ಶಿಬಿರವನ್ನು ಜಿಲ್ಲಾ ಮುಖ್ಯ ಆಯುಕ್ತರು ಉದ್ಘಾಟಿಸಿದರು.



## ರಾಯಚೂರು

* ಜುಲೈ 02 ರಂದು ಜಿಲ್ಲಾ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆ ರಾಯಚೂರು ಮತ್ತು CBSE ವಿದ್ಯಾಭಾರತಿ ಶಾಲೆ ರಾಯಚೂರು ಇವರುಗಳ ಸಂಯುಕ್ತಾಶ್ರಯದಲ್ಲಿ ಶ್ರೀಮತಿ ಕಾತ್ಯಾಯಿನಿ ಹೆಗಡೆ ಪ್ರಾಂಶುಪಾಲರ ಇವರ ಅಧ್ಯಕ್ಷತೆಯಲ್ಲಿ ಕಬ್ಸ್–ಬುಲ್‌ಬುಲ್ಸ್ ಹಾಗೂ ಸ್ಕೌಟ್ಸ್–ಗೈಡ್ಸ್ ಶಾಲಾ ಮಟ್ಟದ ಮಕ್ಕಳ ಮೇಳವನ್ನು ಆಯೋಜನೆ ಮಾಡಲಾಯಿತು. ಮುಖ್ಯ ಅತಿಥಿಗಳಾಗಿ ಶ್ರೀ ಆರ್.ಎಚ್. ಸಾಗರ್, ಅಧ್ಯಕ್ಷರು ಸ್ಥಳೀಯ ಸಂಸ್ಥೆ ರಾಯಚೂರು, ಶ್ರೀ ಎನ್. ಶೇಖರ್ ಕಾರ್ಯದರ್ಶಿಗಳು ಸ್ಥಳೀಯ ಸಂಸ್ಥೆ ರಾಯಚೂರು, ಶ್ರೀ ಅಂಬಣ್ಣ ನಾಯಕ, ಎಸ್.ಜಿ.ವಿ.ರವರು ಆಗಮಿಸಿದ್ದರು. ಇದೇ ಸಂದರ್ಭದಲ್ಲಿ ಶ್ರೀ ವಿರೇಶ ಮುರಾರಿ ವ್ಯವಸ್ಥಾಪಕರು, ಶ್ರೀಮತಿ ಕಾವ್ಯ ಉಪ ಪ್ರಾಂಶುಪಾಲರು, ಶ್ರೀಮತಿ ಸುಜಾತ ಮೌಂಟ್ ಮುಖ್ಯಗುರುಗಳು, ಶ್ರೀ ವಜೀರ್ ಮಿಯ, ಸ್ಕೌಟ್ ಮಾಸ್ಟರ್, ಶ್ರೀಮತಿ ರಾಜೇಶ್ವರಿ ಫ್ಲಾಕ್ ಲೀಡರ್, ಶ್ರೀಮತಿ ದೀಪಾ ಗೈಡ್ ಕ್ಯಾಪ್ಟನ್ ಹಾಗೂ ಶಾಲೆಯ ಸಿಬ್ಬಂದಿ ವರ್ಗದವರು ಮತ್ತು ಕಬ್ಸ್, ಬುಲ್ ಬುಲ್ಸ್, ಸ್ಕೌಟ್ಸ್, ಗೈಡ್ಸ್‌ಗಳು ಭಾಗವಹಿಸಿದ್ದರು.



* ಜುಲೈ 08ರಂದು ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರುಗೆ ನೂತನವಾಗಿ ಆಗಮಿಸಿದ ಡಾ. ಶಿವಾನಂದ ಕೆಳಗಿನಮನೆ, ಕುಲಪತಿ ಇವರಿಗೆ ಜಿಲ್ಲಾ ಸಂಸ್ಥೆ ರಾಯಚೂರು ವತಿಯಿಂದ ಸ್ಕಾರ್ಫ್ ಧರಿಸಿ ಸನ್ಮಾನಿಸಿ ಗೌರವಿಸಲಾಯಿತು, ಹಾಗೂ ಡಾ.ಎ. ಚನ್ನಪ್ಪ, ಕುಲಸಚಿವರು, ರಾಜ್ಯ ಸಂಸ್ಥೆಯಿಂದ

ನೀಡಿದ 2025–26ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನಾ ಪುಸ್ತಕವನ್ನು ಬಿಡುಗಡೆಗೊಳಿಸಿದರು. ರೋವರ್ ಸ್ಕೌಟ್ ಲೀಡರ್, ರೇಂಜರ್ ಲೀಡರ್ಸ್ ರವರ ಮೂಲ ತರಬೇತಿ ಹಾಗೂ ಮುಂದುವರೆದ ತರಬೇತಿ ಶಿಬಿರಕ್ಕೆ ಉಪನ್ಯಾಸಕರನ್ನು ನಿಯೋಜಿಸಲು ಶ್ರೀ ಅಂಬಣ್ಣ ನಾಯಕ ಎಸ್.ಜಿ.ವಿ ರವರು ಮನವಿ ಪತ್ರವನ್ನು ನೀಡಿದರು.

* ಜುಲೈ 09ರಂದು ಶ್ರೀ ಶಿವಾನಂದ ಭಜಂತ್ರಿ, ಅಪರ ಜಿಲ್ಲಾಧಿಕಾರಿಗಳು, ರಾಯಚೂರು ಹಾಗೂ ಶ್ರೀ ಹಾಲಪ್ಪ ಪೂಜಾರಿ, ಉಪ ಕಾರ್ಯದರ್ಶಿಗಳು ಜಿಲ್ಲಾ ಪಂಚಾಯತ್ ರಾಯಚೂರು, ಶ್ರೀ ಕೊಟ್ಟೂರ್ ಬಸವಯ್ಯ ಉಪನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ರಾಯಚೂರು, ಶ್ರೀ ಚಂದ್ರಶೇಖರ ಪವಾರ್, ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕು ಪಂಚಾಯತ್, ರಾಯಚೂರು, ಶ್ರೀ ಸೋಮಶೇಖರಪ್ಪ ಹೋಕ್ರಾಣಿ ಪ್ರಾಂಶುಪಾಲರು, ಶ್ರೀಮತಿ ಸುಧಾ, ಜಿಲ್ಲಾ ಸ್ಥಾನೀಕ ಆಯುಕ್ತರು (ಗೈ), ಜಿಲ್ಲಾ ಸಂಸ್ಥೆ ರಾಯಚೂರು ಮತ್ತು ರಾಜ್ಯ ಸಂಸ್ಥೆಯಿಂದ ನೀಡಿದ 2025–26ನೇ ಸಾಲಿನ ವಾರ್ಷಿಕ ಕಾರ್ಯಕ್ರಮಗಳ ಯೋಜನಾ ಪುಸ್ತಕವನ್ನು ಬಿಡುಗಡೆಗೊಳಿಸಿದರು. ಇದೇ ಸಂದರ್ಭದಲ್ಲಿ ಶ್ರೀ ಬಸವರಾಜ, ಗದಗಿನ ಜಿಲ್ಲಾ ಕಾರ್ಯದರ್ಶಿಗಳು, ಶ್ರೀ ಆರ್.ಎಚ್. ಸಾಗರ್ ಅಧ್ಯಕ್ಷರು, ಶ್ರೀ ಎನ್. ಶೇಖರ್, ಕಾರ್ಯದರ್ಶಿಗಳು ರಾಯಚೂರು, ಶ್ರೀ ಅಂಬಣ್ಣ ನಾಯಕ, ಎಸ್.ಜಿ.ವಿ.ರವರು ಉಪಸ್ಥಿತರಿದ್ದರು.









* ಜುಲೈ 19 ರಂದು ಜಿಲ್ಲಾ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆ ರಾಯಚೂರು ವತಿಯಿಂದ ಸನ್ಮಾನ್ಯ ಶ್ರೀ ಎನ್.ಎಸ್. ಬೋಸರಾಜು, ಸಣ್ಣ ನೀರಾವರಿ ಹಾಗೂ ವಿಜ್ಞಾನದ ಮತ್ತು ತಂತ್ರಜ್ಞಾನ ಸಚಿವರು ಕೊಡಗು, ಜಿಲ್ಲಾ ಉಸ್ತುವಾರಿ, ಸಚಿವರು, ಕರ್ನಾಟಕ ಸರ್ಕಾರ ಹಾಗೂ ಅಧ್ಯಕ್ಷರು ಜಿಲ್ಲಾ ಸಂಸ್ಥೆ ರಾಯಚೂರು ರವರು 2025–26ನೇ ಸಾಲಿನ ವಾರ್ಷಿಕ ಕಾರ್ಯಕ್ರಮಗಳ ಯೋಜನಾ ಪುಸ್ತಕಗಳನ್ನು ಬಿಡುಗಡೆಗೊಳಿಸಿದರು. ಇದೇ ಸಂದರ್ಭದಲ್ಲಿ ಶ್ರೀ ಆರ್.ಎಸ್. ಸಾಗರ್ ಅಧ್ಯಕ್ಷರು ಸ್ಥಳೀಯ ಸಂಸ್ಥೆ ರಾಯಚೂರು. ಶ್ರೀ ಎನ್. ಶೇಖರ್ ಕಾರ್ಯದರ್ಶಿಗಳು, ಶ್ರೀ ಅಂಬಣ್ಣ ನಾಯಕ ಎಸ್.ಜಿ.ವಿ.ರವರು ಉಪಸ್ಥಿತರಿದ್ದರು.



## ಶಿವಮೊಗ್ಗ

* "ಜಿಲ್ಲೆಯನ್ನು ಮಾದರಿ ಜಿಲ್ಲೆಯನ್ನಾಗಿ ರೂಪಿಸೋಣ" ಎಂದು ರಾಜ್ಯ ಸಂಸ್ಥೆಯ ರಾಜ್ಯ ಕಾರ್ಯದರ್ಶಿಗಳಾದ ಪ್ರಾಥಮಿಕ ಶ್ರೀ ಕೆ. ಗಂಗಪ್ಪಗೌಡ ಕರೆ ನೀಡಿದರು. ಜಿಲ್ಲಾ ಸ್ಕೌಟ್ ಭವನದಲ್ಲಿ ಆಯೋಜಿಸಲಾಗಿದ್ದ ಪ್ರಥಮ ಪ್ರಗತಿ ಪರಿಶೀಲನ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಸಭೆಯ ಅಧ್ಯಕ್ಷತೆ ವಹಿಸಿದ್ದ ಶಿವಮೊಗ್ಗ ಜಿಲ್ಲೆಯ ಜಿಲ್ಲಾ ಮುಖ್ಯ ಆಯುಕ್ತೆ ಶ್ರೀಮತಿ ಶಕುಂತಲಾ ಚಂದ್ರಶೇಖರ್ ಮಾತನಾಡಿ "ರಾಜ್ಯ ಸಂಸ್ಥೆಯ ಮಾರ್ಗದರ್ಶನ ಮತ್ತು ಸಹಕಾರದಲ್ಲಿ ಸಂಸ್ಥೆಯು ಎಲ್ಲಾ ಚಟುವಟಿಕೆಗಳನ್ನು ಯಶಸ್ವಿಯಾಗಿ ಮಾಡುತ್ತದೆ. ಪ್ರಸ್ತುತ ಈ ವರ್ಷ ರಾಜ್ಯ ಸಂಸ್ಥೆ ಕೊಟ್ಟಿರುವಂತಹ ಗುರಿಯನ್ನು ಸರ್ವ ಸಹಕಾರದಲ್ಲಿ ಮುಟ್ಟುತ್ತೇವೆ" ಎಂದು ಭರವಸೆ ನೀಡಿದರು. ಜಿಲ್ಲಾ ಆಯುಕ್ತ ಶ್ರೀ ಕೆ. ರವಿ ಸರ್ವರನ್ನು ಸ್ವಾಗತಿಸಿದರು. ಈ ಸಭೆಯಲ್ಲಿ ಜಿಲ್ಲಾ ಪದಾಧಿಕಾರಿಗಳು, ಕಛೇರಿ ಸಿಬ್ಬರಿ ವರ್ಗದವರು ಉಪಸ್ಥಿತರಿದ್ದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಕೆ.ವಿ. ಚಂದ್ರಶೇಖರಯ್ಯರವರು ವಂದಿಸಿದರು. ಈ ಸಭೆಯಲ್ಲಿ ಜಿಲ್ಲಾ ಪದಾಧಿಕಾರಿಗಳು ಕಛೇರಿ ಸಿಬ್ಬಂದಿ ಉಪಸ್ಥಿತರಿದ್ದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಕೆ.ವಿ. ಚಂದ್ರಶೇಖರಯ್ಯ ವಂದಿಸಿದರು.




* ಜುಲೈ 11 ರಂದು ಮಾನ್ಯ ಅಪರ ಜಿಲ್ಲಾಧಿಕಾರಿಯವರು ರಾಜ್ಯ ಸಂಸ್ಥೆ ನೀಡಿರುವ ವಾರ್ಷಿಕ ಕಾರ್ಯಕ್ರಮಗಳ ಯೋಜನೆ ಪುಸ್ತಕವನ್ನು ಬಿಡುಗಡೆ ಮಾಡಿ ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀಮತಿ ಶಕುಂತಲಾ ಚಂದ್ರಶೇಖರ್ ಮತ್ತು ಜಿಲ್ಲಾ ಕಾರ್ಯದರ್ಶಿಯಾಗಿರುವ ಶ್ರೀ ಚಂದ್ರಶೇಖರ್, ಜೊತೆ ಕಾರ್ಯದರ್ಶಿ ಹಾಗೂ ಇತರರು ಪಾಲ್ಗೊಂಡಿದ್ದರು.



* "ಸ್ಕೌಟ್ಸ್–ಗೈಡ್ಸ್ ಚಟುವಟಿಕೆಗಳಲ್ಲಿ ಮಕ್ಕಳು ಪಾಲ್ಗೊಳ್ಳುವುದರಿಂದ ನಾಯಕತ್ವ ಗುಣ ಬೆಳೆಯುವ ಜೊತೆಯಲ್ಲಿ ಆತ್ಮವಿಶ್ವಾಸ ವೃದ್ಧಿಸುತ್ತದೆ ಎಂದು ಜಿಲ್ಲಾ ಮುಖ್ಯ ಆಯುಕ್ತೆ ಶ್ರೀಮತಿ ಶಕುಂತಲಾ ಚಂದ್ರಶೇಖರ್ ಹೇಳಿದರು." ತಾಲ್ಲೂಕಿನ ಬಾರಂದೂರು ಗ್ರಾಮದ ಸಂತ ಡೋಮಿನಿಕ್ ಶಾಲೆ ಮತ್ತು ಸಂಯುಕ್ತ ಪದವಿಪೂರ್ವ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಶಾಲೆಯ ಸ್ಕೌಟ್ಸ್–ಗೈಡ್ಸ್ ನಾಯಕರ ಪದಗ್ರಹಣ ಸಮಾರಂಭದಲ್ಲಿ



ಅವರು ಮಾತನಾಡಿದರು. ರೋವರ್ ಜಿಲ್ಲಾ ಆಯುಕ್ತ ಶ್ರೀ ಕೆ. ರವಿ ಮಾತನಾಡಿ ಸ್ಕೌಟ್ಸ್–ಗೈಡ್ಸ್ ಚಳವಳಿ ಬೆಳೆದು ಬಂದ ಕುರಿತು ವಿವರಿಸಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಕೆ.ವಿ. ಚಂದ್ರಶೇಖರಯ್ಯ ಸ್ಕೌಟ್ಸ್–ಗೈಡ್ಸ್ ವಿವಿಧ ವಿಭಾಗಗಳ ಬಗ್ಗೆ ಮಾಹಿತಿ ನೀಡಿದರು. ಜಿಲ್ಲಾ ಕೇಂದ್ರ ಸ್ಥಾನಿಕ ಆಯುಕ್ತ ಜಿ. ವಿಜಯಕುಮಾರ್ ಮಾತನಾಡಿ. ಮಕ್ಕಳಲ್ಲಿ ಶಿಸ್ತು ಮತ್ತು ನಾಯಕತ್ವ ಗುಣಗಳನ್ನು ಹೆಳೆಸುವಲ್ಲಿ ಶಾಲೆಯು ಉತ್ತಮ ಕೆಲಸ ಮಾಡುತ್ತಿದೆ ಎಂದರು. ಶಾಲೆಯಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಎಲ್ಲಾ ವಿಭಾಗಗಳನ್ನು ವಿದ್ಯುಕ್ತವಾಗಿ ಪ್ರಾರಂಭಿಸಲಾಯಿತು. ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಸಿಸ್ಟರ್ ಜಿನಿ ಹಾಗೂ ಸಿಬ್ಬಂದಿ ವರ್ಗದವರು ಸಹ ಭಾಗವಹಿಸಿದ್ದರು.

## ಉಡುಪಿ

* ಮೇ 21 ರಿಂದ 27ರ ವರೆಗೆ ಜಿಲ್ಲಾ ಮಟ್ಟದಲ್ಲಿ ಬನ್ನಿ, ಕಬ್, ಬುಲ್ ಬುಲ್, ಸ್ಕೌಟ್ ಗೈಡ್ಸ್ ಶಿಬಿರವು ಡಾ. ವಿ.ಎಸ್. ಆಚಾರ್ಯ ಜಿಲ್ಲಾ ತರಬೇತಿ ಕೇಂದ್ರ ಪ್ರಗತಿ ನಗರ ಮಣಿಪಾಲದಲ್ಲಿ 108 ಶಿಬಿರಾರ್ಥಿಗಳಿಂದ ಯಶಸ್ವಿಯಾಗಿ ನಡೆಯಿತು. ಈ ಶಿಬಿರದಲ್ಲಿ ಸ್ಕೌಟ್ ವಿಭಾಗದಲ್ಲಿ ಶ್ರೀ ಚಂದ್ರಶೇಖರ್ ಶಿರ್ಸಿ, ಶ್ರೀ ಆನಂದ್ ಬಿ. ಅಡಿಗ, DTC ಶ್ರೀ ಉದಯ ಭಾಸ್ಕರ್ ಶೆಟ್ಟಿ, ಗೈಡ್ ವಿಭಾಗದಲ್ಲಿ ಜಿಲ್ಲಾ ಸಹಾಯಕ ಸಂಘಟನಾ ಆಯುಕ್ತರು ಶ್ರೀಮತಿ ಸುಮನ್ ಶೇಖರ್, ಶ್ರೀಮತಿ ಸುಮಂಗಳ ಗಾಣಿಗ, ಜಿಲ್ಲಾ ತರಬೇತಿ ಆಯುಕ್ತರಾದ, ಶ್ರೀಮತಿ ರೇವತಿ, ಫ್ರೀ–ಎ.ಎಲ್.ಟಿ., ಶ್ರೀಮತಿ ಯಶೋಧ ಹಿಮಾಲಯ ವೃಕ್ಷಮಣಿದಾರರು. ಫ್ಲಾಕ್ ವಿಭಾಗಕ್ಕೆ ಶ್ರೀಮತಿ ವಿಮಲಾ ಬಾಯಿ ಎಲ್.ಟಿ., ಶ್ರೀಮತಿ ಯಶೋಧ ಮತ್ತು ಕಬ್ ವಿಭಾಗ ಶ್ರೀಮತಿ ಉಮಾ ಸುಬ್ರಮಣ್ಯ, ಫ್ರೀ–ಎ.ಎಲ್.ಟಿ ಶ್ರೀ ಶ್ರೀಪಾದ್ ಪ್ರೀ–ಎ.ಎಲ್.ಟಿ. ಕಾರ್ಯನಿರ್ವಹಿಸಿದರು. ಕುಮಾರಿ ಶ್ರಾವಣಿ ಕ್ವಾಟರ್ ಮಾಸ್ಟರ್ ಆಗಿ ಸಹಕರಿಸಿದರು.



* ಮೊದಲ ಹಂತದ ಜಿಲ್ಲಾ ಮಟ್ಟದ ತೃತೀಯ ಸೋಪಾನ ಪರೀಕ್ಷೆಯು ಜೂನ್ 09 ರಿಂದ 13ರ ವರೆಗೆ ಡಾಕ್ಟರ್ ವಿ.ಎಸ್. ಆಚಾರ್ಯ ಜಿಲ್ಲಾ ತರಬೇತಿ ಕೇಂದ್ರ ಪ್ರಗತಿ ನಗರ ಮಣಿಪಾಲ ಇಲ್ಲಿ ನಡೆಯಿತು. ಸುಮಾರು 275 ಶಿಬಿರಾರ್ಥಿಗಳು ಭಾಗವಹಿಸಿದ್ದರು..




* ಜೂನ್ 22 ರಂದು ಮಾನ್ಯ ಅಪರ ಜಿಲ್ಲಾಧಿಕಾರಿಯಾಗಿರುವ ಶ್ರೀ ಅಬೀದ್ ಗದ್ಯಾಳಯವರನ್ನು ಭೇಟಿಯಾಗಿ ಸಂಸ್ಥೆಯ ಬಗ್ಗೆ ಹಾಗೂ ತರಬೇತಿ ಕೇಂದ್ರದ ಬಗ್ಗೆ



ವಿಚಾರ ವಿನಿಮಯ ಮಾಡಿಕೊಳ್ಳಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಜಯಕರ ಶೆಟ್ಟಿ ಇಂದ್ರಾಳಿ, ಸ್ಕೌಟ್ಸ್ ಆಯುಕ್ತರಾದ ಶ್ರೀ ಜನಾರ್ದನ್ ಕೊಡವೂರು, ಜಿಲ್ಲಾ ಕಾರ್ಯದರ್ಶಿ ಶ್ರೀ ಆನಂದ ಅಡಿಗ ಮತ್ತು ರಾಜ್ಯ ಸಹಾಯಕ ಸಂಘಟನಾ ಆಯುಕ್ತರಾದ ಶ್ರೀಮತಿ ಸುಮನ್ ಶೇಖರ್ ಉಪಸ್ಥಿತರಿದ್ದರು.

* ಜೂನ್ 22 ರಂದು ಸಂಸ್ಥೆಯ ಅಧ್ಯಕ್ಷರಾದ ಮಾನ್ಯ ಜಿಲ್ಲಾಧಿಕಾರಿ ಸ್ವರೂಪ್ ಟಿ.ಕೆ.ಯವರನ್ನು ಭೇಟಿಯಾಗಿ ಸಂಸ್ಥೆಯ ಬಗ್ಗೆ ವಿಚಾರ ವಿನಿಮಯ ಮಾಡಿಕೊಳ್ಳಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಜಯಕರ ಶೆಟ್ಟಿ ಇಂದ್ರಾಳಿ, ಸ್ಕೌಟ್ಸ್ ಆಯುಕ್ತರಾದ ಶ್ರೀ ಜನಾರ್ದನ್ ಕೊಡವೂರು, ಜಿಲ್ಲಾ ಕಾರ್ಯದರ್ಶಿ ಶ್ರೀ ಆನಂದ ಅಡಿಗ ಮತ್ತು ರಾಜ್ಯ ಸಹಾಯಕ ಸಂಘಟನಾ ಆಯುಕ್ತರಾದ ಶ್ರೀಮತಿ ಸುಮನ್ ಶೇಖರ ಉಪಸ್ಥಿತರಿದ್ದರು.



* ಜೂನ್ 22 ರಂದು ಮಾನ್ಯ ಉಪನಿರ್ದೇಶಕರನ್ನು ಭೇಟಿಯಾಗಿ ಸಂಸ್ಥೆಯ ಬಗ್ಗೆ, ಮುಂದಿನ ತರಬೇತಿಗಳ ಬಗ್ಗೆ, ವಿಚಾರ ವಿನಿಮಯ ಮಾಡಿಕೊಳ್ಳಲಾಯಿತು ಈ ಸಂದರ್ಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಜಯಕರ ಶೆಟ್ಟಿ ಇಂದ್ರಾಳಿ ಹಾಗೂ ಇತರರು.



## ವಿಜಯಪುರ

* ಜಿಲ್ಲಾ ಸಂಸ್ಥೆ ವಿಜಯಪುರ ಹಾಗೂ ರಾಜ್ಯ ಸಂಸ್ಥೆ ಬೆಂಗಳೂರು ಇವರ ಸಹಯೋಗದಲ್ಲಿ ದಿ. ವಾಸಂತಿಬಾಯಿ ಜಿಗಜಿನಿ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ತರಬೇತಿ ಮತ್ತು ಶಿಬಿರ ಕೇಂದ್ರ ಬುರಣಾಪುರ ಇಲ್ಲಿ ಜೂನ್ 24 ರಿಂದ 30ರ ವರೆಗೆ ಬೆಳಗಾವಿ ವಿಭಾಗ ಮಟ್ಟದ ಜಿಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್ ಮಾಸ್ಟರ್ ಮತ್ತು ಗೈಡ್ಸ್ ಕ್ಯಾಪ್ಟನ್‌ಗಳ ಮುಂದುವರೆದ ತರಬೇತಿ ಶಿಬಿರವು ಜರುಗಿತು.



ಜೂನ್ 24 ರಂದು ಸಾಯಂಕಾಲ 5.00 ಗಂಟೆಗೆ ಜಿಲ್ಲಾ ಸಂಸ್ಥೆಯ ಅಧ್ಯಕ್ಷರಾದ ಡಾ. ಸತೀಶ ಜಿಗಜಿನಿ, ಜಿಲ್ಲಾ ಆಯುಕ್ತರು (ಗೈ) ಶ್ರೀಮತಿ ವಿದ್ಯಾವತಿ ಅಂಕಲಗಿ, ಜಿಲ್ಲಾ



ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಐ.ಎಸ್. ಕಾಳಪ್ಪನವರ, ಜಿಲ್ಲಾ ಕೋಶಾಧಿಕಾರಿಗಳಾದ ಶ್ರೀ ಸಹಜಾನಂದ ದಂಧರಗಿ ಶ್ರೀ ಬಿ.ಎಂ. ಆಜೂರ, ಜಿಲ್ಲಾ ಕೇಂದ್ರ ಸ್ಥಾನಿಕ ಆಯುಕ್ತರು, ಮತ್ತು ಜಿಲ್ಲಾ ಸಂಸ್ಥೆಯ ಎಲ್ಲ ಪದಾಧಿಕಾರಿಗಳು ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿದರು. ಶಿಬಿರದ ನಾಯಕರಾಗಿ ಸ್ಕೌಟ್ ವಿಭಾಗದಲ್ಲಿ ಶ್ರೀ ಅಮರೇಶ ಕೋರಿ, ಗೈಡ್ಸ್ ವಿಭಾಗದಲ್ಲಿ ಶ್ರೀಮತಿ ಎಲ್.ಎಸ್. ಬಹಾದ್ದೂರಿ ಕಾರ್ಯನಿರ್ವಹಿಸಿದರು.

* ಜೂನ್ 29 ರಂದು ಮಧ್ಯಾಹ್ನ 3.00 ಗಂಟೆಗೆ ರಾಜ್ಯ ಮುಖ್ಯ ಆಯುಕ್ತರಾದ ಶ್ರೀಮತಿ ಪಿ.ಜಿ.ಆರ್. ಸಿಂಧ್ಯ ಹಾಗೂ ಜಿಲ್ಲಾ ಪದಾಧಿಕಾರಿಗಳವರ ಉಪಸ್ಥಿತಿಯಲ್ಲಿ ಸಮಾರೋಪ ಸಮಾರಂಭವು ಜರುಗಿತು. ಏಳನೇ ದಿನ ಬೆಳಿಗ್ಗೆ 7.30ಕ್ಕೆ ಸರ್ವಧರ್ಮ ಪ್ರಾರ್ಥನಾ ಸಮಾರಂಭ ನಡೆಯಿತು. 8.00 ಗಂಟೆಗೆ ಧ್ವಜಾರೋಹಣ ನೆರವೇರಿತು. ನಂತರ ಮುಕ್ತ ಸಭೆ, ಶಿಬಿರದ ಮೌಲ್ಯಮಾಪನ, ಅಂತಿಮ ಮಾತುಗಳ ನಂತರ ಧ್ವಜ ಅವರೋಹಣದೊಂದಿಗೆ ಶಿಬಿರವು ಮುಕ್ತಾಯವಾಯಿತು. ಶಿಬಿರದ ಊಟ ಉಪಹಾರದ ಸಂಪೂರ್ಣ ವ್ಯವಸ್ಥೆಯನ್ನು ವಿಜಯಪುರ ಗ್ರಾಮೀಣ ವಲಯದ ಕಾರ್ಯದರ್ಶಿಗಳಾದ ಶ್ರೀ ಎ.ಆರ್. ಕೊಡವ ಒಕ್ಕಲಿಗ ನಿರ್ವಹಿಸಿದರು. ಸ್ಕೌಟ್ಸ್ ಮಾಸ್ಟರ್‌ಗಳು 42 ಗೈಡ್ಸ್ ಕ್ಯಾಪ್ಟನ್‌ಗಳು 34 ಜನರು ಶಿಬಿರಾರ್ಥಿಗಳು ಭಾಗವಹಿಸಿದ್ದರು.



## ವಿಜಯನಗರ

* "ಆರೋಗ್ಯಕರ ಜೀವನ ಸಾಗಿಸಲು ಮತ್ತು ದೈಹಿಕವಾಗಿ ಸದೃಢವಾಗಲು ಯೋಗವು ಮುಖ್ಯ ಪಾತ್ರ ವಹಿಸಲಿದೆ. ಪ್ರತಿಯೊಬ್ಬರೂ ನಿತ್ಯ ಯೋಗಾಭ್ಯಾಸ ರೂಢಿಸಿಕೊಳ್ಳಬೇಕು ಎಂದು ಮಾನ್ಯ ಜಿಲ್ಲಾಧಿಕಾರಿಗಳಾದ ಶ್ರೀ ಎಂ.ಎಸ್. ದಿವಾಕರ್ ಸಲಹೆ ನೀಡಿದರು. ನಗರದ ಸ್ವಾತಂತ್ರ್ಯ ಉದ್ಯಾನವನ (ಫ್ರೀಡಂ ಪಾರ್ಕ್‌ನಲ್ಲಿ)ದಲ್ಲಿ ಜಿಲ್ಲಾಡಳಿತ, ಜಿಲ್ಲಾಪಂಚಾಯತ್, ಜಿಲ್ಲಾ ಆಯುಷ್ ಇಲಾಖೆ, ಭಾರತ್ ಸ್ಕೌಟ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆ, ಪ್ರಜಾಪಿತ ಬ್ರಹ್ಮಕುಮಾರಿ ವಿವಿ, ಪತಂಜಲಿ ಯೋಗ ಸಂಸ್ಥೆ ಸೇರಿದಂತೆ ವಿವಿಧ ಸಂಘ ಸಂಸ್ಥೆಗಳ ಸಹಭಾಗಿತ್ವದಲ್ಲಿ ಏರ್ಪಡಿಸಿದ್ದ "ಒಂದು ಭೂಮಿ ಒಂದು ಆರೋಗ್ಯಕ್ಕಾಗಿ ಯೋಗ" ಎಂಬ ಘೋಷವಾಕ್ಯದೊಂದಿಗೆ 11ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆಯ ಕಾರ್ಯಕ್ರಮ ಉದ್ಘಾಟಿಸಿ ಅವರು



ಮಾತನಾಡಿದರು. ಮಾನ್ಯ ಅಪರ ಜಿಲ್ಲಾಧಿಕಾರಿಗಳಾದ ಶ್ರೀ ಇ. ಬಾಲಕೃಷ್ಣ ಮಾತನಾಡಿ, "ಯೋಗವನ್ನು ನಿಯಮಿತವಾಗಿ ಮಾಡುವುದರಿಂದ ರಕ್ತಪರಿಚಲನೆ, ಜೀರ್ಣಕ್ರಿಯೆ, ಉತ್ತಮ ನಿದ್ರೆಗೆ ಅನುಕೂಲವಾಗಿದೆ" ಎಂದರು. ಹೊಸಪೇಟೆ ನಗರಸಭೆ ಅಧ್ಯಕ್ಷರಾದ ಶ್ರೀ ರೂಪೇಶ್‌ಕುಮಾರ್ ಮಾತನಾಡಿ, ಸಾರ್ವಜನಿಕರಿಗೆ ಅನುಕೂಲವಾಗುವಂತೆ ನಗರದ ಉದ್ಯಾನವನ ಹಾಗೂ ಇನ್ನಿತರೆ ಸಾರ್ವಜನಿಕ ಸ್ಥಳಗಳಲ್ಲಿ ಯೋಗಾಭ್ಯಾಸದ ಅನುಕೂಲತೆ ಮಾಡಿಕೊಡುವಂತೆ ಜಿಲ್ಲಾಡಳಿತಕ್ಕೆ ಮನವಿ ಮಾಡಿದರು. ಯೋಗ ಗುರುಗಳಾದ ಶ್ರೀ ಕಿರಣ್ ಜೀ, ಶ್ರೀ ರಾಜೇಶ್ ಕರ್ವಾ ವಿವಿಧ ಆಸನಗಳನ್ನು ಮಾಡಿಸಿದರು. ಕಾರ್ಯಕ್ರಮದಲ್ಲಿ ಪ್ರಭಾರಿ ಬಿಇಓ ಶ್ರೀ ಶೇಖರಪ್ಪ ಬಿ. ಹೊರಪೇಟೆ, ವೈದ್ಯಾಧಿಕಾರಿಗಳಾದ ಡಾ. ಮುನಿವಾಸು ದೇವರೆಡ್ಡಿ, ಆಕಾಶವಾಣಿಯ ಶ್ರೀಮತಿ ನಾಗರತ್ನ, ಜಿಲಾ ಉಸ್ತುವಾರಿ ಎಫ್.ಡಿ. ಹಳ್ಳಿಕೇರಿ ಸೇರಿದಂತೆ ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು ಭಾಗವಹಿಸಿದ್ದವು.

* ಜಿಲ್ಲಾ ಸಂಸ್ಥೆ ವತಿಯಿಂದ ಉದ್ದೇಶಿತ ಸ್ಕೌಟ್-ಗೈಡ್ಸ್ ಭವನದ ನಿರ್ಮಾಣದ ನಿವೇಶನದಲ್ಲಿ ಜೂನ್ 15 ರಂದು ರೋವರ್ಸ್ ಮತ್ತು ರೇಂಜರ್ಸ್‌ಗಳಿಂದ ಸುಮಾರು 20 ಗಿಡಗಳನ್ನು ನೆಡಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯದರ್ಶಿಗಳು ಶ್ರೀ ಮಂಜುನಾಥಪ್ಪ ಪಿ., ಶ್ರೀ ತಿಪ್ಪೇಸ್ವಾಮಿ, ಸ್ಥಳೀಯ ಸಂಸ್ಥೆ ಕಾರ್ಯದರ್ಶಿ, ದಳನಾಯಕರಾದ ಶ್ರೀ ಅಕ್ಬರ್ ಅಲಿ, ಶ್ರೀ ರಾಜಶೇಖರ್ ಎಂ.,ಶ್ರೀ ನಥಾನಿಯಲ್ ಸಾಂಗ್ಲಿ ಮತ್ತಿತರರಿದ್ದರು.

* "ಮಕ್ಕಳ ಕೌಶಲ್ಯಾಧಾರಿತ ಶಿಕ್ಷಣಕ್ಕೆ ಸ್ಕೌಟ್ಸ್ ಮತ್ತು ಗೈಡ್ಸ್ ಸಹಕಾರಿಯಾಗಿದ್ದು, ಮಕ್ಕಳಲ್ಲಿ ಜ್ಞಾನ ವೃದ್ಧಿಯಾಗುವುದರ ಜೊತೆಗೆ ಶಿಸ್ತನ್ನು ಮೂಡಿಸುತ್ತದೆ" ಎಂದು ಜಿಲ್ಲಾ ಕಾರ್ಯದರ್ಶಿ ಶ್ರೀ ಮಂಜುನಾಥಪ್ಪ ಪಿ. ಹೇಳಿದರು. ಹೊಸಪೇಟೆ ತಾಲ್ಲೂಕಿನ ಶ್ರೀ ಸಪ್ತಗಿರಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ನಡೆದ ಮಕ್ಕಳಿಗೆ ಸ್ಕೌಟ್ಸ್ ಮತ್ತು ಗೈಡ್ಸ್ ಘಟಕಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು. ಸಪ್ತಗಿರಿ ಶಾಲೆಯ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಮಧುಜೈನ್ ಮಾತನಾಡಿ, "ಸ್ಕೌಟ್ ಮತ್ತು ಗೈಡ್ ನಮ್ಮ ಶಾಲೆಯಲ್ಲಿ ಪ್ರಾರಂಭಿಸುತ್ತಿರುವುದು ತುಂಬಾ ಸಂತಸದ ವಿಷಯವಾಗಿದೆ. ಇಂತಹ ಕೌಶಲ್ಯಧಾರಿತ ಶಿಕ್ಷಣವು ಇಂದಿನ ದಿವಸಗಳಲ್ಲಿ ಮಕ್ಕಳಿಗೆ ತುಂಬಾ ಪ್ರಯೋಜನಕಾರಿಯಾಗಿದ್ದು, ಮಕ್ಕಳು ಸ್ವಾವಲಂಬಿಯಾಗಿ ಬದುಕಲು ಸಹಕಾರಿಯಾಗಿದೆ" ಎಂದು ಕಿವಿಮಾತು ಹೇಳಿದರು. ಜಿಲ್ಲಾ ಸಂಘಟಕರಾದ ಶ್ರೀ ಪಾಟೀಲ್ ಜಿ.ಬಿ.ಸಿ. ಮಾತನಾಡಿ ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳಾದ ಅಗ್ನಿ ಅವಘಟಗಳಲ್ಲಿ ವ್ಯಕ್ತಿಯ ರಕ್ಷಣೆ ಮತ್ತು ಪ್ರಕೃತಿ ವಿಕೋಪಗಳು, ಮಾನವ ನಿರ್ಮಿತ ಅವಘಟಗಳಲ್ಲಿ ಜೀವ ರಕ್ಷಣೆಯನ್ನು ಮಾಡುವುದರ ಬಗ್ಗೆ ತಿಳಿಸಿದರು. ಈ ಸಮಾರಂಭದಲ್ಲಿ ಶಾಲೆಯ ಆಡಳಿತಾಧಿಕಾರಿಗಳು ಶ್ರೀ ಸತೀಶ್ ಎಸ್.ಜಿ. ಸ್ಕೌಟ್ಸ್ ಮಾಸ್ಟರ್ ಶ್ರೀ ಶ್ರೀನಿವಾಸ್ ಜೆ. ಜೋಷಿ. ಗೈಡ್ಸ್ ಕ್ಯಾಪ್ಟನ್ ಶ್ರೀಮತಿ ಕನಕಲಕ್ಷ್ಮಿ, ಜಿಲ್ಲಾ ಅಭಿವೃದ್ಧಿ ಸಂಘಟಕರು ಶ್ರೀ ಎನ್.ಐ. ಸಾಂಗ್ಲಿ, ಶಾಲೆಯ ಶಿಕ್ಷಕಿ ಶ್ರೀಮತಿ ಪಿ. ಗಾಯತ್ರಿ ಕುಲಕರ್ಣಿ ಮತ್ತು ಮಕ್ಕಳು ಹಾಗೂ ಪೋಷಕರು ಉಪಸ್ಥಿತರಿದ್ದರು.

## ಯಾದಗಿರಿ

* ಜುಲೈ 17 ರಂದು ಜಿಲ್ಲಾಧಿಕಾರಿಗಳಾದ ಶ್ರೀ ಬೋಯರ್ ಹರ್ಷಲ್ ನಾರಾಯಣರಾವ್ ಮತ್ತು ಶಿಕ್ಷಣ ಇಲಾಖೆ ಉಪನಿರ್ದೇಶಕರನ್ನು ಶ್ರೀ ಚನ್ನಬಸಪ್ಪ ಮುಧೋಳರವರನ್ನು ಭೇಟಿ ಮಾಡಿ 25-26ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆ ಪುಸ್ತಕವನ್ನು ನೀಡಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಉಪಾಧ್ಯಕ್ಷರು (ಗೈಡ್) ಶ್ರೀಮತಿ ಮಲ್ಲಮ್ಮ ಕೋಮನೂರ, ಜಿಲ್ಲಾ ಆಯುಕ್ತರು (ಸ್ಕೌಟ್) ಶ್ರೀ ಸಿ.ಎಂ. ಪಟ್ಟೇದಾರ್ ಜಿಲ್ಲಾ ಉಪಸ್ಥಿತರಿದ್ದರು.



# ಶ್ರದ್ಧಾಂಜಲಿ



**ಶ್ರೀಮತಿ ಲಕ್ಷ್ಮಿಮಂಗಿ,** ಎ,ಎಲ್,ಟಿ(ಗೈಡ್) ಇವರು ಜುಲೈ 12, 2025ರಂದು ಬೆಳಗಾವಿಯಲ್ಲಿ ನಿಧನರಾದರು. ಇವರಿಗೆ 73 ವರ್ಷ ವಯಸ್ಸಾಗಿತ್ತು. ಇವರು ಬೆಳಗಾವಿ ಜಿಲ್ಲೆಯಲ್ಲಿ ಉತ್ತಮ ಗೈಡ್ ಶಿಕ್ಷಕಿಯಾಗಿ ಸುಮಾರು 30 ವರ್ಷಗಳು ಸೇವೆ ಸಲ್ಲಿಸಿದ್ದರು. ಜಿಲ್ಲಾ ಸಂಘಟಕರಾಗಿ, ಜಿಲ್ಲಾ ತರಬೇತಿ ಆಯುಕ್ತೆಯಾಗಿ ಹಾಗು ಜಿಲ್ಲಾ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದರು. ಸ್ಕೌಟ್-ಗೈಡ್ ರಾಜ್ಯ ಮತ್ತು ಜಿಲ್ಲಾ, ಸ್ಥಳೀಯ ಮಟ್ಟದ ಶಿಬಿರಗಳು ಹಾಗೂ ಕಾರ್ಯಕ್ರಮಗಳಲ್ಲಿ ಸಕ್ರೀಯವಾಗಿ ಭಾಗವಹಿಸುತ್ತಿದ್ದರು.



**ಶ್ರೀಮತಿ ಸರಸ್ವತಿ ಸುರೇಶ್,** ಕಬ್ ಮಾಸ್ಟರ್, ಮೈಸೂರು ಇವರು ಜುಲೈ 27, 2025ರಂದು ನಿಧನರಾದರು. ಇವರಿಗೆ 74 ವರ್ಷ ವಯಸ್ಸಾಗಿತ್ತು. ಇವರು ಕಬ್ ವಿಭಾಗದಲ್ಲಿ ಹಿಮಾಲಯ ವೃಕ್ಷಮಣಿ ತರಬೇತಿ ಪಡೆದಿದ್ದು, ಮೈಸೂರು ಜಿಲ್ಲಾ ಸಂಸ್ಥೆಯ ಪ್ರಗತಿಯಲ್ಲಿ ಅವರ ಕೊಡುಗೆ ಅಪಾರವಾದದ್ದು. ಸುಮಾರು 30 ವರ್ಷಗಳು ಸಂಸ್ಥೆಯಲ್ಲಿ ಸೇವೆ ಸಲ್ಲಿಸಿದ್ದರು. ಇವರು ಉತ್ತಮ ಕಬ್ ಮಾಸ್ಟರ್ ಆಗಿದ್ದು ತಮ್ಮ ಸೇವಾವಧಿಯಲ್ಲಿ ಮಕ್ಕಳಲ್ಲಿ ಶಿಸ್ತು, ಸೇವಾ ಮನೋಭಾವನೆ ಮತ್ತು ನಾಯಕತ್ವ ಕೌಶಲ್ಯಗಳನ್ನು ಬೆಳೆಸುವಲ್ಲಿ ಅವರ ಪಾತ್ರ ಅಪಾರವಾದದ್ದು. ಇವರು ಒಬ್ಬ ಮಗ, ಒಬ್ಬಳು ಮಗಳು, ಅಪಾರ ಬಂಧು-ಮಿತ್ರರನ್ನು ಅಗಲಿದ್ದಾರೆ.



**ಶ್ರೀಮತಿ ಗಂಗಾ ಎಂ. ಕಟಗಾವಲಿ,** ದೈಹಿಕ ಶಿಕ್ಷಕಿ ಸರಕಾರಿ ಪ್ರೌಢಶಾಲೆ, ನಾಗಶೆಟ್ಟಿ ಕೊಪ್ಪ, ಧಾರವಾಡ ಜಿಲ್ಲೆ ಇವರು 27 ಜುಲೈ 2025ರಂದು ಧಾರವಾಡದಲ್ಲಿ ನಿಧನರಾದವರು ಇವರಿಗೆ 39 ವರ್ಷ ವಯಸ್ಸಾಗಿತ್ತು. ಇವರು ಗೈಡ್ ವಿಭಾಗದಲ್ಲಿ ಹಿಮಾಲಯ ವೃಕ್ಷಮಣಿ ತರಬೇತಿ ಪಡೆದಿದ್ದು, ಸುಮಾರು 9 ವರ್ಷಗಳಿಂದ ಸ್ಕೌಟ್ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿದ್ದರು. ಸಾಕಷ್ಟು ತರಬೇತಿ ಶಿಬಿರಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಮಕ್ಕಳಿಗೆ ಉತ್ತಮ ತರಬೇತಿ ನೀಡುತ್ತಿದ್ದರು. ಇವರು ತಮ್ಮ ಪತಿ, ಒಬ್ಬ ಮಗ, ಒಬ್ಬ ಮಗಳು ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿದ್ದಾರೆ.



**ಶ್ರೀ ಕೆ.ಜಿ ಕುಬೇರಪ್ಪ,** ಸ್ಕೌಟ್ ಮಾಸ್ಟರ್, ದಾವಣಗೆರೆ ಜಿಲ್ಲೆ ಇವರು ಜುಲೈ 27, 2025ರಂದು ದಾವಣಗೆರೆಯಲ್ಲಿ ನಿಧನರಾದರು. ಇವರಿಗೆ 85 ವರ್ಷ ವಯಸ್ಸಾಗಿತ್ತು. ಸ್ಕೌಟ್ ವಿಭಾಗದಲ್ಲಿ ಹಿಮಾಲಯ ವೃಕ್ಷಮಣಿ ತರಬೇತಿ ಪಡಿದಿದ್ದರು. ಸರಳ ಸಜ್ಜನಿಕೆ ಸ್ವಭಾವವುಳ್ಳ ಇವರು ಸ್ಕೌಟ್-ಗೈಡ್ ಶಿಬಿರಗಳಲ್ಲಿ ಮಕ್ಕಳೊಂದಿಗೆ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಇವರಿಗೆ ಒಬ್ಬ ಮಗ ಮತ್ತು 04 ಜನ ಹೆಣ್ಣುಮಕ್ಕಳು ಇದ್ದಾರೆ. ಶ್ರೀಯುತರು ಹಲವಾರು ವರ್ಷಗಳ ಕಾಲ ದಾವಣಗೆರೆ ದಕ್ಷಿಣ ಸ್ಥಳೀಯ ಸಂಸ್ಥೆ ಕಾರ್ಯದರ್ಶಿಯಾಗಿ ನಂತರ ಜಿಲ್ಲಾ ಕಾರ್ಯದರ್ಶಿಯಾಗಿ ಉತ್ತಮ ಸೇವೆ ಸಲ್ಲಿಸಿದ್ದರು.

ಇವರುಗಳ ಆತ್ಮಕ್ಕೆ ಸದ್ಗತಿ ದೊರಕಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬದವರಿಗೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

– ರಾಜ್ಯ ಕಾರ್ಯದರ್ಶಿ

# ಶಬ್ದಮಾಲಿನ್ಯ ನಿಯಂತ್ರಣಕ್ಕೆ ಎಲ್ಲರೂ ಕೈಜೋಡಿಸೋಣ



## ಹಾರ್ನ್ ಮಾಡಲೇಬೇಡಿ

ಪಾದಚಾರಿಗಳ ಹಿಂದೆ ದಿಢೀರನೆ ಹಾರ್ನ್ ಮಾಡಿ ಅವರನ್ನು ಗಾಬರಿಪಡಿಸಬೇಡಿ. ಕೆಲವೇ ಗಳಿಗೆಗಳಲ್ಲಿ ಖಂಡಿತ ಅವರು ಸರಿಯುತ್ತಾರೆ. ಒಂದರ ಹಿಂದೆ ಒಂದರಂತೆ ಚಲಿಸುವಾಗಲೂ ಹಾರ್ನ್ ಮಾಡಬೇಡಿ. ಡಿಮ್-ಡಿಪ್ ದೀಪ ಬಳಸಿ.

## ತಾಳ್ಮೆ ಇರಲಿ

ಟ್ರಾಫಿಕ್ ಸಿಗ್ನಲ್‌ಗಳಲ್ಲಿ ವಾಹನಗಳು ಚಲಿಸಲು ಹಸಿರು ದೀಪದ ಸೂಚನೆ ಬಂದಾಗ ಹಿಂದಿರುವ ವಾಹನ ಸವಾರರು ಮುಂದಿರುವ ವಾಹನ ಸವಾರರರಿಗೆ ಅನವಶ್ಯಕವಾಗಿ ಹಾರ್ನ್ ಮಾಡುವ ಬದಲು ಕೆಲ ಸೆಕೆಂಡುಗಳ ಕಾಲ ತಾಳ್ಮೆಯಿಂದ ವರ್ತಿಸಬೇಕು.

## ಕಡಿಮೆ ಶಬ್ದದ ಹಾರ್ನ್, ಯಂತ್ರ ಬಳಸಿ

ವಾಹನ ಸವಾರರು ಹೆಚ್ಚಿನ ಶಬ್ದ ಮಾಡುವ ಅಥವಾ ತಮಗಿಷ್ಟ ಬಂದ ಹಾರ್ನ್‌ಗಳನ್ನು ಅಳವಡಿಸಿಕೊಳ್ಳಬಾರದು. ಬದಲಿಗೆ ಕಡಿಮೆ ಸದ್ದು ಮಾಡುವ ಹಾರ್ನ್ (ಗರಿಷ್ಠ 65 ಡೆಸಿಬೆಲ್) ಹಾಗೂ ಸರ್ಕಾರ ನಿಗದಿಪಡಿಸಿರುವ ಹಾರ್ನ್‌ಗಳನ್ನು ಅಳವಡಿಸಿಕೊಳ್ಳಬೇಕು.

## ಜನ ಜಾಗೃತಿಯಲ್ಲಿ ಪಾಲ್ಗೊಳ್ಳಿ

ಸ್ವಯಂಸೇವಾ ಸಂಘಸಂಸ್ಥೆಗಳು, ವಿದ್ಯಾರ್ಥಿಗಳು ಸರ್ಕಾರ ಹಾಗೂ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹಮ್ಮಿಕೊಳ್ಳುವ ಶಬ್ದಮಾಲಿನ್ಯ ನಿಯಂತ್ರಣ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬಹುದು.

## ಸ್ವಯಂ ನಿಯಂತ್ರಣ ಇರಲಿ

ಕೈಗಾರಿಕೆಗಳ ಮಾಲೀಕರು ಸಹ ಕಡಿಮೆ ಶಬ್ದ ಮಾಡುವ ಯಂತ್ರಗಳನ್ನು ಅಳವಡಿಸಿಕೊಳ್ಳಬೇಕು.

## ಧ್ವನಿವರ್ಧಕ ಶಬ್ದದ ಮಟ್ಟ ಕಡಿಮೆ ಮಾಡಿ

ಸಾರ್ವಜನಿಕ ಸಭೆ ಸಮಾರಂಭಗಳಲ್ಲಿ ಧ್ವನಿವರ್ಧಕದ ಶಬ್ದ ಮಿತಿಯನ್ನು ಪಾಲಿಸಿರಿ. ಅತಿಶಬ್ದ ಖಂಡಿತ ಅನಾರೋಗ್ಯ ಉಂಟು ಮಾಡುತ್ತದೆ.

## ಮಿತಿ ಮೀರಿದರೆ ದಂಡ ಸಂಗ್ರಹ

ಟ್ರಾಫಿಕ್ ಸಿಗ್ನಲ್‌ಗಳು ಹಾಗೂ ಸಂಚಾರ ದಟ್ಟಣೆ ಹೆಚ್ಚಿರುವ ಪ್ರದೇಶಗಳಲ್ಲಿ ಅನಾವಶ್ಯಕವಾಗಿ ಹಾರ್ನ್ ಮಾಡುವವರನ್ನು ಮೋಟಾರು ವಾಹನಗಳ ಕಾಯಿದೆ ಅನ್ವಯ ಆರ್‌ಟಿಓ ಅಧಿಕಾರಿಗಳು ಪತ್ತೆ ಹಚ್ಚಿ ದಂಡ ವಿಧಿಸುವ ಅಧಿಕಾರ ಪಡೆದಿರುತ್ತಾರೆ.

### ಶಬ್ದಮಿತಿಯ ಪ್ರಮಾಣ (ಡೆಸಿಬೆಲ್‌ಗಳಲ್ಲಿ)

| ಪ್ರದೇಶ | ಹಗಲು (ಗರಿಷ್ಠ) | ರಾತ್ರಿ (ಗರಿಷ್ಠ) |
|---|---|---|
| ಕೈಗಾರಿಕಾ ಪ್ರದೇಶ | 75 | 70 |
| ವಾಣಿಜ್ಯ ಪ್ರದೇಶ | 65 | 55 |
| ವಸತಿ ಪ್ರದೇಶ | 55 | 45 |
| ಶಬ್ದ ಸೂಕ್ಷ್ಮ ಪ್ರದೇಶ | 50 | 40 (ಶಾಲೆ, ಕೋರ್ಟ್ ,ಆಸ್ಪತ್ರೆ ಇತ್ಯಾದಿ) |

### ಶಬ್ದಮಾಲಿನ್ಯ (ನಿಯಂತ್ರಣ) ಕಾಯಿದೆಯ ನಿಯಮಗಳು

- ●) ಆಸ್ಪತ್ರೆ, ಶೈಕ್ಷಣಿಕ ಸಂಸ್ಥೆ, ಕೋರ್ಟ್ ಪ್ರದೇಶಗಳ ಸುತ್ತಮುತ್ತಲಿನ 100 ಮೀಟರ್ ವ್ಯಾಪ್ತಿ ಶಬ್ದರಹಿತವಾಗಿರಬೇಕು.
- ●) ಸಾರ್ವಜನಿಕ ಸ್ಥಳದಲ್ಲಿ ಧ್ವನಿವರ್ಧಕಗಳನ್ನು ಅಳವಡಿಸಿಕೊಳ್ಳಬೇಕಾದರೆ ಸಂಬಂಧಿಸಿದ ಪೊಲೀಸ್ ಅಧಿಕಾರಿಗಳಿಂದ ಲಿಖಿತರೂಪದಲ್ಲಿ ಅನುಮತಿ ಪಡೆದುಕೊಳ್ಳಬೇಕು.
- ●) ರಾತ್ರಿ 10 ಗಂಟೆಯಿಂದ ಬೆಳಗ್ಗೆ 6 ಗಂಟೆ ಸಮಯದಲ್ಲಿ ಸಾರ್ವಜನಿಕ ಪ್ರದೇಶದಲ್ಲಿ ಧ್ವನಿಯಂತ್ರಕಗಳನ್ನು ಬಳಸಬಾರದು.

## ಶಬ್ದಮಯ ದಿನಚರಿ ನಮಗೆ ಬೇಡ


ಮಾಲಿನ್ಯ ನಿಯಂತ್ರಣ ಮಂಡಳಿ ಕರ್ನಾಟಕ

**ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ**

ಪರಿಸರ ಭವನ, ಚರ್ಚ್ ಸ್ಟ್ರೀಟ್ ಬೆಂಗಳೂರು 560001

ವೆಬ್‌ಸೈಟ್: www.kspcb.gov.in

ಫೇಸ್‌ಬುಕ್ ಪುಟ: kspcbofficial

RNI No: 13348/1959. Title Code: KARBIL00285. Posted at Periodical Rate Rs. 2/-
Date of Publishing 28th of Every Month
Posted at: Bengaluru PSO, Mysore Road, Bengaluru-26 on 28th & 30th of every month (No. of Pages: 32)




If not delivered, please return to :
**THE EDITOR, Karnataka Scout & Guide**
State Headquarters, Shanthi Gruha
#39, Palace Road, Bengaluru - 560 001
Ph.: 080-22260017, 22267470
e-mail.: info@bsgkarnataka.org
www.bsgkarnataka.org

Published, Editor & Owened by: K. Gangappa Gowda belongs to: Bharat Scouts and Guides, Karnataka, No.39, Shanthi Gruha Palace Rd, Bengaluru 560 001. Published at: Bharat Scouts and Guides, Karnataka, No.39, Shanthi Gruha Palace Road, Bengaluru-560 001
Printed by: L. Lingappa at Sathyasri Printers Pvt. Ltd., 16/1, 3rd Cross, 2nd Main, Kasturiba Nagar, Mysore Road, Bengaluru-26